ಪ್ರಚೋದನೆ

ಲಂಕೇಶ್

ಜನವರಿ 4, 2012 ಪುಟ 20 ರೂ. 14/-



ಪಾಕಿಸ್ತಾನ ನಂಟು

ಹೋಡಿ ಎಂದಳು ಜಯಾ





ಜಯಾ ಕುರ್ಚಿ ಮೇಲೆ ಶಶಿ ಕಣ್ಣು



ತುಮಕೂರು KSRTCಯಲ್ಲಿ ಖೂಳರು

ಬ್ಯಾಡಗಿ ಶಾಸಕನ ಭೂ ಲೂಟಿ



ಮುಕ್ತಿಗೆ 40 ಲಕ್ಷ

ಫಲಸಂಕಥನ ಮೂಲಕದ ಶಿಕ್ಷೆಯ ರಿಹರ್ಸಲ್....

ಕನಕದಾಸರ ಹರಿಭಕ್ತಸಾರವನ್ನು ಓದುತ್ತಾ ಹೋದಂತೆ ಹರಿಮಹಿಮೆಯನ್ನು ಕೊಂಡಾಡುವ ಕನಕದಾಸರು ಮಡಿವಾದಿಗಳ ಪಂಚಸೂತಕಗಳ ಜೋಳಿಗೆಯನ್ನು ಆಗೆದುದರ ಕುರುಹು ಸಿಗುತ್ತದೆ. ಲೋಕಸಂಗತಿಗಳಲ್ಲಿ ಅನೇಕ ಬಗೆಯ ಸೂತಕಗಳನ್ನು ಜಾರಿಯಲ್ಲಿಟ್ಟ ಮಡಿವಾದಿಗಳ ಜೋಳಿಗೆಯಲ್ಲಿ ಎಂಜಲಿಗೂ ಸೂತಕದ ಪಟ್ಟವಿದೆ. ಆ ಎಂಜಲ ಸೂತಕವನ್ನು





ಉಲ್ಲೇಖಿಸುತ್ತಾ "ಎಂಜಲೆಂಜಲು ಎಂಜಲೆಂಬರು ಆ ನುಡಿ ಎಂಜಲಲ್ಲವೇ?" ಎಂದು ಕನಕದಾಸರು ಈ ಸೂತಕದ ಔಚಿತ್ಯವನ್ನು ಪ್ರಶ್ನಿಸುತ್ತಾರೆ. ಮಾತ್ರವಲ್ಲ ಅದನ್ನೇ ವಿಸ್ತರಿಸಿ ಜಗತ್ತೆಲ್ಲವೂ ಒಂದಲ್ಲ ಒಂದರ ಎಂಜಲೆಂತಲೂ, ನಿಮಗ್ಯಾಕೆ ಈ ಪರಿಯ ಎಂಜಲ ಸೂತಕದ ಆತಂಕವೆಂತಲೂ ತನ್ನ ದಾಸತ್ವದ ಮುಸುಕಿನ ನಡುವೆಯೂ ಮಡಿವಾದಿಗಳ ಕೆಣಕುವುದನ್ನು ಕನಕರು ಮರೆಯುವುದಿಲ್ಲ. ಇದು ಎಂಜಲಲ್ಲದ ವಸ್ತುವಿಲ್ಲದ ಲೋಕದಲ್ಲಿ ಕೆಲವನ್ನಷ್ಟೇ ದೂರೀಕರಿಸಿದ ಎಂಜಲಸೂತಕಿಗಳ ರಾಜಕಾರಣಕ್ಕೆ ಮಾಡಿದ ಲೇವಡಿ. ಲೋಕವನ್ನು ಸಮತರವಾಗಿ ನೋಡಬಲ್ಲ ದಾರ್ಶನಿಕ ನೋಟ. ಆದರೆ ಸಕಲರೋಗಗಳಿಗೆ ಮದ್ದು ಎಂದು ಏನೇನನ್ನೋ ಸೀಸೆಯೊಳಗೆ ತುಂಬಿ ಮಾರಾಟ ಮಾಡುವಂತೆ, ತಾವು ಆಚರಿಸುವ ಪಂಚಸೂತಕಗಳ ಪಟ್ಟಿಯಲ್ಲಿರಿಸಿಕೊಂಡ ಎಂಜಲನ್ನು, ಜಾತಿನೆಲೆಯಲ್ಲಿ ಕೀಳಾದವರ ದೇಹ, ಮನಸ್ಸು(?)ಗಳ ಕಾಯಿಲೆ ಗುಣಪಡಿಸುವ ಔಷದಿ ಎಂದು ನಂಬಿಕೆಯ ಹೆಸರಲ್ಲಿ ಹಂಚುತ್ತಿರುವ ಈ ಕಾಲದಲ್ಲಿ ಒಂದು ವೇಳೆ ಕನಕದಾಸರು ಬದುಕಿದ್ದಲ್ಲಿ ಏನೆಂದು ಕೆಣಕುತ್ತಿದ್ದರೋ? ಎಂಜಲ ಸೂತಕವನ್ನು ಕಟ್ಟಿಕೊಂಡವರೇ ಹೀಗೆ 'ತಮ್ಮ ಎಂಜ'ಲಿಗೆ ಪಡೆದುಕೊಂಡ ಪಾವಿತ್ರ್ಯದ ಈ ಹೊಸ ಪೇಟೆಂಟ್‌ಗೆ ಖಂಡಿತಾ ಅವರು ಪ್ರತಿಕ್ರಿಯಿಸದೆ ಇರುತ್ತಿರಲಿಲ್ಲ.

ಹೋಗಲಿ ಅದು ಸೂತಕವು ಹೌದೋ ಅಲ್ಲವೋ, ಎಂಜಲೂ ಸೇರಿದಂತೆ ದೇಹದಿಂದ ಹೊರಚೆಲ್ಲಿಕೊಂಡುದೆಲ್ಲವನ್ನೂ ವಿಸರ್ಜನೆ ಎಂದು ಕರೆಯುವುದು ಎಲ್ಲರಿಗೂ ಅರ್ಥವಾಗುವ ಸತ್ಯ. ಸ್ವಯಂ ತಮ್ಮದೇ ವಿಸರ್ಜಿತ ಸಂಗತಿಯನ್ನು ಮರಳಿ ಮುಟ್ಟಲು ಸಹಜವಾಗಿಯೇ ಮನುಷ್ಯರಾದವರು ಹೇಸುತ್ತಾರೆ. ಬಾಯಿಯಲ್ಲಿರುವವರೆಗೆ ಮರಳಿ ಗಂಟಲ ಕಡೆಗೆ ತಳ್ಳಿಕೊಳ್ಳುವ ಅದೇ ಎಂಜಲನ್ನು ಉಗಿದ ಮರುಕ್ಷಣದಲ್ಲಿ ಮರಳಿ ಮುಟ್ಟಲೂ ತಾವೇ ಹೇಸಿಕೊಳ್ಳುತ್ತಾರೆ. ಆದರೆ ವಿಕೃತ ಮನಸ್ಸುಗಳು ಅದನ್ನೇ ತಮ್ಮ ವಿರೋಧಿ ಧ್ವನಿಗಳ ವಿರುದ್ಧದ ಆಯುಧವಾಗಿಯೂ ಬಳಸಬಲ್ಲವೆಂಬುದು ಅಷ್ಟೇ ಸರಳವಾದ ಸತ್ಯ. ಉದಾಹರಣೆಗೆ ಪಾಳೇಗಾರಿ ಜಗತ್ತಿನಲ್ಲಿ ಮಾತು ಕೇಳದವರಿಗೆ ಅಸಹ್ಯವಾದ ಮೂತ್ರಪಾನ ಮಾಡಿಸುವ ಶಿಕ್ಷೆಗಳು ಜಾರಿಯಲ್ಲಿದ್ದ ಉಲ್ಲೇಖವನ್ನು ಕೇಳಿಸಿಕೊಂಡ ಅನುಭವ ಸಹಜವಾಗಿಯೇ ಅನೇಕರಿಗಿರಬಹುದು. ಇಡೀ ರಾಜ್ಯ ಸುದ್ದಿಮಾಡಿದ್ದಲ್ಲದೆ, ನಾಡನ್ನು ಆಳುವ ವಿಧಾನಸೌಧದಲ್ಲಿಯೂ ಸದ್ದುಮಾಡಿದ ಚೆಂಡಿಗೇರಿಯ ಮಲತಿನ್ನಿಸಿದ ಪ್ರಕರಣ ವಿಸರ್ಜನೆಯನ್ನು ಶಿಕ್ಷೆಯ ಸಾಧನವಾಗಿ ಬಳಸಿದ ಅತ್ಯಂತ ಜ್ವಲಂತ ಉದಾಹರಣೆ. ಈ ಬಲಪ್ರಯೋಗವನ್ನು ಯಾವುದೇ ಊಳಿಗಮಾನ್ಯ ಮತ್ತು ಪುರೋಹಿತಶಾಹಿ ಶಕ್ತಿಯೊಂದು ಎಲ್ಲಾ ಕಾಲಕ್ಕೂ ನಿರಂತರವಾಗಿ ನಡೆಸಿಕೊಂಡು ಹೋಗಲಾರದು. ಬಲದಮೂಲಕವೇ ಕಟ್ಟಿಕೊಂಡ ಸಾಮ್ರಾಜ್ಯವನ್ನು ಬಲದ ಮೂಲಕವೇ ಕಾಪಾಡಿಕೊಳ್ಳಲು ಸಾಧ್ಯವಿಲ್ಲ ಎಂಬ ಅರಿವು ಯಾವುದೇ ಆಳುವ ಕೇಂದ್ರಕ್ಕೆ ಸಹಜವಾಗಿಯೇ ಇರುತ್ತದೆ. ಅದಕ್ಕಾಗಿಯೇ ಅದು ಪರ್ಯಾಯ ದಾರಿಗಳನ್ನು ಕಂಡುಕೊಳ್ಳುತ್ತಾ ತನ್ನ ಸ್ಥಾನ ಗಟ್ಟಿಗೊಳಿಸಿಕೊಂಡುದನ್ನು ಖಾತ್ರಿಗೊಳಿಸಿಕೊಳ್ಳುತ್ತಾ ಇರಬೇಕಾಗುತ್ತದೆ. ಯಾಕೆಂದರೆ ಅದಕ್ಕೆ ಕಾಲದೊಂದಿಗೆ ಈಸಬೇಕಾದ ತರಬೇತಿ ಬಹಳ ಚೆನ್ನಾಗಿಯೇ ಇರುತ್ತದೆ. ಆದರಲ್ಲಿ ಪಳಗಿಹೋದ ಈ ಶಕ್ತಿ ತನ್ನನ್ನು ವಿರೋಧಿಸುವವರ ದೈಹಿಕಬಲವು ತನ್ನ ವಿರುದ್ಧ ಬಳಕೆಯಾಗದಂತೆ ಪಳಗಿಸುವ ಮತ್ತು ಪಳಗಿರುವುದನ್ನು ನವೀಕರಿಸುತ್ತಲೇ ಇರುವುದನ್ನು ಸಾಂಸ್ಥಿಕ ರೂಪದಲ್ಲಿಯೇ ಉಳಿಸಿಕೊಳ್ಳಬೇಕಾಗುತ್ತದೆ.

ಶಿಕ್ಷೆಯನ್ನು ಪಾರಿಭಾಷಿಕವಾಗಿ ಇನ್ನೇನೋ ಆಗಿ ಬದಲಾಯಿಸಬಲ್ಲ ಶಕ್ತಿ ಆಳುವವರ ಆಯುಧವೇ ಆದ ಭಾಷೆಗೆ ಖಂಡಿತಾ ಇದೆ. ಸತ್ಯವನ್ನು ಕಟ್ಟುವ ಮೂಲಕವಾಗಿ ಮತ್ತು ನೆಲೆಗೊಳಿಸುವ ಮೂಲಕವಾಗಿ ತನಗೆ ಬೇಕಾದುದನ್ನು ಈ ಭಾಷೆಯ ಮೂಲಕವಾಗಿಯೇ ಅದು ಈಡೇರಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಶಿಕ್ಷಿಸಬಲ್ಲ ಶಕ್ತಿ ತಾನು ನೀಡುವ ಶಿಕ್ಷೆಯನ್ನು ಅನುಭವಿಸಬೇಕಾದವರೇ ಯಾವುದೇ ತಡೆಯಿಲ್ಲದೆ ತಾವೇ ಆವಾಹಿಸಿಕೊಳ್ಳುವಂತೆ ಮಾಡಿದರೆ? ಯಜಮಾನ್ಯದ ವಿರುದ್ಧದ ಪ್ರತಿರೋಧವನ್ನು ಬಲಪ್ರಯೋಗಕ್ಕಿಂತಲೂ ಅತ್ಯಂತ ಯಶಸ್ವಿಯಾಗಿ ದಮನಿಸುವ ದಾರಿಕಂಡುಕೊಂಡಂತಲ್ಲವೇ? ಬಹುಶಃ ಇಟಲಿಯ ಮಹಾನ್ ಚಿಂತಕ ಅಂಟೋನಿಯೋ ಗ್ರಾಮ್ಷಿಯ ಯಜಮಾನ್ಯದ ಪರಿಕಲ್ಪನೆಯನ್ನೊಮ್ಮೆ ಮೆಲುಕು ಹಾಕಿಕೊಂಡರೆ ಈ ತಂತ್ರಗಳು ಹೆಚ್ಚು ನಿಚ್ಚಳವಾಗಿ ಅರ್ಥವಾಗುತ್ತವೆ. ಯಜಮಾನ ಕೇಂದ್ರಗಳು ತಮ್ಮ ಶಕ್ತಿಕೇಂದ್ರಗಳನ್ನು ಕಾಯ್ದುಕೊಳ್ಳಲು ಬಳಸುವ ಅತ್ಯಂತ ಪರಿಣಾಮಕಾರಿ ಆಯುಧವಾಗಿ ರೂಲ್ ಬೈ ಕನ್ಸೆಂಟ್ ಎಂಬ ಸಮ್ಮತಿಯ ಉತ್ಪಾದನೆಯ ದಾರಿಯ ಕುರುಹುಗಳು ಗೋಚರವಾಗುತ್ತವೆ. ಆಳುವ ಶಕ್ತಿಯ ನಿಯಂತ್ರಣದಲ್ಲಿರುವ ಸಂಸ್ಥೆಗಳು ಇಂತಹ ಸಮ್ಮತಿಯನ್ನು ಉತ್ಪಾದಿಸುವಲ್ಲಿ ಹಾಳತವಾಗಿ ಒದಗಿ ಬರುತ್ತವೆ. ಆಗ ಶಿಕ್ಷೆಯಾದುದನ್ನು ಅನುಭವಿಸಬೇಕಾದವರೇ ಅದನ್ನು ಹರಕೆಯಾಗಿ ಆಚರಿಸುತ್ತಾರೆ. ಆದರೆ ಹಾಗೆ ಆಚರಿಸುವಂತೆ ಆಗಬೇಕಾದರೆ ಅದನ್ನು ಶಿಕ್ಷೆಯಲ್ಲದ ಫಲ-ಪರಿಣಾಮದ ಕಥನಗಳ ಮೂಲಕ ಮುಚ್ಚಬೇಕಾಗುತ್ತದೆ. ಹೀಗೆ ಮುಚ್ಚಿದಾಗಲೇ ಯಾವುದೇ ಒತ್ತಾಯವಿಲ್ಲದೆ ಮಾನವಬಲದ ಅಗಾಧ ಸಂಚಯವೊಂದು ತಾನಾಗಿಯೇ ತೊಡಗಿಕೊಳ್ಳುವುದರಿಂದ ಆಳುವ ಶಕ್ತಿಗೆ ನಿರಾಯಾಸವಾದ ನಿರಂತರ ಯಜಮಾನಿಕೆ ದಕ್ಕುವುದು ಸಾಧ್ಯವಾಗುತ್ತದೆ.

ಮಾರಿಜಾತ್ರೆಯ ಕಥಾ ಹಿನ್ನೆಲೆಯನ್ನು ಗಮನಿಸಿದರೆ ಅಲ್ಲೊಂದು ಅನುಲೋಮವಲ್ಲದ ವಿಲೋಮ ವಿವಾಹ ಪ್ರಸಂಗ ನಡೆದುದು ಕಂಡುಬರುತ್ತದೆ. ಆ ಕಥನದೊಂದಿಗೆ ಆಚರಣೆಗೊಳ್ಳುವ ಹಾಗೆ ಮದುವೆಯಾದ ಗಂಡಿನ ಪ್ರತೀಕವಾಗಿ ಕೋಣ ಕಡಿಯಲ್ಪಡುವುದೂ, ಅವನ ಮಕ್ಕಳ ಪ್ರತೀಕವಾಗಿ ತಳವರ್ಗಕ್ಕೆ ಸೇರಿದವರ ಸಿಡಿಯಾಟವೂ ನಡೆಯುತ್ತದೆ. ಸಿಡಿಯಾಡುವುದರಲ್ಲಿ ಆಟ ಎಂಬ ಪದವಿದ್ದು ಅದು ಕ್ರೀಡೆ ಎಂಬ ಅರ್ಥ ಕೊಡುವಂತಿದೆಯಾದರೂ, ಅಲ್ಲಿರುವುದು ಪ್ರದರ್ಶನ ಸಂಗತಿಯೇ ಆಗಿದೆ. ಬೆನ್ನಿಗೆ ಗಾಳ ಸಿಕ್ಕಿಸಿಕೊಂಡು ಅಂತರಾಳದಲ್ಲಿ ತೂಗಾಡುವುದು ಶಿಕ್ಷೆಯಲ್ಲದೆ ಬೇರೇನೂ ಆಗಿರಲು ಸಾಧ್ಯವಿಲ್ಲ ಎಂದು ಎಸ್.ಜಿ. ಸಿದ್ಧರಾಮಯ್ಯ ಅವರು ಇತ್ತೀಚೆಗೆ ಹೊನ್ನಾವರದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ಹೇಳಿದ್ದು ಅತ್ಯಂತ ಸಮಂಜಸವೆನಿಸುತ್ತದೆ. ಜಾತಿಯ ಸ್ತರದಲ್ಲಿ ಅತ್ಯಂತ ತಳವರ್ಗಕ್ಕೆ ಸೇರಿದವರ ಲೈಂಗಿಕ ಅತಿಕ್ರಮಣವನ್ನು ಯಜಮಾನ ಕೇಂದ್ರವೊಂದು ಮತ್ತೆ ಮತ್ತೆ ಶಿಕ್ಷಿಸುವ ಪ್ರಸಂಗವನ್ನು ತಪ್ಪಿಸಲು (ಮತ್ತಷ್ಟು ವಿಲೋಮ ಸಂಬಂಧವನ್ನು ತಪ್ಪಿಸಿ ಅಧೀನವಾಗಿಸಿಡಲು) ಅದನ್ನು ಶಿಕ್ಷೆಯಾಚೆಗೆ ಆಚರಣೆಯಾಗಿ ಕಟ್ಟಬೇಕಾಗುತ್ತದೆ. ಆಚರಣೆಯಾಗಿ ನೆಲೆಗೊಳ್ಳಬೇಕಾದರೆ ಅದನ್ನು ಹರಕೆಯೆಂದೂ ಫಲದಾಯಕವೆಂದೂ ಸಂಕಥನಗಳನ್ನು ಹೆಣೆಯಬೇಕಾಗುತ್ತದೆ. ಹೀಗೆ ಒಮ್ಮೆ ಸ್ಥಾವರವಾಗಿ ನೆಲೆಗೊಂಡ ಶಿಕ್ಷೆ ಅದರ ಬಲಿಪಶುಗಳ ಪಾಲಿಗೆ ಶಿಕ್ಷೆ ಎನಿಸದೆ ತಮ್ಮನ್ನು ಉದ್ಧರಿಸಿಕೊಳ್ಳುವ ದಾರಿ ಎನಿಸಿಬಿಡುತ್ತದೆ. ಈ ಸಮ್ಮತಿಯ ಉತ್ಪಾದನೆಗಾಗಿ ಯಜಮಾನ್ಯಕ್ಕೆ ಒದಗಿ ಬರುವ ಉಪಯುಕ್ತ ಸಂಸ್ಥೆ ನಂಬಿಗೆಯನ್ನು ಪೋಷಿಸುವ ಧರ್ಮ ಮತ್ತು ಧಾರ್ಮಿಕ ಕೇಂದ್ರವೇ ಆಗಿದೆ.

ಈಗ ನಾಡಿನಾದ್ಯಂತ ಚರ್ಚಿತವಾಗುತ್ತಿರುವ ಮಾನವ ಸಹಜ ನಾಚುವಿಕೆ ಸಾಧ್ಯವಿರುವ ಪ್ರಜ್ಞಾವಂತ ನಾಗರಿಕರಿಗೆ ನಾಚಿಕೆ ಎನಿಸುತ್ತಿರುವ, ಆದರೆ ಕರಾವಳಿಯ ಅಭಿಮಾನ, ನಂಬಿಕೆಯಾಗಿ ಬಿಂಬಿಸಲ್ಪಟ್ಟ ಮಡೆ ಮಡೆಸ್ನಾನವೂ ಒಂದು ವಿಧದ ಶಿಕ್ಷೆಯೇ ಆಗಿದೆ. ಎಂಜಲು ಒಂದು ವಿಸರ್ಜನೆಯಾಗಿ ದೇವಾಲಯದ ಆವರಣದಲ್ಲಿರಿಸುವುದೇ ಶುದ್ಧ ಧಾರ್ಮಿಕ ಭಾವನೆಗೆ ದಿಟವಾಗಿಯೂ ಅಪಚಾರ. ಹಾಗಿದ್ದೂ ಇದನ್ನು ದೇಗುಲ ಆವರಣದೊಳಗೆ ಆಗುಗೊಳಿಸಿರುವ ಸಾಂಸ್ಥಿಕ ಶಕ್ತಿಗಳು ತಾವು ಉಂಡುಬಿಟ್ಟ ಎಲೆಗಳ ಮೇಲೆ ಹೊರಳುವಂತೆ ಮಾಡುವ ಮೂಲಕ ತಮ್ಮ ಯಜಮಾನಿಕೆಗೆ ಮತ್ತೆ ಮತ್ತೆ ಋಜುಪಡೆಯುತ್ತಿವೆ. ದೇಗುಲದ ಆವರಣದೊಳಗೆ ಪ್ರವೇಶವನ್ನೇ ನಿರಾಕರಿಸಲ್ಪಟ್ಟ ದಲಿತರ ಪಾಲಿನ ಶಿಕ್ಷೆ ಅಲ್ಲವಿದು. ಬದಲಿಗೆ ಜನಸಮುದಾಯದಲ್ಲಿ ದಲಿತರನ್ನುಳಿದಂತೆ ಬಹುಭಾಗವನ್ನು ಪ್ರತಿನಿಧಿಸುವ ಶ್ರಮಿಕವರ್ಗವಾದ ಶೂದ್ರರಿಗಾಗಿಯೇ ಇರುವ ಶಿಕ್ಷಾವಿಧಾನವಿದು. ಆದರಲ್ಲಿಯೂ ಶುದ್ಧ ಅವೈದಿಕ ನೆಲೆಯೆಂದು ಪ್ರತಿಪಾದಿತವಾಗುವ ನಾಗಸನ್ನಿಧಿಗಳಲ್ಲಿಯೇ ಇದು ಘಟಿಸುತ್ತಿರುವುದರ ಹಿಂದೆಯೂ ಸೂಕ್ಷ್ಮವಾದ ಸಾಂಸ್ಕೃತಿಕ ರಾಜಕಾರಣಗಳು ಖಂಡಿತಾ ಇವೆ. ಪ್ರಾಚೀನವಾಗಿ ಈ ಆರಾಧನಾ ಪರಂಪರೆ ತಳಮೂಲದನೆಲೆಗೆ ಸೇರಿದುದೆನ್ನಲಾಗಿದೆ. ಇಂತಹ ಹಿನ್ನೆಲೆಯ ನಾಗಾರಾಧನೆಯ ಮೇಲೆ ಪುರೋಹಿತ ಶಾಹಿ ಶಕ್ತಿಯು ಇಂದು ಹೆಚ್ಚು ಕಡಿಮೆ ಸಂಪೂರ್ಣ ಹಿಡಿತ ಸಾಧಿಸಿದೆ. ಆದರೆ ಇದು ನಿರಾಯಾಸವಾಗಿ ದಕ್ಕಿದ ಹಿಡಿತ ಆಗಿರದೇ ಇರುವ ಸಾಧ್ಯತೆಯೇ ಹೆಚ್ಚು. ಪುರಿಯ ಜಗನ್ನಾಥನಿಗಾಗಿ ಬಂಡೆದ್ದ ಬುಡಕಟ್ಟುನೆಲೆಯ ಮೂಲನಿವಾಸಿಗಳಂತೆ, ಈ ನಾಗನ ಮೇಲಿನ ಪೂಜಾಹಕ್ಕು ಸ್ಥಾಪಿಸುವ ಯತ್ನಕ್ಕೂ ಪ್ರತಿರೋಧ ಎದುರಾಗಿರಲೇಬೇಕು. ಈ ಪ್ರತಿರೋಧವನ್ನು ಊಳಿಗಮಾನ್ಯಶಕ್ತಿಯ ಸಹಕಾರದೊಂದಿಗೆ ದಮನಿಸಿದ ಪುರೋಹಿತಶಾಹಿ ಶಕ್ತಿ ಬಂಡೆದ್ದವರ ಕುಲಕ್ಕೇ ವಿಧಿಸಿದ ಸಾಮೂಹಿಕ ಶಿಕ್ಷೆಯೇ ಇದಾಗಿರಬಹುದು. ಯಾವ ಕೇಂದ್ರದ ಹಕ್ಕನ್ನು ಬಿಟ್ಟು ಕೊಡಲು ನಿರಾಕರಿಸಿದರೋ ಅದರ ಆವರಣದಲ್ಲಿಯೇ ಅಧಿಕಾರಶಕ್ತಿಯು ತಾನು ಉಂಡೆದ್ದ ಎಂಜಲೆಲೆಯ ಮೇಲೆ ಹೊರಳುವ ಅಮಾನವೀಯ ಶಿಕ್ಷೆಗೆ ಗುರಿಪಡಿಸಿರಬೇಕು. ಶಿಕ್ಷೆ ಮುಂದೆಲ್ಲಾದರೂ ಮತ್ತೊಂದು ಬಂಡಾಯಕ್ಕೆ ಕಾರಣವಾಗ ಬಹುದಾದ ಅಪಾಯವಿದೆ. ಶಿಕ್ಷೆಯನ್ನು ರಕ್ಷಾಮಾಧ್ಯಮವಾಗಿ ಸಮುದಾಯವೊಂದು ಒಪ್ಪಿಕೊಳ್ಳುವಂತಾಗುವಲ್ಲಿಯವರೆಗೆ ಯಜಮಾನ್ಯಕ್ಕೆ ಇರುವ ಆತಂಕ ದೂರಾಗಲಾರದು. ಅದಕ್ಕೆಂದೇ ಅದನ್ನು ಆವರ್ತನರೂಪದಲ್ಲಿ ನಿರಂತರ ಗೊಳಿಸಬೇಕಾಗುತ್ತದೆ. ಹಾಗಾಗಿ ಸೋತ ಜನಾಂಗದಿಂದ ಸ್ವಯಂಸ್ಫೂರ್ತಿಯ ಆಚರಣೆಯಂತೆ ಅದನ್ನು ನೆಲೆಗೊಳಿಸುವ ಮೂಲಕ ಅಂತಹ ಪ್ರತಿರೋಧ ಮುಂದೆ ಬಾರದಂತೆ ಮತ್ತು ತನ್ನ ಯಜಮಾನ್ಯಕ್ಕೆ ಒಪ್ಪಿಗೆಯ ಮುದ್ರೆ ಒತ್ತುವಂತೆ ಮಾಡಬೇಕಾಗುತ್ತದೆ. ಯಜಮಾನ್ಯವು ತನ್ನ ಗೆಲುವನ್ನು ಆಚರಿಸಲು ಸೋತವರನ್ನೇ ಬಳಸುವಾಗಲೂ ಅದು ಅವರ ಅರಿವಿನ ಭಾಗವಾಗದಂತೆ ಜಾಗರೂಕವಾಗಿರಬೇಕಾಗುತ್ತದೆ. ಇದಕ್ಕೆಂದೇ ಪರ್ಯಾಯ ಪೋಷಾಕು ಬೇಕಾಗುತ್ತದೆ. ಆ ಹೊಸ ಪೋಷಾಕಿನಲ್ಲಿ ಶಿಕ್ಷೆಯನ್ನು ಹರಕೆಯಾಗಿ ಸ್ಥಾಪಿಸಲು ರೋಗ ನಿವಾರಣೆಯ ಅಸಂಗತ ಸಂಕಥನವನ್ನು ಹೆಣೆಯ ಬೇಕಾಗುತ್ತದೆ. ಹೀಗೆ ಇಡಿಯ ಮಡೆಸ್ನಾನ ಎಂಬುದು ಸಾರ್ವಕಾಲಿಕವಾಗಿ ಶೂದ್ರ ವರ್ಗದ ಮೇಲಿನ ವಿಜಯವನ್ನು ದೇಗುಲದ ಆವರಣದಲ್ಲಿಯೇ ಆಚರಿಸಲು ಆ ಸಮುದಾಯ ವನ್ನೇ ಹರಕೆಯ ಹಾದಿಗೆ ಹಚ್ಚಿದ, ಫಲಸಂಕಥನ ಮೂಲಕದ ಶಿಕ್ಷೆಯ ರಿಹರ್ಸಲ್ ಅಲ್ಲದೆ ಮತ್ತೇನೂ ಅಲ್ಲ ಎನ್ನುವುದು ಹೆಚ್ಚು ಸೂಕ್ತವೆನಿಸುತ್ತದೆ. ಎಂಜಲು ಇಲ್ಲಿ ಆಳುವವರ ಅಧಿಕಾರದ ಲಾಂಛನವಲ್ಲದೆ ಮತ್ತೇನೂ ಅಲ್ಲ, ಹೀಗೆ ಹರಕೆ ಹೇಳಿ ಹೊರಳುವವರ ಸಮುದಾಯ ಹಿನ್ನೆಲೆಗಳ ಬಾಹುಳ್ಯವೂ ಈ ಮೇಲಣ ತರ್ಕಕ್ಕೆ ಪುರಾವೆ ಒದಗಿಸುತ್ತದೆ ಎಂಬುದರಲ್ಲಿಯೂ ಯಾವುದೇ ಸಂಶಯವಿಲ್ಲ.

"ಈಗ ನಾಡಿನಾದ್ಯಂತ ಚರ್ಚಿತವಾಗುತ್ತಿರುವ ಮಾನವ ಸಹಜ ನಾಚುವಿಕೆ ಸಾಧ್ಯವಿರುವ ಪ್ರಜ್ಞಾವಂತ ನಾಗರಿಕರಿಗೆ ನಾಚಿಕೆ ಎನಿಸುತ್ತಿರುವ, ಆದರೆ ಕರಾವಳಿಯ ಅಭಿಮಾನ, ನಂಬಿಕೆಯಾಗಿ ಬಿಂಬಿಸಲ್ಪಟ್ಟ ಮಡೆಸ್ನಾನವೂ ಒಂದು ವಿಧದ ಶಿಕ್ಷೆಯೇ ಆಗಿದೆ. ಎಂಜಲು ಒಂದು ವಿಸರ್ಜನೆಯಾಗಿ ದೇವಾಲಯದ ಆವರಣದಲ್ಲಿರಿಸುವುದೇ ಶುದ್ಧ ಧಾರ್ಮಿಕ ಭಾವನೆಗೆ ದಿಟವಾಗಿಯೂ ಅಪಚಾರ. ಹಾಗಿದ್ದೂ ಇದನ್ನು ದೇಗುಲ ಆವರಣದೊಳಗೆ ಆಗುಗೊಳಿಸಿರುವ ಸಾಂಸ್ಥಿಕ ಶಕ್ತಿಗಳು ತಾವು ಉಂಡುಬಿಟ್ಟ ಎಲೆಗಳ ಮೇಲೆ ಹೊರಳುವಂತೆ ಮಾಡುವ ಮೂಲಕ ತಮ್ಮ ಯಜಮಾನಿಕೆಗೆ ಮತ್ತೆ ಮತ್ತೆ ಋಜುಪಡೆಯುತ್ತಿವೆ."

• ಹೆಚ್.ಜಯಪ್ರಕಾಶ್ ಶೆಟ್ಟಿ
ಕುಂದಾಪುರ

ಕಾರಣಾಂತರಗಳಿಂದ ಈ ವಾರ ಹಾಗೂ ಮುಂದಿನ ವಾರ 'ಚಾರ್ವಾಕ' ಪ್ರಕಟಿಸುತ್ತಿಲ್ಲ.
–ಸಂ

ಫೈಜ್ ಎಂಬ ಅದ್ಭುತ ಕವಿ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ


ಫೈಜ್ ಅಹಮದ್ ಫೈಜ್ ಎಂಬ ಪ್ರಖ್ಯಾತ ಪಾಕಿಸ್ತಾನಿ ಬರಹಗಾರನ ಜನ್ಮ ಶತಾಬ್ದಿಯನ್ನು ಈ ವರ್ಷ ಜಗತ್ತಿನ ವಿವಿಧ ಕಡೆ ಆಚರಿಸಲಾಯಿತು. ವಿಶ್ವಸಂಸ್ಥೆ ಕೂಡ 2011ಅನ್ನು ಫೈಜ್ ವರ್ಷ ಎಂದು ಘೋಷಿಸಿತು. ಇದಕ್ಕೆಲ್ಲ ಕಾರಣವಿತ್ತು, ಅದು ಫೈಜ್ ಅವರು ವಿಶ್ವದಲ್ಲಿ ಪ್ರೀತಿ, ನೆಮ್ಮದಿ, ಮನುಷ್ಯತ್ವ ಮತ್ತು ಸಮಾನತೆಗಾಗಿ ಆಶಿಸಿ ಅದನ್ನೇ ಕುರಿತು ಬರೆದವರು.

ಜಗತ್ತಿನಾದ್ಯಂತ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ಫೈಜ್ ಅವರ ಬಗ್ಗೆ ನಮ್ಮ ಕನ್ನಡಿಗರಿಗೆ ಅಷ್ಟು ಗೊತ್ತಿಲ್ಲ. ಇನ್ನು ಫೈಜ್ ಬರೆದಿದ್ದ ಒಂದೆರಡು ಕವನಗಳನ್ನು ಹೊರತುಪಡಿಸಿದರೆ ಹೆಚ್ಚಿನವನ್ನು ಯಾರೂ ಕನ್ನಡಕ್ಕೆ ತರುವ ಪ್ರಯತ್ನ ಮಾಡಿಲ್ಲ. ಆ ಕೊರತೆಯನ್ನು ನೀಗಿಸಲೆಂದೇ ಗೆಳತಿ ಮತ್ತು ಕವಿಯತ್ರಿ ಬಾಗೇಶ್ರೀ ಫೈಜ್ ಅವರ ಕವನಗಳನ್ನು ಈ ವರ್ಷದ ಆರಂಭದಲ್ಲಿ ಅನುವಾದಿಸಲು ಶುರು ಮಾಡಿದರು. ಆ ಕೆಲಸದಲ್ಲಿ ಬಾಗೇಶ್ರೀ ಅದೆಷ್ಟು ಮಗ್ನರಾದರೆಂದರೆ ಆರಂಭದಲ್ಲಿ ಹತ್ತೋ ಹದಿನೈದೋ ಕವಿತೆಗಳನ್ನು ಅನುವಾದಿಸಲು ಹೊರಟವರು ಕೊನೆಗೆ ನೂರಕ್ಕೂ ಹೆಚ್ಚು ಫೈಜ್ ಅವರ ಕವನಗಳನ್ನು ಸುಂದರವಾಗಿ ಅನುವಾದಿಸಿ ಮುಗಿಸಿದರು.

ಈಗ ಅದನ್ನು ನಮ್ಮ 'ಲಂಕೇಶ್ ಪ್ರಕಾಶನ' ಪ್ರಕಟಿಸಲು ಸಜ್ಜಾಗುತ್ತಿದೆ. ಆ ಪುಸ್ತಕಕ್ಕೆ ಮಿತ್ರ ನಟರಾಜ್ ಅವರು ಮುನ್ನುಡಿಯನ್ನು ಬರೆದಿದ್ದರೆ, ಮತ್ತೋರ್ವ ಗೆಳೆಯ ರಹಮತ್ ತರೀಕೆರೆ ಅವರು ಬೆನ್ನುಡಿ ಬರೆಯುತ್ತಿದ್ದಾರೆ. ಹಾಗೆಯೇ ಇನ್ನೋರ್ವ ಕಲಾವಿದ ಮಿತ್ರ ಕವನಗಳಿಗೆ ರೇಖಾ ಚಿತ್ರಗಳನ್ನು ಬಿಡಿಸಲು ಒಪ್ಪಿದ್ದಾರೆ.

ಇದೆಲ್ಲದರ ಮಧ್ಯೆ ಫೈಜ್ ಅವರ ಕವನಗಳನ್ನು ಪ್ರಕಟಿಸಲು ಅನುಮತಿ ಪಡೆಯಲು ಹೊರಟೆ. ಆದರೆ 1984ರಲ್ಲಿ ಪಾಕಿಸ್ತಾನದಲ್ಲಿ ತೀರಿಕೊಂಡ ಫೈಜ್ ಅವರ ಸಂಬಂಧಿಕರನ್ನು ಹುಡುಕುವುದು ಹೇಗೆ? ನಮ್ಮ ಶಿವಸುಂದರ್ ಇಂಟರ್‌ನೆಟ್ ಅನ್ನು ಜಾಲಾಡಿದಾಗ ಫೈಜ್ ಸೆಂಟಿನಿಯಲ್ ಎಂಬ ಒಂದು ಸೈಟ್ ಮತ್ತು ಫೈಜ್ ಘರ್ ಎಂಬ ಮತ್ತೊಂದು ಸೈಟ್ ಸಿಕ್ಕಿತು. ಅವೆರಡಕ್ಕೂ ನಮ್ಮ ಪ್ರಕಾಶನದ ಬಗ್ಗೆ ಒಂದಿಷ್ಟು ಬರೆದು ಫೈಜ್ ಅವರ ಕವನಗಳನ್ನು ಪ್ರಕಟಿಸಬಹುದೇ ಎಂದು ಕೋರಿದೆ. ಕೆಲ ವಾರಗಳಾದರೂ ಯಾವ ಉತ್ತರವೂ ಎರಡೂ ಕಡೆಯಿಂದ ಬರಲಿಲ್ಲ. ಆಗ ಫೈಜ್ ಅವರ ಜನ್ಮ ಶತಾಬ್ಧಿ ಕಾರ್ಯಕ್ರಮಗಳ ಜವಾಬ್ದಾರಿ ಹೊತ್ತಿರುವ ರಹೀದ್ ಎಂಬುವವರ ಫೋನ್ ನಂಬರ್ ಸಿಕ್ಕಿತು. ಅವರಿಗೆ ಫೋನ್ ಮಾಡಿದಾಗ ರಹೀದ್ ಅವರು "ಕನ್ನಡದಲ್ಲಿ ಫೈಜ್ ಅವರ ಕವನಗಳನ್ನು ತರುತ್ತೀರಾ? ಎಷ್ಟು ಆನಂದವಾಗುತ್ತಿದೆ. ಫೈಜ್ ಸಾಹೇಬರ ಮಗಳ ಈ ಮೇಲ್ ಅಡ್ರೆಸ್ ಕೊಡುತ್ತೇನೆ. ಅವರನ್ನು ಸಂಪರ್ಕಿಸಿ ಅನುಮತಿಗಾಗಿ ಕೇಳಿ. ಅವರು ಖಂಡಿತವಾಗಿಯೂ ಒಪ್ಪುತ್ತಾರೆ" ಎಂದರು.

ಫೈಜ್ ಅವರ ಮೊದಲ ಮಗಳ ಹೆಸರು ಸಲೀಮಾ ಹಶ್ಮಿ. ಪಾಕಿಸ್ತಾನದ ಹಿರಿಯ ಕಲಾವಿದೆಯಾದ ಸಲೀಮಾ ಅವರು ಮಾನವಹಕ್ಕುಗಳ ಹೋರಾಟಗಾರ್ತಿಯೂ ಹೌದು. ಅಷ್ಟೇ ಮುಖ್ಯವಾಗಿ ಆಕೆ ಭಾರತ ಮತ್ತು ಪಾಕಿಸ್ತಾನದ ನಡುವೆ ಸೌಹಾರ್ದತೆಗಾಗಿ ಬಹಳ ವರ್ಷಗಳಿಂದ ಶ್ರಮಿಸುತ್ತಿದ್ದಾರೆ. ಪಾಕಿಸ್ತಾನದ ಮತ್ತೋರ್ವ ಮಾನವಹಕ್ಕು ಹೋರಾಟಗಾರ್ತಿಯಾದ ಅಸ್ಮಾ ಜಹಾಂಗೀರ್ ಅವರ ಜೊತೆಗೂಡಿ ಸಲೀಮಾ ಅವರು ಭಾರತ ಮತ್ತು ಪಾಕಿಸ್ತಾನಗಳು ಅಣುಬಾಂಬುಗಳನ್ನು ಸ್ಫೋಟಿಸಿದಾಗ, ಎರಡೂ ದೇಶಗಳ ಈ ಕೃತ್ಯವನ್ನು ಖಂಡಿಸಿದ್ದರು. ಹಾಗೆಯೇ ಮುಂಬೈ ಮೇಲೆ ಪಾಕಿಸ್ತಾನಿ ಮೂಲದ ಭಯೋತ್ಪಾದಕರು ದಾಳಿ ಮಾಡಿದಾಗಲೂ ಅದನ್ನು ಅಷ್ಟೇ ತೀವ್ರವಾಗಿ ಖಂಡಿಸಿದ್ದರು.



ರಹೀದ್ ಅವರು ಕೊಟ್ಟ ಸಲೀಮಾ ಅವರ ಈ ಮೇಲ್ ಅಡ್ರೆಸ್ಸಿಗೆ ಒಂದು ಮೆಸೇಜನ್ನು ಕಳುಹಿಸಿದೆ. ಆದರೆ ಮೂರ್‍ನಾಲ್ಕು ದಿನಗಳಾದರೂ ಅವರಿಂದ ಪ್ರತ್ಯುತ್ತರ ಬರಲಿಲ್ಲ. ಇದೇನಪ್ಪ ಸಮಸ್ಯೆ ಎಂದು ಯೋಚಿಸುತ್ತಿರುವಾಗಲೇ ಸಲೀಮಾ ಅವರಿಂದ ಫೋನ್ ಬಂತು. "ಸಾರಿ ಗೌರಿ, ನಾನು ಕಳೆದ ಎರಡು ವಾರಗಳಿಂದ ಕಾಶ್ಮೀರದಲ್ಲಿದ್ದೆ. ಅಲ್ಲಿ ಫೋನ್ ಸಂಪರ್ಕವಾಗಲಿ, ನೆಟ್ ಸಂಪರ್ಕವಾಗಲಿ ಇರಲಿಲ್ಲ. ಯಾವುದೋ ಮರುಭೂಮಿಗೆ ಹೋಗಿದ್ದೇನೆ ಅನ್ನಿಸುತ್ತಿತ್ತು. ಆದರೆ ಅಲ್ಲಿನ ಜನರಂತೂ ಎಂದಿನಂತೆ ಪ್ರೀತಿ ಮತ್ತು ಮಮತೆಯನ್ನೇ ನನಗೆ ತೋರಿದರು" ಎಂದರು.

ನಾನು ಫೈಜ್ ಅವರ ಕವನಗಳ ಕನ್ನಡ ಅನುವಾದಗಳ ಬಗ್ಗೆ ಹೇಳಿ "ಅದನ್ನು 2011ರಲ್ಲೇ ಪ್ರಕಟಿಸುವ ಆಶೆ ನಮ್ಮದಾಗಿತ್ತು. ಆದರೆ ವಿವಿಧ ಕಾರಣಗಳಿಗೆ ಅದು ಸಾಧ್ಯವಾಗಲಿಲ್ಲ. ಈಗ ಪ್ರಕಟಿಸಬೇಕೆಂದಿದ್ದೇವೆ. ಅನುಮತಿಯನ್ನು ಕೊಡುವಿರಾ?" ಎಂದೆ.

"ನಾನು ಫೈಜ್ ಅವರ ಮಗಳಾಗಿದ್ದರೂ ಅವರ ಕವನಗಳ ಮೇಲಿನ ಹಕ್ಕುಗಳನ್ನು ಫೈಜ್ ಟ್ರಸ್ಟ್‌ಗೆ ಕೊಟ್ಟಿದ್ದೇವೆ. ಆ ಟ್ರಸ್ಟ್‌ಗೆ ನಿನ್ನ ಬಗ್ಗೆ ಹೇಳುತ್ತೇನೆ. ಯಾವುದೇ ಸಮಸ್ಯೆ ಇರುವುದಿಲ್ಲ. ಕರ್ನಾಟಕದಲ್ಲಿ, ಕನ್ನಡದಲ್ಲಿ ಫೈಜ್ ಅವರ ಕವನಗಳನ್ನು ಒಬ್ಬರು ಅಭಿಮಾನದಿಂದ ಅನುವಾದಿಸಿದ್ದಾರೆ, ಅದಕ್ಕೆ ಹಿರಿಯ ಲೇಖಕರು ಮುನ್ನುಡಿ ಮತ್ತು ಬೆನ್ನುಡಿ ಬರೆದಿದ್ದಾರೆ, ನೀನು ಅದನ್ನು ಪ್ರಕಟಿಸಲು ಇಷ್ಟ ಪಟ್ಟಿದ್ದೀಯಾ ಎಂಬ ಸಂಗತಿಯೆ ನಮಗೆ ಸಂತೋಷ ಕೊಡುವಂತಹ ವಿಚಾರ" ಎಂದರು. ಅವರೆಷ್ಟು ಪ್ರೀತಿಯಿಂದ, ಅಕ್ಕರೆಯಿಂದ ಮಾತನಾಡಿದರೆಂದರೆ ಅವರು ಬಹಳ ವರ್ಷಗಳ ನನ್ನ ಪರಿಚಿತರು ಎನ್ನಿಸುವಂತಿತ್ತು.

ತಮ್ಮ ತಂದೆ ಫೈಜ್ ಬಗ್ಗೆ ಸಲೀಮಾ ಅವರು ಬರೆದಿರುವ ಲೇಖನವೊಂದರಲ್ಲಿ ಫೈಜ್ ಮತ್ತು ಚಿಲಿಯ ಖ್ಯಾತ ಕವಿ ಪಾಬ್ಲೊ ನೆರೂಡಾ ಭೇಟಿ ಪ್ರಸಂಗ ತುಂಬಾ ಚೆನ್ನಾಗಿದೆ. ಅದು ಹೀಗಿದೆ:

"ನಾವೆಲ್ಲ ಮಾಸ್ಕೋಗೆ ಹೋದೆವು. ಬ್ಲ್ಯಾಕ್ ಸೀ ಹತ್ತಿರವಿದ್ದ ಹೋಟೆಲ್ ಅನ್ನು ಕವಿಗಳಿಗೆ, ಬರಹಗಾರರಿಗೆ, ಸಂಗೀತಗಾರರಿಗೆ ಮೀಸಲಿಡಲಾಗಿತ್ತು. ಅಲ್ಲಿಗೆ ಚಿಲಿಯ ಖ್ಯಾತ ಕವಿ ಪಾಬ್ಲೋ ನೆರೂಡಾ ಮತ್ತು ಅವರ ಪತ್ನಿ ಮಟಿಲ್ಡಾ ಅವರು ಕೂಡ ಬಂದಿದ್ದರು. ತಾವು ಉಳಿದುಕೊಂಡಿರುವ ಹೋಟೆಲ್‌ನಲ್ಲಿ ನೆರೂಡಾ ಕೂಡ ಇದ್ದ ವಿಷಯ ಕೇಳಿ ಅಬ್ಬಾನಿಗೆ ತುಂಬಾ ಸಂತೋಷವಾಯಿತು. ನಾವೆಲ್ಲ ಬ್ಲ್ಯಾಕ್ ಸೀ ಪಕ್ಕದ ಬೀಚಿನಲ್ಲಿ ಸೇರುತ್ತಿದ್ದೆವು. ಒಂದು ದಿನ ನೆರೂಡಾ ಅವರು ಅಬ್ಬಾನಿಗಾಗಿ ವಿಶೇಷ ಔತಣಕೂಟವನ್ನು ಏರ್ಪಡಿಸಿದರು. ಅವತ್ತು ಅಬ್ಬಾ, ನೆರೂಡಾ, ಮಟಿಲ್ಡಾ ಮತ್ತು ನಾನು ಮಾತ್ರ ಇದ್ದೆವು. ನಮ್ಮೊಂದಿಗೆ ಅನುವಾದಕರೂ ಇದ್ದರು. ಆ ಸಂಜೆ ಅಬ್ಬಾ ಮತ್ತು ನೆರೂಡಾ ಅವರು ಒಬ್ಬರಿಗೊಬ್ಬರು ತಮ್ಮ ಕವನಗಳನ್ನು ಓದಿದರು. ನೆರೂಡಾ ತಮ್ಮ ಕವನವನ್ನು ಓದುತ್ತಿದ್ದಂತೆ ಅದನ್ನು ಅನುವಾದಕರು ಸ್ಪಾನಿಷ್‌ನಿಂದ ಇಂಗ್ಲಿಷ್‌ಗೆ ಮತ್ತು ಇಂಗ್ಲಿಷ್‌ನಿಂದ ಉರ್ದುಗೆ ಅನುವಾದ ಮಾಡುತ್ತಿದ್ದರು. ಹಾಗೆಯೇ ಅಬ್ಬಾ ತಮ್ಮ ಕವನವನ್ನು ಓದಿದನಂತರ ಅದನ್ನು ಉರ್ದುವಿನಿಂದ ಇಂಗ್ಲಿಷ್‌ಗೆ ಮತ್ತು ಇಂಗ್ಲಿಷ್‌ನಿಂದ ಸ್ಪಾನಿಷ್‌ಗೆ ಅನುವಾದಿಸುತ್ತಿದ್ದರು. ಆದರೆ ಸಂಜೆ ಕಳೆಯುತ್ತಿದ್ದಂತೆ ನೆರೂಡಾ ಮತ್ತು ಅಬ್ಬಾ ಇಬ್ಬರೂ ಅನುವಾದಕರನ್ನು ಕಳುಹಿಸಿದರು. ಆನಂತರ ಅವರಿಬ್ಬರು ತಮ್ಮ ಕವನಗಳನ್ನು ಓದಲಾರಂಭಿಸಿದರು. ಅವರಿಗೆ ಪರಸ್ಪರರ ಭಾಷೆ ಗೊತ್ತಿಲ್ಲದಿದ್ದರೂ ಇಬ್ಬರಿಗೂ ಪರಸ್ಪರರ ಕವನ ಅರ್ಥವಾಗುತ್ತಿತ್ತು."

ಕಾವ್ಯದ ಶಕ್ತಿಯೇ ಅಂತಹದ್ದೇನೋ ಅಲ್ಲವೇ?

ಬಾಗೇಶ್ರೀ ಅವರು ಫೈಜ್ ಅವರ ಕವನಗಳನ್ನು ಅದೆಷ್ಟು ಚೆನ್ನಾಗಿ ಅನುವಾದಿಸಿದ್ದಾರೆಂದರೆ ನಮ್ಮ ಶಿವಸುಂದರ್ ಅವರು ಅದನ್ನು ಪ್ರೂಫ್ ನೋಡುವ ನೆಪದಲ್ಲಿ ಪಡೆದಿದ್ದಾರೆ. ಆದರೆ ಅವರು ಅದೆಷ್ಟು ಪ್ರೂಫ್ ಹಾಕಿದ್ದಾರೋ ಗೊತ್ತಿಲ್ಲ, ಆದರೆ ಕವನ ಕೇಳಿಸಿಕೊಳ್ಳಲು ಯಾರಾದರೂ ಕಿಂಚಿತ್ತು ಆಸಕ್ತಿ ತೋರಿದರೆ ಸಾಕು, ಅದನ್ನು ತಮ್ಮ ಬ್ಯಾಗಿನಿಂದ ಹೊರತೆಗೆದು ಕವನಗಳನ್ನು ಓದಲಾರಂಭಿಸುತ್ತಾರೆ.

ಫೈಜ್ ಟ್ರಸ್ಟ್‌ನೊಂದಿಗೆ ಸದ್ಯದಲ್ಲೇ ಒಂದು ಒಪ್ಪಂದ ಮಾಡಿಕೊಂಡು ಈ ಪ್ರಖ್ಯಾತ ಕವಿಯನ್ನು ಕನ್ನಡಿಗರಿಗೆ ಪರಿಚಯಿಸಲಿದ್ದೇವೆ. ಅಲ್ಲಿಯ ತನಕ ನಿಮಗಾಗಿ ಇಲ್ಲಿ ಕೆಲವು ಕವನಗಳನ್ನು ನೀಡಿದ್ದೇನೆ....

ಫೈಜ್ ಕವನಗಳು

ಕೊನೆಯ ಆಸೆ

ಸಂವಾದಗಳಲ್ಲಿ ನಂಬಿಕೆ ನನಗಿಲ್ಲ
ಆದರೂ ಒಂದು ಆಸೆ...
ಕಥಕ್ಕೆ ಇತಿಶ್ರೀ ಹಾಡಿ
ಹಿಂದಿರುಗುವ ಹಾದಿ ಇಲ್ಲದ ಲೋಕಕ್ಕೆ
ಹೊರಡುವ ಮುನ್ನ
ಸಿಗಲಿ ನನಗೆ ಒಂದು ಬಾರಿ
ನಿನ್ನ ಕದ ತಟ್ಟಿ ಕೂಗಿ ಹೇಳುವ ಅವಕಾಶ.
"ನಿನ್ನ ಸಣ್ಣ ಬೇಜಾರು, ಗಹನ ದುಃಖ
ಹಂಚಿಕೊಳ್ಳಲು ಒಬ್ಬ ಬೇಕನಿಸಿದರೆ
ನಾನು ಎಲ್ಲಿದ್ದರೂ ಎಂದೆಂದೂ ಹಾಜರು.
ಬೇಡವಾದರೆ ಹೇಳಿಬಿಡು.
ತಿರುಗಿ ನೋಡದೆ ಹೊರಟೇ ಬಿಡುತ್ತೇನೆ."

ನಿರಾಶೆ

ನಿನ್ನ ಸುಳಿವಿಲ್ಲ, ನಿನ್ನ ನೆರಳ ಸುಳಿವಿಲ್ಲ, ನಿನ್ನ ಸುದ್ದಿಯ
ಸುಳಿವಿಲ್ಲ
ನಿರೀಕ್ಷೆಗೆ ಕಾರಣವೇ ಇಲ್ಲ, ಆದರೂ ಮನದುಂಬಿ
ಕಾಡಿದೆ ಬಯಕೆ
ಹಂಬಲಿಸುವ ಕಣ್ಣ ಆಳ ಅಳೆಯಬೇಡ, ನೋವ ಬಣ್ಣ
ಕೇಳಬೇಡ
ಸುಡುವ ಕುಂದಿದ ಈ ಹೃದಯಕ್ಕೆ ಇಂದು ಪ್ರಶ್ನೆಗಳ
ಕಾಟ ಬೇಡ

ಒಮ್ಮೊಮ್ಮೆ

ಅಳಿಸಿ ಹೋದ ಚಿತ್ರಗಳು ಒಮ್ಮೊಮ್ಮೆ
ಮುಖ್ಯವಾಗಿ ಮತ್ತೆ ಮೂಡುವುದುಂಟು
ಕಣ್ಣು, ಹೃದಯಗಳಿಗೆ ಕಂಡೂ ಕಾಣದಂತೆ ಕೆಲವು
ಹತ್ತಿರ, ಹಲವು ಬಲು ದೂರ

ಪ್ರೀತಿ ಮಾತು ಮಿಲನ ಸುಖದ ಸಾಧ್ಯತೆಗಳ ಝಲಕು
ತೋರಿ ಹೊರಡುವ ಮುನ್ನ
ಬಯಕೆ ತೀರದ ಬೆಂಗಾಡಲ್ಲಿ ಒಮ್ಮೊಮ್ಮೆ ಸಹಸ್ರ
ಸರಕ ಬಂಡಿ ತಂಗುವುದುಂಟು

ಅವಳ ಕೂಡಿದಾಗಲೆಲ್ಲ ಮತ್ತೆ ಪ್ರೀತಿ ಹುಟ್ಟಿ
ಹರಿಯುವುದು ಹೊಚ್ಚ ಹೊಸದೆಂಬಂತೆ
ಇನ್ನೆಲ್ಲಿ ಶಾಂತಿ ಈ ಎದೆಗೆ, ಈ ನೋಟಕೆ? ಎಲ್ಲಿ ಕೊನೆ
ಈ ಕೊರಗು, ಈ ಸುಖಕೆ?

ಹೊರಲಾರದೆ ಬಳಲಿದ್ದೇನೆ ನನಗೊಬ್ಬನಿಗೆ ಮೀಸಲಾದ
ಈ ಸುಖದ ಭಾರ,
ಗೆಳೆಯರ ಜೊತೆಗೂಡಿ ಜಗದೆಲ್ಲ ದುಃಖದ ಮೊತ್ತ
ಹೊರುವುದು ಎಷ್ಟೋ ಸುಲಭ.

ಈ ಸಂಜೆ ನೀತಿ ಹೇಳುವ ಮಂದಿ, ಸ್ವೇಚ್ಛೆಯಲಿ
ಬದುಕುವ ಮಂದಿ ಕಲಸಿ ಹೋಗಿದ್ದಾರೆ
ಅವರು ಈಗಷ್ಟೇ ಗಡಂಗಿನಿಂದ ಹೊರಟಿದ್ದಾರೆ. ಇವರು
ಈಗಷ್ಟೇ ಒಳಗೆ ಕಾಲಿಟ್ಟಿದ್ದಾರೆ.

ಋತುಚರ್ಯೆ

ಈ ಚೆಂದದ ಋತುವಿನಲ್ಲಿ ಕತ್ತಲಾವರಿಸುವುದು
ಅಲೆಅಲೆಯಾಗಿ ಮದಿರೆ ಎರೆದಂತೆ
ಬೆಳಕು ಮೂಡುವುದು ಸುವಾಸನೆಯ ಕಡುಗೆಂಪು
ಗುಲಾಬಿ ಮೆಲ್ಲ ಅರಳಿದಂತೆ
ಈಗ ಖಾಲಿ ಬಟ್ಟಲು ಹೊತ್ತು ದಿಕ್ಕೆಟ್ಟು ಕೂರುವುದು
ಸಲ್ಲ, ಕಲಿಯಿರಿ ಋತುಚರ್ಯೆ.
ಹೃದಯದ ತುಂಬ ತುಂಬಿಕೊಳ್ಳಿ ಹಾತೊರಿಕೆ, ಕಣ್ಣ
ತುಂಬ ತುಂಬಿಕೊಳ್ಳಿ ರಕ್ತಕಣ್ಣೀರು.

ಎಚ್ಚರ

ಇರುಳ ಗೋಡೆಯ ಮೇಲೆ ಮೂಡಿದೆ ನನ್ನವಳ
ಪ್ರತಿಬಿಂಬ
ಮತ್ತೆ ಹೃದಯಗನ್ನಡಿಯಿಂದ ಜಿನುಗುತ್ತಿದೆ ಹನಿಹನಿ
ರಕ್ತ
ಮತ್ತೆ ಈ ರಾತ್ರಿ ಎಚ್ಚರದ ಪ್ರೀತಿ ಹೊತ್ತ ಕಣ್ಣು
ಮಂಜಾಗಿದೆ
ಬಯಕೆಯ ಬಾಯ್ಮುಚ್ಚಿ ಮುಚ್ಚಿಟ್ಟ ದೇಹ ಸಿಡಿದು
ಚೂರಾಗಿದೆ.

ಹೆದ್ದಾರಿ

ಬಸವಳಿದ ಹೆದ್ದಾರಿ ದೂರದ ಶೂನ್ಯದಲ್ಲಿ
ದೃಷ್ಟಿ ನೆಟ್ಟು ಬಿದ್ದಿದೆ ಹಾಗೆ ಸುಮ್ಮನೆ.
ಕೊರೆವ ಥಂಡಿ ಧೂಳಿನೆದೆಯ ಮೇಲೆ
ಹರಡಿದೆ ಬೂದು ಬಣ್ಣದ ವಿಲಕ್ಷಣ ಚೆಲುವು.

ಯಾವುದೋ ಒಬ್ಬಂಟಿ ಹೆಂಗಸು
ಇನಿಯನ ಕೂಡುವ ಗಳಿಗೆಯ ನೆನೆನೆನೆದು
ರೋಮ ರೋಮದಲಿ ರೋಮಾಂಚನ ತುಂಬಿ
ಅಂಗಾಂಗವೆಲ್ಲ ಸೋತು ನಿಟ್ಟುಸಿರು ಬಿಟ್ಟ ಹಾಗೆ

ಅನಂತ ಕ್ಷಣ

ಬೆಳಕಿನಂಚು ಸಂಜೆ ಬೆರಳ ಮುಟ್ಟಿ
ಕಾಲ ಕೂಡಿ ಬಂದ ಈ ಹೊತ್ತು
ಬೆಳಗು ಬೈಗಲ್ಲದ ಇಂದು ನಾಳೆಯಲ್ಲದ
ಇಗೋ ಅಮರ, ಇಗೋ ಕ್ಷಣಿಕ ಈ ಹೊತ್ತು
ತುಟಿಯ ಹೊಳಪು, ಬಾಹುಗಳ ಬಂಧ...
ಈ ಮಿಲನ ಸತ್ಯವೂ ಅಲ್ಲ ಮಿಥ್ಯವೂ ಅಲ್ಲ
ಸುಳ್ಳು ಸೊಟ್ಟು ಅಳು ಆಪಾದನೆ ಯಾತಕ್ಕೆ
ನಿನ್ನ ಸಾಗರದಂಥ ಕಣ್ಣಲ್ಲಿ
ಸಂಜೆಯ ಸೂರ್ಯ ಮುಳುಗುವಾಗ
ಸಂಸಾರಸ್ಥರೆಲ್ಲ ಸುಖನಿದ್ರೆಯಲ್ಲಿ ಮುಳುಗಿರಲಿ
ದಾರಿಹೋಕರು ಅವರ ದಾರಿ ಹಿಡಿದು ಹೋಗಲಿ

ಬೂದಿ, ಹೂವು

ನಿನ್ನ ನೆನಪುಗಳ ಒಂದೊಂದೇ ಹಕ್ಕಿ ಪೋಣಿಸಿ
ಇಂದು ಮತ್ತೆ ತಂದಿದ್ದೇನೆ ಇತ್ತ ನೋಡು
ಪ್ರೀತಿ ಸೆಲೆ ಇಲ್ಲದ ಬರದ ಬೆಂಗಾಡಿನಲ್ಲರಸಿ
ಮಿಲನದ ಮಾಸಗಳ ಮಾಸದ ಛಾಯ ತಂದು
ನಿನ್ನ ನೆನಪುಗಳ ಗುಡಿಯ ಹೊಸ್ತಿಲಲ್ಲಿ ಹಾಸಿದ್ದೇನೆ
ಬಯಕೆಯ ಬೇಲಿ, ತಂತುವಿನಲ್ಲಿ ಹೆಣೆದುಕೊಂಡಿವೆ
ವಿರಹದಲ್ಲಿ ಸುಟ್ಟ ಬೂದಿ, ಪ್ರೀತಿಯಲ್ಲಿ ಅರಳಿದ
ಹೂವು.

ಅನುವಾದ : ಬಾಗೇಶ್ರೀ

ದೇವ್ ಆನಂದ್ ಪಾಕಿಸ್ತಾನ ಮತ್ತು ಒಂದಷ್ಟು ಚೆಲುವೆಯರು




ಕೆಸುಬು, ಕನವರಿಕೆ, ತುಡಿತ, ತಲ್ಲಣಗಳ ನಡುವೆ ದೇವ್ ಆನಂದ್ ಮರೆಯಾಗಿ ಹೋಗಿದ್ದಾರೆ. ಎಂಬತ್ತು ದಾಟಿದ ದೇಹದೊಳಗಿನ ಜೀವನೋತ್ಸಾಹಗಳ ಮುಂದೆ ಕ್ರಿಯಾಶೀಲತೆಯ ಗುಡ್ಡ ಹಾಕಿಕೊಂಡಿದ್ದ 'ದೇವ್' ಎದ್ದು ಹೋದ ಮೇಲೆ ಆಪ್ತರ ಒಂದೊಂದೇ ಮೆಲುಕುಗಳು ಮನಸ್ಸಿಗೆ ಕಚಗುಳಿ ಇಡಲು ಶುರುವಿಟ್ಟಿವೆ. ಅವರ ಸಿನಿಮಾಗಳು ಮಾತ್ರವಲ್ಲ ಬದುಕೂ ಸಹ ಒಂದು ಸುಂದರ ಪ್ರೇಮಕಾವ್ಯ. ಆ ಕಾವ್ಯದೊಳಗೆ ಒಬ್ಬ ಮುಗ್ಧ ಪ್ರೇಮಿಯಾಗಿ, ಭಗ್ನ ಪ್ರೇಮಿಯಾಗಿ, ಪೋಲಿ ಹುಡುಗನಾಗಿ, ಸ್ನೇಹಸೇತುವಾಗಿ, ಕಡೆಗೆ ತಣ್ಣನೇ ಶೂನ್ಯವಾಗಿ ದೇವ್ ಆನಂದ್ ಬಹಳವಾಗಿ ಕಾಡುತ್ತಾರೆ....

ದೇವ್ ಆನಂದ್ ಅವರ ಬದುಕು ತೆರೆದ ಪುಸ್ತಕ. 'ರೊಮ್ಯಾನ್ಸಿಂಗ್ ವಿತ್ ಲೈಫ್' ಎಂಬ ತನ್ನ ಆತ್ಮಚರಿತ್ರೆಯಲ್ಲಿ ನಮಗೆ ಮತ್ತಷ್ಟು ಹತ್ತಿರವಾಗುವ ಪ್ರಯತ್ನ ಮಾಡಿದ್ದಾರೆ. ತೆರೆ ಮೇಲಿನ ತನ್ನ ನಾಯಕತ್ವವನ್ನು ಎಲ್ಲಿಯೂ ಕಾಯ್ದುಕೊಳ್ಳಲು ಇಚ್ಛಿಸದೆ ತನ್ನ ಪಾಸಿಟಿವ್ ಮತ್ತು ನೆಗೆಟಿವ್‌ಗಳ ನಡುವಿನ ಒರಿಜಿನಾಲಿಟಿಯನ್ನು ನಮ್ಮ ಮುಂದಿಡುವ ಮೂಲಕ ಸಾಮಾನ್ಯ ಮನುಷ್ಯನಾಗಿ ಮತ್ತಷ್ಟೂ ಇಷ್ಟವಾಗುತ್ತಾರೆ. ಅವರ ಬದುಕನ್ನು ಇಣುಕಿ ನೋಡಲು ಹೋದವರಿಗೆ ಲಾಹೋರ್ ಮತ್ತು ಒಂದಷ್ಟು ಚೆಲುವೆಯರ ನಡುವಿನ ಬಾಂಧವ್ಯಗಳು ಸಿಗುತ್ತವೆ.

ದೇವ್ ಆನಂದ್ ಹುಟ್ಟಿದ್ದು ಅವತ್ತಿನ ಭಾರತದ ಪಂಜಾಬ್ ಪ್ರಾಂತ್ಯದ ಘರೋಟಾ (ಈಗ ಪಾಕಿಸ್ತಾದಲ್ಲಿದೆ) ಎಂಬ ಹಳ್ಳಿಯಲ್ಲಾದರೂ ತಂದೆಯ ವಕೀಲಿಕೆಯ ಕಾರಣದಿಂದ ಆತ ಹತ್ತಿರದ ಗುರುದಾಸ್‌ಪುರದಲ್ಲೇ ತನ್ನ ಹೆಚ್ಚಿನ ಬಾಲ್ಯವನ್ನು ಕಳೆದಿದ್ದ. ಹೀರೋ ಆದ ನಂತರದಲ್ಲಿ ಮಾತ್ರವಲ್ಲ ಬಾಲ್ಯದಿಂದಲೂ ಆತ ಹುಡುಗಿಯರ ಫೇವರಿಟ್ ಹುಡುಗನಾಗಿದ್ದ. ಮುಗ್ಧತೆ ಹಾಗೂ ಮೋಹಕತೆಯ ಕೊಲಾಜ್‌ನಂತಿದ್ದ ಆ ಎಳಸು ಮೊಗಕ್ಕೆ ಶಾಲೆಯ ಹುಡುಗಿಯರೆಲ್ಲ ಫಿದಾ ಆಗಿದ್ದರು. ಅದರಲ್ಲೊಬ್ಬಾಕೆಯ ಹೆಸರು ಫ್ಲಾರೆನ್ಸ್. ಈಕೆ ದೇವ್‌ಗೆ ಅದ್ಯಾವ ಪರಿ ಗಂಟು ಬಿದ್ದಿದ್ದಳೆಂದರೆ ಹೂವಿನ ಸುತ್ತ ದುಂಬಿ ಸುತ್ತುವಂತೆ ಸದಾ ಆತನನ್ನು ಪೀಡಿಸುತ್ತಿದ್ದಳು. ಒಂದು ಸಂಜೆ ದೇವ್ ಪಾರ್ಕ್‌ನಲ್ಲಿ ಆಟವಾಡಿಕೊಂಡಿರಬೇಕಾದರೆ ಹೂವಿನ ಪೊದೆಗಳ ನಡುವಿಂದ ಛಂಗನೆ ಆತನ ಮೇಲೆ ಜಿಗಿದವಳು ಅದೇನನ್ನೋ ಬೇಡುವಂತೆ ಮುಖಮಾಡಿಕೊಂಡಿದ್ದನ್ನು ಕಂಡು ದೇವ್ ಹೆದರಿ ಅಮ್ಮನ ಮಡಿಲು ಸೇರುವವರೆಗೆ ಓಡಿದ್ದನಂತೆ.

ಮತ್ತೊಂದು ದಿನ ಶಾಲೆಗೆ ಹೋಗುವಾಗ ಆ ಹುಡುಗಿ ಒಂದಷ್ಟು ಹೂವನ್ನು ದೇವ್ ಕೈಗಿತ್ತು ಆತನ ಕೆನ್ನೆಯ ತುಂಬ ಮುತ್ತಿನ ಮಳೆಗರೆದು ಹೋದ ನೆನಪು ಅದೇ ತಾಜಾತನದಲ್ಲಿ ದೇವ್ ಆನಂದ್‌ರ 'ರೊಮ್ಯಾನ್ಸಿಂಗ್ ವಿತ್ ಲೈಫ್'ನಲ್ಲಿ ದಾಖಲಾಗಿದೆ. ಅವತ್ತೂ ಸಹ ಬಾಲಕ ದೇವ್‌ಗೆ ಏನಾಗುತ್ತಿದೆ ಎಂಬುದರ ಪರಿವೆಯೇ ಇರಲಿಲ್ಲವಂತೆ, ಸಣ್ಣ ಗಾಬರಿಯ ಹೊರತಾಗಿ.

ದೇವ್ ಆನಂದ್ ಹದಿನೈದನೇ ವಯಸ್ಸಿಗೆ ಕಾಲಿಡುವ ವೇಳೆಗೆ ಎರಡನೇ ಚೆಲುವೆ ಆತನ ಬದುಕಿನಲ್ಲಿ ಸಣ್ಣದೊಂದು ಎಂಟ್ರಿ-ಎಕ್ಸಿಟ್‌ಗಳ ಮೂಲಕ ಆತನನ್ನು ಚಕಿತಗೊಳಿಸಿದ್ದಳು. ದೇವ್‌ಗೆ ಆತನ ಸ್ನೇಹಿತರ ಜೊತೆಗೆ ವಿಹಾರಕ್ಕೆಂದು ಟ್ರೆಕ್ಕಿಂಗ್ ಹೋಗಿ ಬರುವ ರೂಢಿಯಿತ್ತು. ಹಾಗೆಯೇ ಒಮ್ಮೆ ಹೋದಾಗ ಭಾರೀ ಹಿಮವರ್ಷದ ಕಾರಣ ಒಂದು ಹಳ್ಳಿಯಲ್ಲಿ ರಾತ್ರಿ ಕಳೆಯಬೇಕಾಗಿತ್ತು, ವ್ಯವಸ್ಥೆ ಸರಿಯಿರದಿದ್ದರಿಂದ ನಿದ್ದೆಯಿಲ್ಲದ ರಾತ್ರಿ ಕಳೆದು ಮುಂಜಾನೆ ಎದ್ದು ಹೊರಬಂದ ದೇವ್ ಕಣ್ಣಿಗೆ ಬುಡಕಟ್ಟು ಜನಾಂಗದ ಹುಡುಗಿಯೊಬ್ಬಳು ಕಂಡಳು. ಚಳಿಗಾಳಿಗೆ ಹಾರಾಡುತ್ತಿದ್ದ ಕೂದಲಿನ ಮರೆಯಲ್ಲಿ ಮೊಗವನ್ನು ಹುದುಗಿಸಿಕೊಳ್ಳುತ್ತಾ ನಡೆಯುತ್ತಿದ್ದ ಆ ಹುಡುಗಿ ದೇವ್‌ನನ್ನು ಅದೆಷ್ಟು ಆಕರ್ಷಿಸಿದಳೆಂದರೆ, ತಾನು ಇಷ್ಟು ದಿನ ಕುತೂಹಲದಿಂದ ಕಾಯುತ್ತಿದ್ದ ಸೌಂದರ್ಯ ಇದೇ ಎಂಬ ಭಾವನೆ ಆತನಲ್ಲಿ ಮೂಡಿತು.



ಆಕೆ ಚೆಲುವನ್ನು ಆನಂದಿಸುತ್ತಿರುವಾಗಲೇ ಆ ಹುಡುಗಿ ಕಾಡಿನ ಮರೆಯಲ್ಲಿ ಕಳೆದು ಹೋದಳು. ಇನ್ನೂ ಕೆಲ ಹೊತ್ತು ಆಕೆಯನ್ನು ನೋಡಬೇಕೆಂದು ಬಯಸಿದ್ದ ದೇವ್ ತನ್ನ ಪಕ್ಕದಲ್ಲೇ ಇದ್ದ ಟೂರಿಸ್ಟ್ ಒಬ್ಬನ ಬೈನಾಕ್ಯುಲರ್ ಪಡೆದು ಆ ಹುಡುಗಿಯನ್ನು ಹುಡುಕುವ ಪ್ರಯತ್ನ ಮಾಡಿದ. ಆದರೆ ಆಕೆ ಮತ್ತೆ ಆತನ ಕಣ್ಣಿಗೆ ಬೀಳಲೇ ಇಲ್ಲ. ತುಸು ನಾಚಿಕೆಯ ಸ್ವಭಾವದ ದೇವ್ ಆನಂದ್ ಅದಕ್ಕಿಂತ ಹೆಚ್ಚಿನ ಅನ್ವೇಷಣೆಗೆ ಮುಂದಾಗದೆ ಖಾಲಿ ನೆನಪಿನೊಂದಿಗೆ ವಾಪಸ್ಸಾಗಿದ್ದ.

ಹುಡುಗ ಸಹಜ ಪೋಲಿತನದಲ್ಲೂ ದೇವ್ ಆನಂದ್ ಹಿಂದೆ ಬಿದ್ದವನಲ್ಲ. ಆತನಿಗೆ ಭಾಗೂ ಎಂಬ ಬಾಲ್ಯ ಸ್ನೇಹಿತನಿದ್ದ. ಅವನ ಪೂರ್ತಿ ಹೆಸರು ಭಗವಂತ್ ಸಿಂಗ್. ಒಮ್ಮೆ ಈ ಇಬ್ಬರು ಪೋಲಿ ಸ್ನೇಹಿತರು ಒಂದು ತುಂಟ ಕೆಲಸಕ್ಕೆ ಕೈ ಹಾಕಿ ಸಿಕ್ಕಿಬಿದ್ದಿದ್ದರು. ದೇವ್ ಆನಂದ್‌ರ ಪಕ್ಕದ ಮನೆಯಲ್ಲಿ ಒಬ್ಬ ಹುಡುಗಿಯಿದ್ದಳು. ಎರಡೂ ಮನೆಯ ಕಿಟಕಿಗಳು ಒಂದೇ ನೇರಕ್ಕಿದ್ದಿದ್ದರಿಂದ ಕಿಟಕಿ ತೆರೆದಿಟ್ಟರೆ ಪಕ್ಕದ ಮನೆಯ ದೃಶ್ಯವನ್ನು ಸಲೀಸಾಗಿ ಕಣ್ ತುಂಬಿಕೊಳ್ಳಬಹುದಿತ್ತು. ಅದೊಂದು ದಿನ ಆ ಹುಡುಗಿ ಕಿಟಕಿ ತೆರೆದಿಟ್ಟೇ ಬಟ್ಟೆ ಬದಲಾಯಿಸುವುದನ್ನು ಕದ್ದು ನೋಡುವ ಸಾಹಸಕ್ಕೆ ಈ ಇಬ್ಬರು ಮುಂದಾದರು. ಆ ಹುಡುಗಿಯ ಅದೃಷ್ಟವೋ, ಇವರ ದುರದೃಷ್ಟವೋ ಇವರ ಸಾಹಸ ಅರ್ಧಕ್ಕೇ ಫೇಲಾಗಿತ್ತು. ಯಾರೋ ಇಣುಕುತ್ತಿರುವ ಸೂಚನೆ ಸಿಕ್ಕ ಹುಡುಗಿ ಕಿಟಕಿಗಳನ್ನು ಧಡಾರನೇ ಮುಚ್ಚಿದ್ದು ದೇವ್ ಆನಂದ್‌ನನ್ನು ಪಾಪಪ್ರಜ್ಞೆ ಕಾಡುವಂತೆ ಮಾಡಿತ್ತು.

ಆದರೆ ದೇವ್ ಆನಂದ್‌ನನ್ನು ಜೀವನುದುದ್ದಕ್ಕೂ ಕಾಡಿದ್ದು ಲಾಹೋರ್ ಕಾಲೇಜಿನ ಲಲನೆಯ ಜಸ್ಟ್ ಮಿಸ್ ಪ್ರೀತಿ. ಬಿ.ಎ ಓದಲೆಂದು ಲಾಹೋರ್‌ನ ದೇವ್ ಸರ್ಕಾರಿ ಕಾಲೇಜನ್ನು ಸೇರಿಕೊಂಡಾಗ ಅದೇ ಕಾಲೇಜಿನ ಪ್ರೊಫೆಸರ್ ಒಬ್ಬರ ಮಗಳಾದ ಉಷಾ ಚೋಪ್ರಾ ದೇವ್ ಆನಂದ್‌ನ ಮನಸ್ಸನ್ನು ಬಹಳವಾಗಿ ಆವರಿಸಿದಳು. ಸೀರೆಯುಟ್ಟ ಆಕೆ ಕಾಲೇಜಿನ ಕಾರಿಡಾರ್‌ನಲ್ಲಿ ಬರುವುದನ್ನು ನೋಡಲು ಪ್ರತಿ ದಿನ ಕಾಯುತ್ತಿದ್ದ ದೇವ್ ಆನಂದ್ ಕೊನೆವರೆಗೂ ಅಷ್ಟಕ್ಕೆ ಮಾತ್ರ ತನ್ನ ಪ್ರೇಮವನ್ನು ಸೀಮಿತಗೊಳಿಸಿಕೊಳ್ಳಬೇಕಾಗಿತ್ತು. ನಾಚಿಕೆಯ ಕಾರಣಕ್ಕಾಗಿ ಆ ಹುಡುಗಿಗೆ ತನ್ನ ಮನಸ್ಸಿನ ಭಾವನೆಯನ್ನು ಹೇಳಿಕೊಳ್ಳದೆ ಅದುಮಿಟ್ಟುಕೊಂಡದ್ದು ಅದೆಂತಹ ಪ್ರಮಾದವಾಯಿತೆಂಬುದು ಕಾಲೇಜಿನ ಕೊನೇ ದಿನವೇ ದೇವ್ ಆನಂದ್ ಅರಿವಿಗೆ ಬಂದದ್ದು.


ಕಾಲೇಜು ಮುಗಿಸಿ ದೇವ್ ಇನ್ನೇನು ಮುಂಬೈನತ್ತ



ಸುರೈಯ

ಹೊರಡಬೇಕು. ಆಗ ಕ್ಯಾರೆಕ್ಟರ್ ಸರ್ಟಿಫಿಕೇಟ್ ಪಡೆಯಲು ಪ್ರಿನ್ಸಿಪಾಲರ ಚೇಂಬರ್ ಹೊಕ್ಕು ಹೊರ ಬಂದವನಿಗೆ ತನ್ನ ಎದೆಯಾಳದ ಚೆಲುವೆ ಅಲ್ಲೇ ನಿಂತಿದ್ದು ಕಂಡು ವಿಪರೀತ ಖುಷಿಯಾಗಿತ್ತು. ಕೊನೇ ದಿನ, ಇವತ್ತು ಮುಗಿದರೆ ಆಕೆ ಮತ್ತೆ ಸಿಗುವ ಯಾವ ಖಾತ್ರಿ ಇಲ್ಲ. ಧೈರ್ಯ ಮಾಡಿ ಮಾತನಾಡಿಸಿಯೇ ಬಿಡೋಣ ಎಂದುಕೊಂಡ ದೇವ್‌ಗೆ ಅಚ್ಚರಿ ಕಾದಿತ್ತು. ಅವಳೇ ಮುಂದೆ ಬಂದು "ನೀವು ಎಂ.ಎಗೆ ಇಲ್ಲೇ ಸೇರುತ್ತೀರಾ ತಾನೇ?" ಎಂದು ಕೇಳಿದಳು. ದೇವ್ ಆನಂದ್ ಇಲ್ಲ ಎಂದಷ್ಟೇ ಹೇಳಿದ. ಆಕೆ ಮುಖ ಸಪ್ಪಗೆ ಮಾಡಿಕೊಂಡು ಒಂದೂ ಮಾತನಾಡದೆ ಅಲ್ಲಿಂದ ಹೊರಟುಹೋದಳು. ದೇವ್ ಆನಂದ್ ಬಹು ದಿನದಿಂದ ಹೇಳಬೇಕೆಂದಿದ್ದ ಆಶೆಯನ್ನು ಆಕೆಯೇ ಸೂಕ್ಷ್ಮವಾಗಿ ವ್ಯಕ್ತಪಡಿಸಿದ್ದಳು. ಆತನ ನಾಚಿಕೆಯೇ ಅವನ ಪ್ರೇಮಕ್ಕೆ ಅಡ್ಡ


ಲೋಕಾಯುಕ್ತದಲ್ಲಿ ಮಾಧ್ಯಮಗಳಿಗೆ ನೋ ಎಂಟ್ರಿ



ಲೋಕಾಯುಕ್ತ ಕಚೇರಿಯಿಂದ ಮಾಧ್ಯಮಗಳನ್ನು ದೂರ ಮಾಡುವ ಹುನ್ನಾರ ನಡೆಯುತ್ತಿದೆ. ಭ್ರಷ್ಟಾಚಾರದ ಮೇಲೆ ಮುರಕೊಂಡು ಬಿದ್ದು ವ್ಯವಸ್ಥೆಯಲ್ಲಿ ಒಂಚೂರು ಆಶಾಕಿರಣ ಮೂಡಿಸಿದ್ದ ಸಂಸ್ಥೆ ಈಗ ಇದ್ದಕ್ಕಿದ್ದಂತೆ ಮಾಧ್ಯಮಗಳಿಗೆ ನೋ ಎಂಟ್ರಿ ಎನ್ನುತ್ತಿರುವುದರ ಹಿಂದೆ ಲೋಕಾಯುಕ್ತ ಪೊಲೀಸ್ ಹೆಚ್ಚುವರಿ ನಿರ್ದೇಶಕ ಎಚ್.ಎನ್ ಸತ್ಯನಾರಾಯಣ ರಾವ್‌ನ ಕರಾಮತ್ತು ಇರುವುದು ಹಲವು ಹತ್ತು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಅದೂ ಅಲ್ಲದೆ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಪ್ರೆಸ್‌ನವರೊಂದಿಗಿರಲಿ ಸಹೋದ್ಯೋಗಿಗಳೊಂದಿಗೂ ಆಂತರಿಕ ವಿದ್ಯಮಾನಗಳನ್ನು ಚರ್ಚಿಸುವಂತಿಲ್ಲ ಹಾಗೊಮ್ಮೆ ನಿಯಮ ಮೀರಿದ್ದೇ ಆದರೆ ಕ್ರಮ ಕೈಗೊಳ್ಳಬೇಕಾಗುತ್ತೆ ಎಂಬ ಫರ್ಮಾನನ್ನೂ ಹೊರಡಿಸಲಾಗಿದೆಯಂತೆ. ಡಿನೋಟಿಫಿಕೇಷನ್ ದಂಧೆಯಲ್ಲಿ ತಗುಲಿಕೊಂಡು ಜೈಲು ಸೇರಿದ್ದ ಯಡ್ಡಿ ಜಾಮೀನು ಮೇಲೆ ಹೊರಬಂದ 48 ಗಂಟೆಯೊಳಗೆ ಲೋಕಾಯುಕ್ತ ಪೊಲೀಸ್‌ನ ಅಡಿಷನಲ್ ಡೈರೆಕ್ಟರ್‌ನಂತಹ ಹುದ್ದೆಗೆ ಕೂರಿಸಿಕೊಂಡ ರಾವ್‌ನ ಈ ನಿರ್ಧಾರದಲ್ಲಿ ಪ್ರಾಮಾಣಿಕತೆಯ ಲವಲೇಶವೂ ಕಾಣಿಸುತ್ತಿಲ್ಲ.

ಮತ್ತೂ ದಿಗಿಲು ಬೀಳಿಸುವ ಸಂಗತಿಯೆಂದರೆ ಸಂಸ್ಥೆಯ ಡೆಪ್ಯುಟಿ ಕಮೀಷನರ್ ಕಮ್ ಪಿ.ಆರ್.ಓ ಕೂಡಾ ಆಗಿರುವ ಸೈಯದ್ ರಿಯಾಜ್‌ರನ್ನು ಭೇಟಿ ಮಾಡಲೂ ಮಾಧ್ಯಮಗಳಿಗೆ ಅವಕಾಶ ಕಲ್ಪಿಸುತ್ತಿಲ್ಲ. ಲೋಕಾಯುಕ್ತದೊಳಗೆ ಹೀಗೊಂದು ಗೌಪ್ಯ ವಾತಾವರಣವನ್ನು ಸೃಷ್ಟಿಸಲು ಮುಂದಾಗಿರುವ ರಾವ್‌ನ ಚಿತಾವಣೆಯ ಹಿಂದೆ ಭ್ರಷ್ಟರನ್ನು ರಕ್ಷಿಸುವ ತಂತ್ರಗಾರಿಕೆಯಿರುವುದು ನಗ್ನಸತ್ಯ.

ಅಸಲಿಗೆ ಈ ಸತ್ಯನಾರಾಯಣ್ ರಾವ್ ಎಂಬಾತನ ಚರಿತ್ರೆಯೇ ಭ್ರಷ್ಟತೆಯಿಂದ ಭರ್ತಿಯಾಗಿ ಕೂಡಿದೆ. ಈ ಮೊದಲು ಈತ ಪೂರ್ವ ವಲಯದ ಐಜಿಪಿಯಾಗಿದ್ದಾಗ ಖುದ್ದು ಹೈಕೋರ್ಟ್ ಈತನ ಮುಖ ಕೆಂಪಗಾಗುವಂತೆ ಕ್ಯಾಕರಿಸಿತ್ತು. ರೆಡ್ಡಿ ಪಡೆ ಅಕ್ರಮ ಗಣಿಗಾರಿಕೆ ನಡೆಸಲು ಸುಗ್ಗಲಮ್ಮದೇವಿ ದೇವಸ್ಥಾನವನ್ನೇ ಮಟ್ಯಾಶ್ ಮಾಡಿದ್ದ ಕೇಸು ಕೈಗೆತ್ತಿಕೊಂಡ ಸಂಡೂರು ಜೆ.ಎಮ್.ಎಫ್.ಸಿ ನ್ಯಾಯಾಲಯ ಆಗಿನ ಪ್ರವಾಸೋದ್ಯಮ ಸಚಿವನಾಗಿದ್ದ ಜನಾರ್ದನ ರೆಡ್ಡಿಯೂ ಸೇರಿದಂತೆ ಒಂಬತ್ತು ಜನರಿಗೆ ವಾರೆಂಟ್ ಜಾರಿ ಮಾಡಿತ್ತು. ಅದನ್ನು ಆಪಾದಿತರಿಗೆ ತಲುಪಿಸುವ ಜವಾಬ್ದಾರಿ ಏರಿದ್ದು ಇದೇ 'ಸತ್ಯ'ನಾರಾಯಣನ ಹೆಗಲನ್ನು.




ಆದರೆ ಅದ್ಯಾವುದೋ ಋಣಕ್ಕೆ ಬಿದ್ದವನಂತೆ ಅವರ್‍ಯಾರಿಗೂ ವಾರೆಂಟ್ ತಲುಪಿಸದೆ ಕರ್ತವ್ಯ ಭ್ರಷ್ಟನಾಗಿ ಕುಳಿತಿದ್ದ ರಾವ್‌ಗೆ ಹೈಕೋರ್ಟ್ ಸಾರ್ವಜನಿಕವಾಗಿ ಛೀಮಾರಿ ಹಾಕಿತ್ತು. ಮಾತ್ರವಲ್ಲ ಈತನ ಐಲುತನಕ್ಕೆ ಒಬ್ಬ ಕಾನ್‌ಸ್ಟೆಬಲ್‌ನನ್ನೂ ಸಸ್ಪೆಂಡ್ ಮಾಡಲಾಗಿತ್ತು. ಇಂತಹ ಪ್ರಖಾಂಡ ಇತಿಹಾಸವಿರುವ ರಾವ್‌ನನ್ನು ಲೋಕಾಯುಕ್ತಕ್ಕೆ ಸದಾನಂದ ಗೌಡ ತಂದದ್ದೇ ಯಡ್ಡಿ, ಆರ್.ಅಶೋಕ್, ವಿ.ಸೋಮಣ್ಣ ಮುಂತಾದ ಪ್ರಭಾವಿಗಳ ಮೇಲಿರುವ ಕೇಸುಗಳಿಗೆ ಒಂದು ಗತಿ ಕಾಣಿಸಲು ಎಂಬ ಗುಮಾನಿ ಈಗ ನಿಜವಾಗುತ್ತಿದೆ.

ಲೋಕಾಯುಕ್ತ ಸಂಸ್ಥೆಯನ್ನು ಇಡಿಯಾಗಿ ಡಮ್ಮಿ ಮಾಡಲು ಭ್ರಷ್ಟರೆಲ್ಲ ವ್ಯವಸ್ಥಿತವಾಗಿ ಸಜ್ಜಾಗಿರುವುದು ಇದರಿಂದ ಮತ್ತಷ್ಟೂ ಸ್ಪಷ್ಟವಾಗುತ್ತಿದೆ. ಮಧುಕರ್ ಶೆಟ್ಟಿಯ ಆರೋಪದಿಂದ ಆರಂಭವಾದ ಅಭಿಯಾನ ಇದೀಗ ಮಾಧ್ಯಮಗಳನ್ನೇ ಲೋಕಾಯುಕ್ತದಿಂದ ಬೈಫರ್ಕೇಟ್ ಮಾಡುವ ಹಂತಕ್ಕೆ ಬಂದು ನಿಂತಿದೆ. ಪವರ್‌ಫುಲ್ ಆಸಾಮಿಯೊಬ್ಬ ಬೆದರಿಕೆ ಹಾಕಿದ ಎಂಬ ಅಸ್ಪಷ್ಟ ಹೈಡ್ರಾಮಾದೊಂದಿಗೆ ಹಿಂದಿದ್ದ ಗಾಂವ್‌ಕರ್ ಜಾಗಕ್ಕೆ ರಾವ್‌ನನ್ನು ತಂದು ಕೂರಿಸಲಾಗಿದೆ. ಈಗ ಮಾಧ್ಯಮಗಳನ್ನು ಹೊರದೂಡುತ್ತಿರುವ ರಾವ್‌ನ ಕುತಂತ್ರವಾದರು ದಿಢೀರನೇ ಕಾರ್ಯರೂಪಕ್ಕೆ ತಂದುದಲ್ಲ. ಈಗೊಂದೆರಡು ವಾರಗಳ ಹಿಂದೆ ಯಡ್ಡಿ ಮಾಧ್ಯಮಗಳಿಂದಾಗಿ ಮಾಹಿತಿ ಸೋರಿಕೆಯಾಗುತ್ತಿದ್ದು ತನಿಖೆ ದಿಕ್ಕು ತಪ್ಪುತ್ತಿದೆ ಎಂಬ ರಾಗ ತೆಗೆದ್ದಿದ್ದನ್ನೇ ಮುಂದು ಮಾಡಿಕೊಂಡು ಈ ಪರಿಯ ಕ್ರಮಕ್ಕೆ ಮುಂದಾಗಿದ್ದೇನೆ ಎನ್ನುವುದು ರಾವ್‌ನ ಸಬೂಬು. ಆದರೆ ಲೋಕಾಯುಕ್ತದ ಮೆಗಾ ಲೀಕೇಜ್ ಇರುವುದು ಅಲ್ಲಿನ ಅಧಿಕಾರಿಗಳ ಫೋನ್ ಟ್ಯಾಪಿಂಗ್ ಮೂಲಕ ಎನ್ನುವ ಭಾರೀ ಸತ್ಯವನ್ನು ಬೇಕಂತಲೆ ನಿರ್ಲಕ್ಷ್ಯಿಸಿರುವ ರಾವ್ ಅದನ್ನು ಸರಿಪಡಿಸುವ ಉಸಾಬರಿಗೇ ಹೋಗಿಲ್ಲ.

'ವಿಧಾನ ಸೌಧದೊಳಕ್ಕೇ ಮಾಧ್ಯಮಗಳಿಗೆ ಪ್ರವೇಶವಿರಬೇಕಾದರೆ ಲೋಕಾಯುಕ್ತ ಕಟ್ಟಡದೊಳಕ್ಕೆ ಯಾಕೆ ನಿರ್ಬಂಧ?' ಎಂಬ ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆಯವರ ಪ್ರಶ್ನೆಗೆ ರಾವ್ ಬಳಿ ಉತ್ತರವಿದ್ದಂತಿಲ್ಲ.

ಸರ್ವಾಧಿಕಾರದ ಇಂತಹ ವಾತಾವರಣದಿಂದ ಕೆಲಸ ಮಾಡುವುದೇ ತುಂಬ ಇಕ್ಕಟ್ಟಾಗುತ್ತಿದೆ ಎಂಬ ಸಿಬ್ಬಂದಿಗಳ ಗುನುಗೂ ರಾವ್‌ಗೆ ಬೇಡವಾಗಿದೆ. ಲೋಕಾಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರೊಂದಿಗೆ ಜಟಾಪಟಿಗೆ ಬಿದ್ದಿರುವ ಬಿಜೆಪಿಗಳು ಡಿಲೇ ಮಾಡುತ್ತಾ ಆಯ್ಕೆಯನ್ನು ಅಂತಿಮಗೊಳಿಸುವುದರ ಒಳಗಾಗಿ ಕೇಸುಗಳು ಉಲ್ಟಾ ಆಗಬೇಕು, ಡೀಲು ಕುದುರಿರಬೇಕು. ಅದಕ್ಕೇ ಮಾಧ್ಯಮಗಳನ್ನು ದೂರವಿಟ್ಟು ದೋಸೆ ಮಗುಚುವ ಕೆಲಸಕ್ಕೆ ರಾವ್ ಮುಂದಾಗಿರುವಂತಿದೆ. ಒಟ್ಟಿನಲಿ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಬೇಕಾದ ಸಂಸ್ಥೆ ಮಾಧ್ಯಮಗಳನ್ನು ನಿಷೇಧಿಸುವ ಮಟ್ಟಕ್ಕೆ ಹೋಗಿರುವುದು ಪ್ರಜಾಪ್ರಭುತ್ವದ ದುರದೃಷ್ಟವಲ್ಲದೆ ಮತ್ತೇನೂ ಅಲ್ಲ.

–ಕಟ್ಟೆ



ದಿಲೀಪ್‌ಕುಮಾರ್ ಜೊತೆ....

ಬಂದಿತ್ತು. ಆದರೆ ಅದಾಗಲೇ ಮುಂಬೈ ಕಡೆಯ ಪ್ರಯಾಣ ಬಹುತೇಕ ನಿಶ್ಚಿತವಾಗಿದ್ದರಿಂದ ಅದು ಅಪೂರ್ಣ ಕಾವ್ಯವಾಗಿಯೇ ಉಳಿಯಿತು.....

ಮುಂಬೈಗೆ ಬಂದ ನಂತರವೂ ದೇವ್ ಆನಂದ್‌ನ ಭಗ್ನ ಪ್ರೇಮದ ಅಧ್ಯಾಯ ಕೊನೆಗೊಳ್ಳಲಿಲ್ಲ. ಆಗಿನ ಕಾಲಕ್ಕೆ ಸೂಪರ್‌ಸ್ಟಾರ್ ಎನಿಸಿದ್ದ ಪಂಜಾಬ್ ಮೂಲದ ನಾಯಕಿ, ಗಾಯಕಿ ಸುರೈಯ್ಯಾಳನ್ನು ವಿಪರೀತವಾಗಿ ಪ್ರೇಮಿಸಿದ ದೇವ್ ಆನಂದ್‌ಗೆ ಮತ್ತೆ ನಿರಾಶೆಯೇ ಕಾದಿತ್ತು. ಸುರೈಯ್ಯಾಳ ಸರ್ವಾಧಿಕಾರಿಣಿ ಅಜ್ಜಿ ,ಹಿಂದೂ ಆದ ಆನಂದ್ ಮತ್ತು ಮುಸ್ಲಿಮ್ ಆದ ಸುರೈಯ್ಯಾಳ ಮದುವೆ ಒಪ್ಪದಿದ್ದರಿಂದ ಈ ಪ್ರೇಮವೂ ದೇವ್ ಬದುಕಿನಲ್ಲಿ ಮತ್ತೊಂದು ದುರಂತ ಕಾವ್ಯವಾಗಿ ಉಳಿಯಿತು.

ಇಂತಹ ಮತೀಯ ಸಂಪ್ರದಾಯವನ್ನು ಏಕಾಏಕಿ ಮುರಿದ ದೇವ್ ಆನಂದ್ ಕೊನೆಗೂ ಮದುವೆಯಾದದ್ದು ಕ್ರಿಶ್ಚಿಯನ್ ಕುಟುಂಬದ ಕಲ್ಪನಾ ಕಾರ್ತಿಕ್‌ಳನ್ನು. (ಆಕೆಯ ಮೂಲ ಹೆಸರು ಮೋನಾ ಸಿಂಗ್.) ಅಲ್ಲಿಗೆ ದೇವ್ ಆನಂದ್ ಪಾಲಿನ ಪ್ರೇಮಕಾವ್ಯಗಳಿಗೆ ನೈತಿಕ ತಡೆಬಿದ್ದಿತಾದರೂ ಅವುಗಳ ನೆನಪನ್ನು ಯಾವತ್ತಿಗೂ ಮಾಸಿ ಹೋಗಲು ಆತ ಬಿಟ್ಟಿರಲಿಲ್ಲ.

ತನ್ನ ಪ್ರೌಢ ದಿನಗಳನ್ನು ಕಳೆದ ಲಾಹೋರ್ ಬಗ್ಗೆ ದೇವ್ ಆನಂದ್‌ಗೆ ಎಲ್ಲಿಲ್ಲದ ಪ್ರೀತಿ. ಅವತ್ತು ಕಾಲೇಜ್ ಪೂರೈಸಿ ಮುಂಬೈ ಸೇರಿಕೊಂಡವರು ಮತ್ತೆ ಲಾಹೋರ್‌ಗೆ ಕಾಲಿರಿಸಿದ್ದು ೧೯೯೭ರಲ್ಲಿ. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸ್ನೇಹವೃದ್ಧಿಯ ಬಗ್ಗೆ ದೇವ್ ಆನಂದ್‌ಗೆ ಮೊದಲಿನಿಂದಲೂ ಅಪಾರ ಆಸಕ್ತಿ. ಆದ್ದರಿಂದಲೇ ಅವತ್ತಿನ ಪ್ರಧಾನಿ ವಾಜಪೇಯಿಯೊಂದಿಗೆ ದೆಹಲಿ–ಲಾಹೋರ್ ಸ್ನೇಹ ಬಸ್ ಸಂಚಾರದಲ್ಲಿ ಆನಂದ್ ಉತ್ಸಾಹದಿಂದ ಭಾಗವಹಿಸಿದ್ದರು.

ಆ ಯಾತ್ರೆಯ ಸಂದರ್ಭದಲ್ಲಿ ದೇವ್ ಆನಂದ್ ತಪ್ಪದೇ ಭೇಟಿ ಕೊಟ್ಟಿದ್ದು ತಾನು ಓದಿದ್ದ ಸರ್ಕಾರಿ ಕಾಲೇಜಿಗೆ. ಬಹುಳಷ್ಟು ವರ್ಷಗಳು ಉರುಳಿದ್ದರೂ, ಕನಸುಗಳು ಮತ್ತು ಆಶೆಗಳು ಹಾಗೆ ಅವರ ಮನಸ್ಸಿನಲ್ಲಿ ಉಳಿದಿದ್ದವು. ಆದ್ದರಿಂದ ತನ್ನ ಮೌನ ಪ್ರೇಯಸಿ ಉಷಾ ಚೋಪ್ರಾ, ಅವತ್ತೂ ಕೂಡ ಸೀರೆಯುಟ್ಟು ಕಾರಿಡಾರ್‌ನಲ್ಲಿ ತನ್ನ ಪಕ್ಕದಲ್ಲೇ ನಡೆದು ಹೋಗುತ್ತಿದ್ದಾಳೇನೊ ಎಂಬ ಕಲ್ಪನೆ ಅವರ ಕಣ್ಣಿಗೆ ಕಟ್ಟಿತ್ತು. ಖಾಲಿ ಕಾರಿಡಾರ್‌ನಲ್ಲಿ ಅವಳ ಹೈಹೀಲ್ಡ್ ಚಪ್ಪಲಿಗಳ ಸದ್ದು ಕೇಳಿದಂತಹ ಅನುಭವವಾಗಿತ್ತು ದೇವ್ ಆನಂದ್‌ಗೆ.

ಪಾಕಿಸ್ತಾನದಲ್ಲೂ ದೇವ್ ಆನಂದ್‌ಗೆ ಭಾರೀ ಅಭಿಮಾನಿಗಳಿದ್ದಾರೆ. 1965ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ನಡೆಯುವ ತನಕ ಭಾರತೀಯ ಸಿನಿಮಾಗಳು ಪಾಕಿಸ್ತಾನದಲ್ಲಿ ಪ್ರದರ್ಶನಗೊಳ್ಳುತ್ತಿದ್ದವು. ಅಷ್ಟೇ ಅಲ್ಲ, ದೇವ್ ಆನಂದ್ ನಟಿಸಿದ್ದ ಚಿತ್ರಗಳು ಆ ದೇಶದಲ್ಲೂ ಅಪಾರ ಯಶಸ್ಸು ಗಳಿಸಿದ್ದವು.

ಭಾರತ-ಪಾಕ್ ನಡುವಿನ ಸ್ನೇಹದ ಬಗ್ಗೆ ದೇವ್ ಆನಂದ್ ಅವರಿಗಿದ್ದ ಕಾಳಜಿಯನ್ನು ಪರಿಗಣಿಸಿಯೇ ಅಂದಿನ ಪಾಕಿಸ್ತಾನ ಪ್ರಧಾನಿ ನವಾಜ್ ಷರೀಫ್ ಅವರು ದೇವ್ ಆನಂದ್‌ಗೆ ಒಂದು ವಿಶೇಷ ಔತಣಕೂಟವನ್ನು ಏರ್ಪಡಿಸಿದ್ದರು.



ದೇವ್ ಓದಿದ ಲಾಹೋರ್ ಕಾಲೇಜ್

ಪಾಕಿಸ್ತಾನಿ ಜನರಿಗೆ ದೇವ್ ಆನಂದ್ ಓರ್ವ ಚಿತ್ರನಟನಾಗಿದ್ದರೆ ದೇವ್ ಆನಂದ್‌ಗೆ ಲಾಹೋರ್ ನಗರ ತನ್ನ ಬಾಲ್ಯದ, ಬದುಕಿನ, ನೆನಪಿನ ಭಾಗವಾಗಿತ್ತು. ಆ ಕಾರಣಕ್ಕೇ ಮೊನ್ನೆ ದೇವ್ ಆನಂದ್ ಇನ್ನಿಲ್ಲವಾದಾಗ ಅಲ್ಲಿನ ಜನರು ಮತ್ತು ಮಾಧ್ಯಮಗಳೂ ಆತನ ಬಗ್ಗೆ ವಿಶೇಷ ಗಮನ ನೀಡಿದವು.

ದೇವ್ ಆನಂದ್ ಅವರ ನಿರ್ಗಮನದೊಂದಿಗೆ ಭಾರತ ಮತ್ತು ಪಾಕಿಸ್ತಾನದ ನಡುವೆ ಇದ್ದ ಒಂದು ಪ್ರೀತಿಯ ಸೇತುವೆಯೇ ಕಳಚಿ ಬಿದ್ದಿದೆ...

• ಗಿರೀಶ್ ತಾಳಿಕಟ್ಟೆ



ನಿವಾನ್ ನಿಗಮ್

ಕೊಲವೇರಿ ಡಿಫರೆಂಟ್ ವರ್ಶನ್ಸ್!

ತಮಿಳು ನಟ ಧನುಶ್ ಹಾಡಿರುವ 'ಕೊಲವೇರಿ' ಹಾಡು ಈಗ ಬರೀ ಜನಪ್ರಿಯವಾಗಿಲ್ಲ ಅದನ್ನು ಕಾಪಿ ಮಾಡಿ ತಮ್ಮ ಆಸಕ್ತಿ, ಆತಂಕ ಅಥವಾ ಕಾಳಜಿಗಳನ್ನು ವ್ಯಕ್ತಪಡಿಸುವ ಹತ್ತಾರು ತರಹದ ಹಾಡುಗಳು ಈಗ ಇಂಟರ್‌ನೆಟ್‌ನ ಯೂ ಟ್ಯೂಬ್‌ನಲ್ಲಿ ಹರಿದಾಡುತ್ತಿವೆ.

ಅವುಗಳಲ್ಲಿ ಮೊದಲು ಎಲ್ಲರ ಗಮನ ಸೆಳೆದದ್ದು ಖ್ಯಾತ ಹಾಡುಗಾರ ಸೋನು ನಿಗಮ್ ಅವರ ನಾಲ್ಕು ವರ್ಷದ ಮಗ ನಿವಾನ್ ನಿಗಮ್ 'ಕೊಲವೇರಿ' ಟ್ಯೂನಿನಲ್ಲಿ ಮುದ್ದು ಮುದ್ದಾಗಿ ಹಾಡಿರುವ ಹಾಡು. ಆದರೆ ಧನುಶ್ ತರಹ 'ಲವ್ ಡಿ' ಕೇಸ್ ಹುಡುಗರ ಬಗ್ಗೆ 'ಸೂಪ್ ಸಾಂಗ್' ಹಾಡದೆ ನಿವಾನ್ ತನ್ನ ಹಾಡಿನಲ್ಲಿ ಅಮ್ಮನನ್ನು ಕುಡಿಯುವ ಹಾಲಿಗಾಗಿ ಕೇಳುತ್ತಾನೆ. ಹಾಗೆಯೇ ಮತ್ತೊಬ್ಬ ಬಾಲಕ ಇದೇ ಹಾಡಿನ ಟ್ಯೂನಿಗೆ 'ಅಣ್ಣಾಗಿರಿ' ಹಾಡನ್ನು ಹಿಂದಿ ಮಿಶ್ರಿತ ಇಂಗ್ಲಿಷ್‌ನಲ್ಲಿ ಹಾಡಿದ್ದಾನೆ. ಅದರಲ್ಲಿ ಆತ ಎಲ್ಲರಿಗೂ ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ಅವರ ಚಳವಳಿಯಲ್ಲಿ ಭಾಗವಹಿಸಬೇಕೆಂದು ಕೇಳುತ್ತಾನೆ.

ಕೆಲವು ಯುವಕರು ಪರೀಕ್ಷೆ ಸಮಯದಲ್ಲಿ ಎದುರಿಸುವ ಸಮಸ್ಯೆಗಳ ಸುತ್ತ ಪದಗಳನ್ನು ಹೆಣೆದು ಕೊಲವೇರಿ ಟ್ಯೂನಿಗೆ ಹಾಡಿದ್ದಾರೆ. ಗುಜರಾತಿ ಮತ್ತು ಸಿಖ್ ಹುಡುಗರು ಪ್ರತ್ಯೇಕವಾಗಿ ಹುಡುಗಿಯರು ಹೇಗೆ ತಮ್ಮ ಜೇಬನ್ನು ಖಾಲಿ ಮಾಡಿಸುತ್ತಾರೆಂದು ಕಣ್ಣೀರಿಟ್ಟಿದ್ದರೆ, ಹುಡುಗಿಯೊಬ್ಬಳು ಗಂಡಂದಿರು ಹೇಗೆ ಹೆಂಡತಿಯರ ಮೇಲೆ ದೌರ್ಜನ್ಯ ನಡೆಸುತ್ತಾರೆ ಎಂದು ಅದೇ ಟ್ಯೂನಿಗೆ ಹಾಡುವ ಮೂಲಕ ಧನುಶ್ ಹಾಡಿಗೆ ಉತ್ತರವನ್ನು ಕೊಟ್ಟಿದ್ದಾಳೆ.



ಪಾಕಿಸ್ತಾನಿ ಕೊಲವೇರಿ ಹಾಡು

ಇನ್ನು ರಾಜಕೀಯವಾಗೂ ಈ ಹಾಡು ಉಪಯೋಗವಾಗಿದೆ. ಪಾಕಿಸ್ತಾನದ ಕೆಲವರು ಈ ಹಾಡನ್ನು "ವೇರ್ ಇಸ್ ಡೆಮಾಕ್ರಸಿ, ಡೆಮಾಕ್ರಸಿ, ಡೆಮಾಕ್ರಸಿ ಜಿ" ಎಂದು ಬದಲಾಯಿಸಿ, ತಮ್ಮ ದೇಶದ ಭ್ರಷ್ಟ ರಾಜಕಾರಣಿಗಳ ವೀಡಿಯೋ ತುಣುಕುಗಳನ್ನು ಸೇರಿಸಿ ಚಿತ್ರಿಸಿದ್ದಾರೆ. ಅದು ತುಂಬಾ ಮಜವಾಗಿದೆ.

ಹಾಗೆಯೇ ಕೇರಳದ ಕೆಲ ಯುವಕರು ಇದೇ ಹಾಡನ್ನು ಈಗ ಕೇರಳ ಮತ್ತು ತಮಿಳುನಾಡಿನ ನಡುವೆ ಜ್ವಲಂತ ಸಮಸ್ಯೆಯಾಗಿರುವ ಮುಲ್ಲಪೆರಿಯಾರ್ ಡ್ಯಾಮ್ ಕುರಿತು ಉಪಯೋಗಿಸಿಕೊಂಡಿದ್ದಾರೆ. ಅದರಲ್ಲಿ ಅವರು ಈ ಡ್ಯಾಮಿನಿಂದಾಗಿ ಹೇಗೆ ತಮ್ಮ ರಾಜ್ಯದ ಜನರಿಗೆ ತೊಂದರೆ ಆಗುತ್ತದೆಂದು ವಿವರಿಸಿದ್ದಾರೆ.

ಎಲ್ಲಕ್ಕಿಂತ ಹಾಸ್ಯಮಯವಾಗಿರುವುದು ನರಹಂತಕ ಹಿಟ್ಲರ್ ಈ ಹಾಡಿಗೆ 'ಪ್ರತಿಕ್ರಿಯಿಸಿರುವ' ತುಣುಕು. ಹಿಟ್ಲರ್ ಕುರಿತಂತೆ ಬಿಡುಗಡೆಗೊಂಡಿದ್ದ ಒಂದು ಸಿನಿಮಾದ ಒಂದು ದೃಶ್ಯಕ್ಕೆ ಹೊಸ ಸಬ್ ಟೈಟಲ್‌ಗಳನ್ನು ಹಾಕಿರುವ ಈ ತುಣುಕಿನಲ್ಲಿ ಕೊಲವೇರಿ ಹಾಡು ಗಳಿಸಿರುವ ಜನಪ್ರಿಯತೆ ಬಗ್ಗೆ ಹಿಟ್ಲರ್‌ಗೆ ತುಂಬಾ ಕೋಪ ಬಂದಿದೆ. ಆ ಹಾಡನ್ನು ಯಾಕೆ ಜನ ಇಷ್ಟ ಪಡುತ್ತಿದ್ದಾರೆ ಎಂದು ಆತನಿಗೆ ಅರ್ಥವಾಗಿಲ್ಲ. "ನಾನು ಅದನ್ನು 37 ಬಾರಿ ನೋಡಿದೆ ಆದರೆ ಅದರ ಒಂದು ಸಾಲೂ ನನಗೆ ಅರ್ಥವಾಗಲಿಲ್ಲ. ಹಾಗಿದ್ದೂ ಲಕ್ಷಾಂತರ ಜನ ಅದನ್ನು ಇಷ್ಟಪಟ್ಟಿದ್ದಾರೆಂದರೆ ಏನು ಅರ್ಥ?" ಎಂದು ಹಿಟ್ಲರ್ ಅಬ್ಬರಿಸುತ್ತಾನೆ. ಮಾತ್ರವಲ್ಲ "ಈ ಹಾಡಿನ ವಿರುದ್ಧ ಸಮರ ಸಾರಬೇಕೆಂದು ನಾನು ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್ ಜೊತೆಗೂಡಲೂ ಸಿದ್ಧನಿದ್ದೆ. ಆದರೆ ಆತ ತಾನು ಅಸಹಾಯಕ ಎಂದ. ಯಾಕೆಂದರೆ ಇಂಗ್ಲೆಂಡಿನ ರಾಣಿಗೂ ಆ ಹಾಡು ಇಷ್ಟವಾಗಿದೆಯಂತೆ" ಎಂದು ಕೊರಗುತ್ತಾನೆ.

'ಕೊಲವೇರಿ' ಹಾಡಿನ ಈ ವಿವಿಧ ಅವತರಣಿಕೆಗಳನ್ನು ನೋಡಲು ಯೂ ಟ್ಯೂಬಿನ ವೆಬ್‌ಸೈಟಿಗೆ ಹೋಗಿ 'ಕೊಲವೇರಿ ಡಿಫರೆಂಟ್ ವರ್ಶನ್ಸ್' ಎಂದು ಟೈಪ್ ಮಾಡಿದರೆ ಸಾಕು, ಅವೆಲ್ಲವೂ ಸಿಗುತ್ತವೆ. ಎಂಜಾಯ್!

ಪತ್ರಕರ್ತನಿಗೆ ರಾಜಕಾರಣಿ ಅಂಜಬೇಕಲ್ಲವಾ!

ವಿಧಾನಸಭೆಯ ಕಲಾಪದ ಸಮಯದಲ್ಲಿ ಹಿಂದಿನ ಬೆಂಚಿನಲ್ಲಿ ಕೂತು ಸಾಕಾಗಿ ಹೋದ ಎಡೂರಪ್ಪ ಅಸಹನೆಯಿಂದ ಎದ್ದು ಹೊರಬಿದ್ದು ತಾನು ಕಳೆದುಕೊಂಡ ಸಾಮ್ರಾಜ್ಯವನ್ನು ಮತ್ತೆ ಪಡೆಯಲೋಸ್ಕರ ದಿಲ್ಲಿ ದಂಡಯಾತ್ರೆಯನ್ನು ಮುಗಿಸಿ ಬಂದರಂತಲ್ಲಾ. ಕಡೆಗೆ ರಾಜಮಾರ್ಗದಿಂದ ಏನೂ ಪ್ರಯೋಜನವಿಲ್ಲ, ವಾಮಮಾರ್ಗವೇ ಸರಿ ಎಂದು ತಿಳಿದು ದಕ್ಷಿಣ ಕನ್ನಡದ ಕಲ್ಲಡ್ಕದಲ್ಲಿ ವಾಜಪೇಯ ಎಂಬ ವಾಮಾಚಾರವನ್ನು ಕೈಗೊಂಡು ಜೊತೆಯಲ್ಲಿ ಶೋಬನೂ ಇರಬೇಕೆಂದು ಹಠಹಿಡಿದರಂತಲ್ಲಾ.

ಆಗ 'ಜನಕ್ಕೆ ತಪ್ಪು ಸಂದೇಶ ಹೋಗುವುದುಂಟು. ನಾನು ಬರುವುದಿಲ್ಲ' ಎಂದು ಶೋಬಕ್ಕ ತಲೆ ಹೊಗೆದಂತೆ ಹಠ ಹಿಡಿದಳಂತಲ್ಲಾ. 'ನನ್ನ ಎಡದಲ್ಲಿ ಭಾರತಿಶೆಟ್ಟಿಯನ್ನು ನೆಪಕ್ಕೆ ಕೂರಿಸುತ್ತೇನೆ. ನೀನು ಬಲದಲ್ಲಿ ಕುಳಿತಿರು' ಎಂದು ಯಡ್ಡಿ ಕಣ್ಣೀರು ಹಾಕಿದರಂತಲ್ಲಾ.

ಧೂತ್ತೇರಿ

ಯಾಹೂ

ಈ ಹುಚ್ಚುರಾಯಸ್ವಾಮಿಯ ಕಣ್ಣೀರು ನೋಡಲಾಗದ ಶೋಬಾ ಕರಂದ್ಲಾಜೆ ವಿದುರನ ಪತ್ನಿಯಂತೆ ಮುಜುಗರದಿಂದ ಕೂತಿದ್ದೇ ಕಾರಣವಾಗಿ, ಯತ್ನಾಳನ ಬಾಯಿಗೆ ಅಗ್ಗವಾಗಿ ಬಿದ್ದಳಂತಲ್ಲಾ, ಥೂತ್ತೇರಿ!

* * * * *

ಆಯಾ ಜಾತಿಯವರನ್ನ ಆಯಾ ಜಾತಿಯವರಿಂದಲೇ ಟೀಕೆ ಮಾಡಿಸುವ ಕಾರಣಕ್ಕೆ ಸಕಲಿಷ್ಟು ಜಾತಿಯ ಸಣ್ಣ ಲೀಡರುಗಳನ್ನ ಇಟ್ಟುಕೊಂಡಿರುವ ಜೆಡಿಎಸ್ ಪಾರ್ಟಿಯ ಬಸನಗೌಡ ಪಾಟೀಲ್ ಯತ್ನಾಳ ಎಂಬ ದಡ್ಡ ಯಡ್ಡಿ ಪಕ್ಕದಲ್ಲಿ ಶೋಬಕ್ಕನನ್ನ ನೋಡಿ 'ಈ ಯಾಗ ಅಪವಿತ್ರಗೊಂಡಿದೆ. ಯಡ್ಡಿ ಪಕ್ಕ ಶೋಬ ಇರುವುದು ಸರಿಯಲ್ಲ, ಜನಕ್ಕೆ ಮಾದರಿಯಾಗಬೇಕಾದ ಇಂತಹ ಲೀಡರುಗಳು, ಹೀಗೆ ಹಾದಿ ಬೀದಿಯಲ್ಲೋಗುತ್ತಿರುವ ಹೆಂಗಸರನ್ನ ಕರೆದು ಪಕ್ಕದಲ್ಲೇ ಕೂರಿಸಿಕೊಂಡು ಪೂಜೆ ಹವನ ಹೋಮ ಮಾಡಬಾರದು' ಎಂದು ಕೂಗಾಡಿದರಂತಲ್ಲಾ. ನಂತರ ಯತ್ನಾಳ್ ಮತ್ತೂ ಮುಂದುವರಿಯಲು ಯತ್ನಿಸುತ್ತಿದ್ದಾಗ ಓಡಿ ಬಂದ ಚಲುವರಾಯಸ್ವಾಮಿ 'ಜಾಸ್ತಿ ಮಾತಾಡಬೇಡಿ ಸಾರ್. ಕುಮಾರಣ್ಣಂದು ಸ್ವಲ್ಪ ಎಡೂರಪ್ಪನ ಸಮಸ್ಯೆ ತರನೆ ಇದೆ. ಇನ್ನ ಮೇಲೆ ಮಾತಾಡೋದಾದ್ರೆ ಯಜಮಾನರನ್ನು ಕೇಳಿಕೊಂಡು ಡಿಕ್ಟೇಷನ್ ತಗೊಂಡು ಮಾತಾಡಿ' ಎಂದನಂತಲ್ಲಾ, ಥೂತ್ತೇರಿ!!

* * * * *

ನ್ಯಾಯದ ಪಕ್ಷಪಾತಿಗಳಾದ ಪತ್ರಕರ್ತರೆಂದರೆ ರಾಜಕಾರಣಿಗಳಿಗೆ ಕೀಳರಿಮೆಯುಂಟಾಗಬೇಕು. ಏಕೆಂದರೆ ಆತನ ಸರಳ ಜೀವನ, ಸಾತ್ವಿಕವಾದ ಸಿಟ್ಟು, ಜಾತಿ, ಧರ್ಮ, ಪ್ರದೇಶ ಈ ಯಾವುದರ ಬಗ್ಗೆಯೂ ಕಿಂಚಿತ್ತೂ ಪೂರ್ವಾಗ್ರಹವಿಲ್ಲದೆ ಗ್ರಹಿಸಿದ್ದನ್ನು ದಾಖಲಿಸಿ ಸತ್ಯವನ್ನು ಶೋಧಿಸುವ ಆತನ ಲೇಖನಿಯಿಂದ ಬಂಧು–ಬಾಂಧವರೂ ಕೂಡ ತಪ್ಪಿಸಿಕೊಳ್ಳಲಾಗುವುದಿಲ್ಲ. ಒಂದು ಕಾಲದಲ್ಲಿ ಹೀಗಿದ್ದ ಪತ್ರಕರ್ತರು, ಇಂದು ರಾಜಕಾರಣಿಗಳೊಡನೆ ಸ್ಪರ್ಧೆಗಿಳಿದು ಯಃಕಶ್ಚಿತ್ ರೇಣುಕಾಚಾರಿಯಂತವನಿಂದಲೂ ಟೀಕೆಗೆ ತುತ್ತಾಗಿ ಹೋಗಿದ್ದಾರಂತಲ್ಲಾ. ಈ ಪೈಕಿ ಬ್ರಹ್ಮಾಂಡ ಪತ್ರಕರ್ತನೊಬ್ಬನ ಬಗ್ಗೆ ಇಬ್ಬರು ಹೆಂಡಿರ ಮುದ್ದಿನ ಕವಿಯಾದ ಸಿದ್ದಶೆಟ್ಟಿ ಪಟ್ಟಣಲಿಂಗ ನೊಂದುಕೊಂಡು ಮಾತನಾಡಿದರಂತಲ್ಲಾ. ನಮ್ಮ ಹೂ ಮನಸ್ಸಿನ ಕವಿಯ ಮನನೋಯಿಸಿದ ನೀಚನಾರು ಎಂದು ಹುಡುಕಿ ಸಾಕಾಗಿ ಕೊನೆಗೆ ಪ್ರಜಾಪ್ರಭ ಪತ್ರಿಕೆಗೆ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ನಮಸ್ತೇ ಸದಾವತ್ಸಲೇ ಮಾತೃಭೂಮಿ..."

"ಹಲೋ?"



"ಹಲೋ ಸಾರ್ ನಾನು, ಪತ್ರಕರ್ತ, ಸಂಪಾದಕರು ಇದ್ದಾರ ಸಾರ್?"

"ನಾನೇ ಸಂಪಾದಕ. ಯಾರು ನೀವು?"

"ನಾನೂ ಪತ್ರಕರ್ತ ಸಾರ್."

"ಯಾವ ಪತ್ರಿಕೆ?"

"ವಿಪ್ರೋತ್ತಮರ ವಾಣಿ ಅಂತ, ಲೋಕಲ್ ಪತ್ರಿಕೆ ಸಾರ್."

"ನಿಮ್ಮ ಸರೇನು?"

"ಕಂಚಿಕೋಟಿ ಸೀತಾರಾಮಶಾಸ್ತ್ರಿ ಅಂತ ಸಾರ್.?"

"ಏನ್ ಶಾಸ್ತ್ರಿಗಳೇ ಚೆನ್ನಾಗಿದ್ದೀರ? ಏನು ಸಮಾಚಾರ? ಏನು ಯಾತಕ್ಕೆ ಫೋನ್ ಮಾಡಿದ್ರಿ ಹೇಳಿ."

"ನನಗೆ ಒಂದು ಮಾಹಿತಿ ಬೇಕಾಗಿದೆ. ಅದಕ್ಕಾಗಿ ಹುಡುಕ್ತಾಯಿದ್ದೀನಿ."

"ಯಾವ ಮಾಹಿತಿ ಹೇಳಿ."

"ಏನಿಲ್ಲಾ, ನಮ್ಮ ಪಟ್ಟಣಲಿಂಗದ ಸಿದ್ದಶೆಟ್ಟರಿಗೆ ಒಬ್ಬ ಶಿಷ್ಯ ಇದ್ದನಂತೆ. ಆತ ತುಂಬ ಬಡವನಾಗಿದ್ದನಂತೆ. ಬಡತನದ ಸಿಟ್ಟನ್ನು ಓದಿಗೆ ಬಳಸಿಕೊಂಡದ್ದರಿಂದ ಒಳ್ಳೆ ಮಾರ್ಕ್ಸ್ ತಗದು ಪಾಸಾಗಿ ಪತ್ರಿಕೋದ್ಯಮಕ್ಕೆ ಸೇರಿಕೊಂಡನಂತೆ. ಯಾಕೆ ಅಂದ್ರೆ ಪತ್ರಿಕೆಯಿಂದ ಮಾತ್ರ ಜನಾಂಗವನ್ನು ಎಚ್ಚರಿಸಿ, ಸಂಘಟಿಸಿ, ಸಂಸ್ಕೃತಿಯ ವಕ್ತಾರರನ್ನಾಗಿ ಮಾಡಿ ಅವರೆಲ್ಲಾ ಸಮಾಜದ ಜುಟ್ಟನ್ನು ಹಿಡಿದುಕೊಂಡು ಆಳುವಂತೆ ಮಾಡಬೇಕೆಂಬ ಛಲ ಅವನಲ್ಲಿತ್ತಂತೆ."

"ಅಂಥ ಛಲ ಬರೋವರಿಗೂ ನಮ್ಮವರು ಮುಂದೆ ಬರೊಲ್ಲ, ಉದ್ಧಾರವಾಗಲ್ಲ, ಅಭಿವೃದ್ಧಿಯಾಗಲ್ಲ, ಶ್ರೀಮಂತರಾಗೊಲ್ಲ."

"ಯಾಕೆ ಅಷ್ಟೊಂದು ಪದ ಬಳುಸ್ತಿರಿ?"

"ಹೇಳೋದು ಪರಿಣಾಮಕಾರಿಯಾಗಬೇಕಾದ್ರೆ, ಅಷ್ಟು ಪದ ಬಳಸ್ಲೇಬೇಕು."

"ಕನ್ನಡದಲ್ಲಿ ಗೋಲಿತರ ಒಂದೊಂದು ಪದ ಇವೆ. ಅವನ್ನ ಹುಡುಕಿ ಬಳಸಿ, ಇರ್ಲಿ, ಆ ಸಿದ್ದಶೆಟ್ಟರ ಶಿಷ್ಯನ ಆಸೆ ಕೈಗೂಡತಂತೆ. ಆದ್ರೆ ಬರೀ ಲೇಖನಿ ಇದ್ರೆ ಸಾಲದು, ಜೊತೆಗೆ ಹಣಾನೂ ಇರಬೇಕು ಅಂತ ತೀರ್ಮಾನ ತಗೊಂಡನಂತೆ."

"ಒಳ್ಳೆ ತೀರ್ಮಾನ. ಒಳ್ಳೆ ನಿರ್ಧಾರ. ಒಳ್ಳೆ ನಿಶ್ಚಯ ಅಲ್ಲವೇ?"

"ಅವನ ಭಾಗಕ್ಕದು ಒಳ್ಳೆ ತೀರ್ಮಾನವೇ ಇರಬಹುದು. ಅಂದಿನಿಂದ್ಲೇ ಅವನಲ್ಲಿದ್ದ ಸೈಕಲ್ ಬದಲಿಗೆ ಸುವೇಗ ಬಂತಂತೆ. ಆಮೇಲೆ ಲೂನಾ ತಗೊಂಡನಂತೆ. ನಿಧಾನಕ್ಕೆ ಎಕ್ಸೆಲ್ ಸೂಪರ್‌ಗಾಡಿ ತಗೊಂಡನಂತೆ. ನಂತರ ಸ್ಕೂಟರ್ ತಗೊಂಡನಂತೆ. ಈಗ ಕಾರುಗಳು, ಬಂಗ್ಲೆಗಳು, ಸೈಟುಗಳು ಎಲ್ಲಾ ಇದೆಯಂತೆ. ಆತನ ಆದಾಯದ ಮೂಲ ಹುಡುಕಿದರೆ, ಜನಾರ್ದನ ರೆಡ್ಡಿ ಖರ್ಚು ವೆಚ್ಚದ ಪುಸ್ತಕದಲ್ಲಿ ಆತನ ಇನಿಷಿಯಲ್ ಮಾತ್ರ ಇದೆಯಂತೆ. ಅದ್ರಿಂದ ಆತನ ವಿವರ ನಿಮಗೇನಾದ್ರೂ ಗೊತ್ತೇ?"

"ಆತನ ವಿವರ ನಿಮಗ್ಯಾಕೆ ಬೇಕೇಳಿ? ನಾನು ಇದೀಗ ತಾನೇ ತರಿಸಿಕೊಂಡ ಮಾಹಿತಿ ಪ್ರಕಾರ, ವಿಪ್ರೋತ್ತಮರ ವಾಣಿ ಅನ್ನೋ ಪತ್ರಿಕೆನೂ ಇಲ್ಲ, ಕಂಚಿಕೋಟಿ ಸೀತಾರಾಮ ತೀರಿಕೊಂಡು ಇವತ್ತಿಗೆ ಒಂದು ವರ್ಷ ಆಯಿತು. ಯಾರು ನೀವು ನಿಜ ಹೇಳಿ."


"ಥೂತ್ತೇರಿ!!!"

ತುಮಕೂರು

ಕೆಎಸ್‌ಆರ್‌ಟಿಸಿ ಖೂಳರು

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಇದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ತುಮಕೂರು ವಿಭಾಗದ ನೌಕರರ ಕರಾಳ ಕತೆ. ಕಾರ್ಮಿಕರ ಸಮಸ್ಯೆಯೆಂದರೆ ಸರಿಯಾದ ವೇತನ ಅಥವಾ ಸೂಕ್ತ ಸವಲತ್ತುಗಳ ಕೊರತೆ, ಮೇಲಧಿಕಾರಿಗಳ ದೌರ್ಜನ್ಯ ಇತ್ಯಾದಿಗಳು ಮಾಮೂಲಿ ಸಂಗತಿ. ಆದರೆ ತುಮಕೂರು ವಿಭಾಗದ ಸಂಸ್ಥೆಯ ಸಿಬ್ಬಂದಿ ಅನುಭವಿಸುತ್ತಿರುವುದು ಅದಕ್ಕಿಂತಲೂ ಘೋರವಾದದ್ದು. ನೌಕರಿಗೆ ಸಂಬಂಧಿಸಿದ ವಿಷಯಗಳಷ್ಟೇ ಅಲ್ಲದೇ ಎಷ್ಟೋ ಜನ ಅಮಾಯಕ ಸಿಬ್ಬಂದಿಯ ಕೌಟುಂಬಿಕ ಜೀವನವನ್ನೇ ಹಾಳುಗೆಡವುತ್ತಿರುವ ದಾರುಣ ಕತೆ. ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು ಹಲವಾರು ಸಿಬ್ಬಂದಿ ವರ್ಗದವರು ಜೀವನದಲ್ಲೇ ಜಿಗುಪ್ಸೆಗೊಂಡಿರುವ ಹೀನಾಯವಾದ ಕತೆ.


ಶಶಿಕಲಾ

ನೌಕರರ ಇಂಥ ದಾರುಣ ಸ್ಥಿತಿಗೆ ಕಾರಣಕರ್ತರಾದವರು ಸಂಸ್ಥೆಯ ವಿಭಾಗದ ನಿಯಂತ್ರಣಾಧಿಕಾರಿ ಕೆ.ಆರ್. ವಿಶ್ವನಾಥ್ ಮತ್ತು ಶಿರಾ ಡಿಪೋದಲ್ಲಿ ಶೂರ್ಪನಖಿಯಂತೆ ಮೆರೆಯುತ್ತಿರುವ ಶಶಿಕಲಾ ಎಂಬ ಗುಮಾಸ್ತೆ ಹಾಗೂ ಇವರ ದುಷ್ಟ ಪಟಾಲಂ. ಈ ದುಷ್ಟಕೂಟದ ದೌರ್ಜನ್ಯಕ್ಕೆ ತುತ್ತಾಗಿರುವ ಸಿಬ್ಬಂದಿಯ ಅರಣ್ಯರೋದನವನ್ನು ಕೇಳುವವರೇ ಇಲ್ಲ.


ಈಗ ಹಾಲಿ ಶಿರಾ ಡಿಪೋದಲ್ಲಿ ಗುಮಾಸ್ತೆಯಾಗಿರುವ ಶಶಿಕಲಾ ಹಲವು ಸಿಬ್ಬಂದಿಗಳ ಬದುಕನ್ನು ನರಕವಾಗಿಸಿದ್ದಾಳೆ. ಅದರ ಕೆಲವು ಸ್ಯಾಂಪಲ್‌ಗಳನ್ನು ನೋಡೋಣ.



ಈಕೆ ಚಿತ್ರದುರ್ಗ ಡಿಪೋದಲ್ಲಿದ್ದಾಗ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ವಿತರಿಸುವ ಕೌಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಭಾರೀ ಹಣದ ದುರುಪಯೋಗ ಮಾಡಿಕೊಂಡಿದ್ದಳು. ಈ ತಪ್ಪನ್ನು ಪತ್ತೆಹಚ್ಚಿದ ದಾವಣಗೆರೆಯ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿದ್ದ ವೆಂಕಟೇಶ್ ರೆಡ್ಡಿ ಈಕೆಯ ವಿರುದ್ಧ ಶಿಸ್ತು ಕ್ರಮಕ್ಕೆ ಮುಂದಾದರು. ಈ ಶೂರ್ಪನಖಿಯ ಯಾವ ನೀಚತಂತ್ರಗಳಿಗೂ ಈ ಅಧಿಕಾರಿ ಮಣಿಯದಿದ್ದನ್ನು ಕಂಡು ಕೆರಳಿದ ಈಕೆ ವೆಂಕಟೇಶ್ ರೆಡ್ಡಿ ತನ್ನ ಮೇಲೆ ಲೈಂಗಿಕ ದೌರ್ಜನ್ಯವೆಸಗಿದರೆಂದು ಬೊಬ್ಬೆಹಾಕಿ ಮೇಲಧಿಕಾರಿಗಳಿಗೆ ದೂರು ಕೊಟ್ಟೇಬಿಟ್ಟಳು. ಸವಿವರವಾದ ತನಿಖೆಯ ನಂತರ ಇವಳ ಈ ನೀಚ ಆರೋಪ ನಿರಾಧಾರವಾದುದೆಂದೂ ಹಾಗೂ ಆಕೆ ಹಣ ದುರುಪಯೋಗ ಮಾಡಿಕೊಂಡಿರುವುದು ನಿಜವೆಂದೂ ಸಾಬೀತಾಯಿತು. ಮೇಲಧಿಕಾರಿಗಳು ಈಕೆಯನ್ನು ಕೆಲಸದಿಂದ ಸಸ್ಪೆಂಡ್ ಮಾಡಲು ಮುಂದಾದರು. ತನ್ನ ಪಂಚರಂಗಿ ನಾಟಕ ನಡೆಯದೆಂದು ಅರಿವಾದ ಕೂಡಲೇ ಅಧಿಕಾರಿಗಳ ಕೈಕಾಲು ಹಿಡಿದು ತನ್ನ ತಪ್ಪನ್ನು ಒಪ್ಪಿಕೊಂಡು, ಇನ್ನೆಂದೂ ಇಂತಹ ತಪ್ಪು ಮಾಡುವುದಿಲ್ಲವೆಂದು ತಪ್ಪೊಪ್ಪಿಗೆ ಪತ್ರ ಬರೆದು ಕೊಟ್ಟು ಬೀಸುವ ದೊಣ್ಣೆ ತಪ್ಪಿಸಿಕೊಂಡಳು. ಅನುಕಂಪ ತೋರಿದ ಮೇಲಧಿಕಾರಿಗಳು ಪನಿಷ್‌ಮೆಂಟ್ ರೂಪದಲ್ಲಿ ಈಕೆಯನ್ನು ತುಮಕೂರು ವಿಭಾಗದ ಶಿರಾ ಡಿಪೋಗೆ ಟ್ರಾನ್ಸ್‌ಫರ್ ಮಾಡಿ ಕಳಿಸಿದರು. ಈ ಪೀಡೆ ಶಿರಾ ಡಿಪೋಗೆ ಕಾಲಿಟ್ಟದ್ದೇ ಅಲ್ಲಿನ ನೂರಾರು ನೌಕರರ ಪಾಲಿಗೆ ಎಲ್ಲ ಕ್ಷುದ್ರ ಗ್ರಹಗಳು ಒಟ್ಟಿಗೆ ಹೆಗಲೇರಿದಂತಾಗಿಬಿಟ್ಟಿದೆ.

ಶಿರಾ ಡಿಪೋಗೆ ವಕ್ಕರಿಸಿದ ಈಕೆ ಪ್ರೊಮೋಷನ್ ಪಡೆದು ಬಂದಿರುವ ವಿಶೇಷ ಅಧಿಕಾರಿಯಂತೆ ವರ್ತಿಸತೊಡಗಿದ್ದಾಳೆ. ಎಲ್ಲಾ ಸಿಬ್ಬಂದಿ ಬೆಳಿಗ್ಗೆ 8 ಕ್ಕೆ ಹಾಜರಾದರೆ ಈಕೆ ಸೂರ್ಯ ನೆತ್ತಿ ಮೇಲೆ ಬರುವ ಮುಂಚೆ ಕಚೇರಿಗೆ ಕಾಲೇ ಇಡುವುದಿಲ್ಲ. ಹಾಗಾಗಿ ಹೋಗಲಿ ಎಂದರೆ ಈಕೆ ಬಂದ ತಕ್ಷಣ ಇತರ ಸಹೋದ್ಯೋಗಿಗಳು ಎದ್ದು ನಿಂತು ಸಲಾಮು ಹೊಡೆಯಬೇಕಂತೆ. ಒಂದು ವೇಳೆ ಯಾರಾದರೂ ಈ ಬಗ್ಗೆ ಸೊಲ್ಲೆತ್ತಿದರೆ ಬಾಯಿಂದ ಹೇಳಲು ಅಸಹ್ಯಕರವಾದ ಅಶ್ಲೀಲ ಪದಪುಂಜಗಳನ್ನೂ ಪ್ರಯೋಗಿಸುತ್ತಾಳೆ. ಇವಳ ಈ ಭಯಾನಕ ಅವತಾರವನ್ನು ಕಂಡು ಸಿಬ್ಬಂದಿ ಅಕ್ಷರಶಃ ನಡುಗಿ ಹೋಗಿದ್ದಾರೆ.


ಈಕೆಯ ನೀಚ ವಿಕೃತಿಯ ಬಲಿಪಶುಗಳ ಪಟ್ಟಿ ಬಹಳ ಉದ್ದವಿದೆ. ಸವಿತ ಮತ್ತು ಭವ್ಯ (ಇಬ್ಬರ ಹೆಸರನ್ನೂ ಬದಲಿಸಲಾಗಿದೆ) ಎಂಬ ಇಬ್ಬರು ಹೆಣ್ಣುಮಕ್ಕಳ ದುರಾದೃಷ್ಟಕ್ಕೆ ಈಕೆಯ ಸಹೋದ್ಯೋಗಿಗಳು. ದಿನನಿತ್ಯ ಈಕೆಯ ದೌರ್ಜನ್ಯದಿಂದ ಬೇಸತ್ತು ಮೇಲಧಿಕಾರಿಗಳಿಗೆ ದೂರು ಕೊಟ್ಟರು. ಆದರೆ ಈಕೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕಿದ್ದ ವಿಭಾಗ ನಿಯಂತ್ರಣಾಧಿಕಾರಿ ಕೆ.ಆರ್. ವಿಶ್ವನಾಥ್ ದೂರು ಕೊಟ್ಟವರನ್ನೇ ಶಿಕ್ಷೆಗೆ ಗುರಿಪಡಿಸಿದ. ಮೇಲಧಿಕಾರಿಗೆ ದೂರುಕೊಟ್ಟ ತಪ್ಪಿಗೆ ಒಬ್ಬರನ್ನು ತುಮಕೂರಿಗೂ ಮತ್ತೊಬ್ಬರನ್ನು ತಿಪಟೂರಿಗೂ ವರ್ಗಮಾಡಿ ಈ ಹೀನ ಹೆಂಗಸಿನ ಬಗ್ಗೆ ತನ್ನ ಅಚಲ ನಿಷ್ಠೆಯನ್ನು ಮುಂದುವರಿಸಿದ. ಈ ಶೂರ್ಪನಖಿಗೂ ಆ ಅಧಿಕಾರಿಗೂ ಅದೇನು ಅನುಬಂಧವೋ ದೇವರೇ ಬಲ್ಲ. ಈಕೆಯ ಒನಪು ವಯ್ಯಾರಗಳಿಗೆ ಆತ ಮರುಳಾಗಿದ್ದಾನೋ ಅಥವಾ ಇವರ ನಡುವೆ ಇನ್ನಾವ ರೀತಿಯ ಒಳಒಪ್ಪಂದವಾಗಿದೆಯೋ ಮೇಲಧಿಕಾರಿಗಳೇ ಪತ್ತೆಹಚ್ಚಬೇಕು. ಇಷ್ಟಕ್ಕೆ ತೃಪ್ತಳಾಗದ ಶಶಿಕಲಾ ಮದುವೆ ನಿಗದಿಯಾಗಿದ್ದ ಭವ್ಯಳ ಗಂಡನ ಮನೆಯನ್ನು ಹುಡುಕಿ ಹೊರಟಳು. ಭವ್ಯಳ ಬಗ್ಗೆ ಇಲ್ಲಸಲ್ಲದ ಆರೋಪ ಹೊರಿಸಿ ಮದುವೆ ಮುರಿದು ಹಾಕಲು ಶತಾಯಗತಾಯ ಪ್ರಯತ್ನಿಸಿದ್ದಾಳೆ. ಅಮಾಯಕ ಯುವತಿ ಮತ್ತು ಮನೆಯವರು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದ್ದಾಳೆ. ಅಷ್ಟು ಸಾಲದೆಂಬಂತೆ ಹಿರಿಯೂರಿನಿಂದ ಗೂಂಡಾಗಳನ್ನು ಕರೆತಂದು ಈ ಹೆಣ್ಣುಮಕ್ಕಳನ್ನು ನಿಂದಿಸಿ ಜೀವಬೆದರಿಕೆ ಹಾಕಿದ್ದಾಳೆ. ಇದರಿಂದ ಭಯಭೀತರಾದ ಭವ್ಯಳ ವಿಧವೆ ತಾಯಿ ಮೇಲಧಿಕಾರಿಗಳಿಗೆ ದೂರು ನೀಡಿ, ಅಧಿಕಾರಿಗಳಲ್ಲಿ ಬೇಡಿಕೊಂಡರೂ ಈ ಲೇಡಿ ಡಾನ್ ಅನ್ನು ಕನಿಷ್ಠ ಪಕ್ಷ ವಿಚಾರಿಸುವವರೂ ದಿಕ್ಕಿಲ್ಲ.



ಲೋಕೇಶ್

ಅಕೌಂಟ್ ಸೂಪರ್‌ವೈಸರ್ ಆಗಿದ್ದ ಇನ್ನೇನು ನಿವೃತ್ತಿಯ ಅಂಚಿನಲ್ಲಿರುವ ಮಧು ಎಂಬುವವರು ಈ ಶೂರ್ಪನಖಿಯ ಕರ್ತವ್ಯ ಲೋಪದ ಬಗ್ಗೆ ಪ್ರಶ್ನಿಸುವ ಧೈರ್ಯ ಮಾಡಿದರು. ಶಿಸ್ತು, ಸಮಯಪಾಲನೆ ಪಾಲಿಸುವಂತೆ 2-3 ಬಾರಿ ಆಕೆಗೆ ತಿಳಿಹೇಳಿದರು. ಅಲ್ಲಿಗೆ ಮುಗಿಯಿತು. ಈಕೆ ತನ್ನ ಬತ್ತಳಿಕೆಯಲ್ಲಿರುವ ಹೀನ ಅಸ್ತ್ರವೊಂದನ್ನು ಪ್ರಯೋಗಿಸಿದಳು. ಮಧು ತನ್ನ ಕೈಹಿಡಿದು ಎಳೆದು ಅತ್ಯಾಚಾರಕ್ಕೆ ಯತ್ನಿಸಿದ ಎಂದು ಪೊಲೀಸ್ ಠಾಣೆಗೆ ಕರೆಸಿಬಿಟ್ಟಳು. ಇದರ ಪೂರ್ವಾಪರ ತಿಳಿಯದ ಪೊಲೀಸರು ಸಹ ಹೀನ ನಡತೆಯವಳ ಪರ ನಿಂತಿದ್ದನ್ನು ಕಂಡು ಕುಸಿದುಹೋದ ಸಭ್ಯಸ್ಥನಾಗಿದ್ದ ಮಧು ಸೀದಾ ಮೇಲಧಿಕಾರಿಗಳ ಕೈಕಾಲು ಹಿಡಿದರು. ಇದರ ಅಂತಿಮ ಫಲವಾಗಿ ಪಾವಗಡಕ್ಕೆ ವರ್ಗವಾದರು. ಲೇಡಿ ಡಾನ್ ಬಗ್ಗೆ ಮೇಲಧಿಕಾರಿಗಳ ಈ ಪರಿಯ ಪ್ರೇಮದ ಒಳಗುಟ್ಟು ಏನಿರಬಹುದು?

ಸಂಸ್ಥೆಯಲ್ಲಿ 25 ವರ್ಷಗಳಿಂದ ಚಾಲಕನಾಗಿ ಸೇವೆ ಸಲ್ಲಿಸುತ್ತಿರುವ ಲೋಕೇಶ್ ಎಂಬುವವರು ಕಳೆದ 6 ವರ್ಷಗಳಿಂದ ಶಿರಾ ಡಿಪೋದಲ್ಲಿದ್ದಾರೆ. ತಮ್ಮ ನಡೆ-ನುಡಿಗಳಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇಷ್ಟು ವರ್ಷದ ಸರ್ವೀಸ್‌ನಲ್ಲಿ ತಮ್ಮ ಜೊತೆಯ ಕಂಡಕ್ಟರ್‌ಗಳಿಂದ ಒಂದು ಕಾಫಿಯನ್ನೂ ಕುಡಿದಿಲ್ಲ. ಶಿಸ್ತು, ಸಮಯಪಾಲನೆ ಹಾಗೂ ಉತ್ತಮ ನಡತೆಗೆ ಹೆಸರಾದ ಲೋಕೇಶ್ ಅಷ್ಟೇ ಸ್ವಾಭಿಮಾನಿ. ಅನ್ಯಾಯಕ್ಕೆ ತಲೆಬಾಗುವ ಸ್ವಭಾವದವರಲ್ಲ.

2006 ರಲ್ಲಿ ಡಿಪೋ ಮ್ಯಾನೇಜರ್ ಆಗಿದ್ದ ಗುರುರಾಜೇಂದ್ರ ಎಂಬ ಭ್ರಷ್ಟ ಡ್ರೈವರ್ ಕಂಡಕ್ಟರ್‌ಗಳಿಂದ ಲಂಚ ವಸೂಲಿ ಮಾಡುತ್ತಿದ್ದ. ಇದರ ವಿರುದ್ಧ ಸೆಟೆದು ನಿಂತ ಲೋಕೇಶ್ ಆ ಭ್ರಷ್ಟನನ್ನು ಲೋಕಾಯುಕ್ತರಿಗೆ ಹಿಡಿದುಕೊಟ್ಟರು. ನಂತರ ಆ ಸ್ಥಾನಕ್ಕೆ ಬಂದ ಮತ್ತೊಬ್ಬ ಅಧಿಕಾರಿ ಕೂಡ ಅದೇ ಚಾಳಿ ಶುರು ಮಾಡಿದಾಗ ಲೋಕೇಶ್ ನಾನಾ ರೀತಿಯ ಪ್ರಯತ್ನ ಮಾಡಿದರು. ಭ್ರಷ್ಟರ ನಿಯಂತ್ರಣ ಸಾಧ್ಯವಾಗಲಿಲ್ಲ. ಕೊನೆಗೆ ಆಮರಣ ಉಪವಾಸ ಘೋಷಿಸಿದರು. ಪರಿಣಾಮವಾಗಿ ಡಿಪೋ ಮ್ಯಾನೇಜರ್ ಎತ್ತಂಗಡಿಯಾಯ್ತು.




17.08.09

ಅಧಿಕೃತ ಸುತ್ತೋಲೆ

ಆಕ್ಸಿಡೆಂಟ್ ಹೋಮ!!

2009 ಜನವರಿ 1 ರಿಂದ ಜುಲೈ 30 ರ ನಡುವಿನ ಅವಧಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸುಮಾರು 196 ಬಸ್‌ಗಳು ಅಪಘಾತಕ್ಕೀಡಾದವು. ಅದರಲ್ಲಿ 46 ಅಪಘಾತಗಳು ತುಮಕೂರು ವಿಭಾಗವೊಂದರಲ್ಲೇ ಆದವು. ವಿಭಾಗ ನಿಯಂತ್ರಣಾಧಿಕಾರಿ ಕೆ.ಆರ್. ವಿಶ್ವನಾಥ್ ಕೂಡಲೇ ಕಾರ್ಯಪ್ರವೃತ್ತರಾಗಿ ತುರ್ತುಕ್ರಮಗಳನ್ನು ಕೈಗೊಂಡು ಅಪಘಾತ ನಿಯಂತ್ರಣಕ್ಕೆ ಮುಂದಾದರು. ಈ ಉದ್ದೇಶಕ್ಕಾಗಿ 5 ಲಕ್ಷ ರೂ.ಗಳನ್ನೂ ಮೀಸಲಿರಿಸಿದರು. ವಾಹನಗಳನ್ನು ದುರಸ್ತಿಗೊಳಿಸಿ ಸುಸ್ಥಿತಿಯಲ್ಲಿಡುವುದು, ಚಾಲಕರಲ್ಲಿ ಶಿಸ್ತು, ಸಮಯಪ್ರಜ್ಞೆ ಬೆಳೆಸಲು ವಿಶೇಷ ತರಬೇತಿ ನೀಡುವುದು ಇತ್ಯಾದಿ ಕ್ರಮ ಕೈಗೊಂಡಿರಬಹುದೆಂದು ನೀವು ಊಹಿಸುತ್ತಿರಬಹುದು. ಆದರೆ ಶತಶತಮಾನಗಳ ಮೌಢ್ಯವನ್ನು ಮೈಗೂಡಿಸಿಕೊಂಡಿರುವ ಈ ಶತಮೂರ್ಖ ಡಿಸಿ ಮಾಡಿದ್ದೇ ಬೇರೆ. ತುಮಕೂರು ಡಿಪೋದಲ್ಲಿ ಅಪಘಾತಗಳನ್ನು ತಡೆಯಲು ಹೋಮ ಮಾಡಿಸಿದರು. ಅದೂ ಒಂದಲ್ಲಾ ಎರಡಲ್ಲ, ನವಗ್ರಹ ಹೋಮ, ಗಣೇಶ ಹೋಮ, ವಾಸ್ತುಹೋಮ ಮತ್ತು ಸುದರ್ಶನ ಹೋಮಗಳೆಂಬ ಬರೋಬ್ಬರಿ ನಾಲ್ಕು ಹೋಮಗಳು. ಈ ಹೋಮವನ್ನು ಯಶಸ್ವಿಗೊಳಿಸಲು ಎಲ್ಲಾ ಸಿಬ್ಬಂದಿಗಳಿಗೆ ಸುತ್ತೋಲೆಯನ್ನೂ ಹೊರಡಿಸಿದ ಈ ಭೂಪ ಸಿಬ್ಬಂದಿಯಿಂದ ಚಂದಾ ಕೂಡ ಎತ್ತಿದ್ದರು. ಈ ಸಂದರ್ಭದಲ್ಲಿ ಅವರು ಹೇಳಿದ್ದೇನು ಗೊತ್ತೆ? ಬಸ್‌ಸ್ಟ್ಯಾಂಡ್, ಡಿಪೋ ಮುಂತಾದ ಪ್ರಮುಖ ಸ್ಥಳಗಳಲ್ಲಿ ಶಾಶ್ವತ ಹೋಮಕುಂಡ ನಿರ್ಮಿಸಬೇಕು ಎಂದು. ಜನರ ಹಣವನ್ನು ಜನಿವಾರದವರ ಬಾಯಿಗೆ ಹಾಕುತ್ತಿರುವ ಈತನ ಜುಟ್ಟು ಹಿಡಿದು ಕೇಳುವವರು ಯಾರು?


ಅಧಿಕಾರಿಗಳೇ ಬಸ್ ಕಳ್ಳರಾದರೆ?

ಡಿ.ಸಿ. ಕೆ.ಆರ್. ವಿಶ್ವನಾಥರ ಆಳ್ವಿಕೆಯಲ್ಲಿ ಏನೆಲ್ಲಾ ಅವಾಂತರಗಳು ನಡೆಯುತ್ತಿವೆ ಎಂದರೆ ಹೇಳಲು ಅಸಾಧ್ಯ. ಇವರನ್ನು ಪ್ರಶ್ನೆ ಮಾಡಿದ ಯಾರಿಗೇ ಆದರೂ ಇವರು ತಕ್ಕ ಶಾಸ್ತಿ ಮಾಡದೇ ಬಿಡುವುದಿಲ್ಲ. ಅದಕ್ಕಾಗಿ ಈ ಅಧಿಕಾರಿಗಳ ಕೂಟ ಬಸ್ಸನ್ನೇ ಬೇಕಾದರೂ 'ಕಳವು' ಮಾಡಿಸಿಬಿಡುತ್ತಾರೆ. ಅಂಥದೊಂದು ನಿದರ್ಶನ ಇಲ್ಲಿದೆ ನೋಡಿ.

ಬಿ.ಆರ್. ಮೂರ್ತಿ ಎಂಬ ಚಾಲಕ ತಮ್ಮ ವಿರುದ್ಧ ಮಾತಾಡಿದನೆಂದು ತಮ್ಮ ವಿಶೇಷ ಬಾತ್ಮೀದಾರರಿಂದ ಕೇಳಿ ತಿಳಿದುಕೊಂಡ ಡಿ.ಸಿ. ಸಾಹೇಬರು ತನ್ನ ಸಂಚುಕೂಟದ ಮತ್ತೊಬ್ಬ ಅಧಿಕಾರಿ ಪರಮೇಶ್ವರಪ್ಪ ಎಂಬುವವರ ಜೊತೆಗೂಡಿ ಸಂಚೊಂದನ್ನು ರೂಪಿಸಿದರು. ಡ್ರೈವರ್ ಮೂರ್ತಿ ತುಮಕೂರು ಬಸ್ ನಿಲ್ದಾಣದಲ್ಲಿ ಬಸ್ ನಿಲ್ಲಿಸಿ ಹೊರಗೆ ಊಟಕ್ಕೋ ತಿಂಡಿಗೋ ಹೋಗಿದ್ದ ಸಂದರ್ಭ ಸಾಧಿಸಿ ತಮ್ಮ ನೆಚ್ಚಿನ ಭಂಟರ ಮೂಲಕ ಬಸ್ಸನ್ನು ಬೇರೆಡೆಗೆ ಸಾಗಿಸಿಬಿಟ್ಟರು. ಬಸ್ ನಾಪತ್ತೆಯಾಗಿದ್ದನ್ನು ಕಂಡು ಗಾಬರಿಗೊಂಡ ಚಾಲಕ ಮೇಲಧಿಕಾರಿಗಳಿಗೆ ತಿಳಿಸಿ ಪೊಲೀಸ್ ಕಂಪ್ಲೇಂಟ್ ಕೊಡಲು ಕೇಳಿಕೊಂಡರೆ ಅದನ್ನು ನಿರಾಕರಿಸಿದ ಅಧಿಕಾರಿಗಳು "ಬಸ್ಸನ್ನು ನೀನೇ ಹುಡುಕಿ ತಾ, ಇಲ್ಲವಾದರೆ ಸಸ್ಪೆಂಡ್, ಡಿಸ್‌ಮಿಸ್" ಎಂದೆಲ್ಲಾ ಬೆದರಿಸಿದರು. ಹೀಗೆ ಅವರು ನೀಡಿದ ನಾನಾ ರೀತಿಯ ಕಿರುಕುಳದಿಂದ ಬೇಸತ್ತ ಡ್ರೈವರ್ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ. ಆದರೆ ಸಹೋದ್ಯೋಗಿಗಳ ಸಕಾಲಿಕ ಮಧ್ಯೆ ಪ್ರವೇಶದಿಂದ ಹೇಗೋ ಬದುಕುಳಿದ.


ಈ ಎಲ್ಲಾ ರಾದ್ಧಾಂತಗಳಿಗೆ ಕಾರಣವಾದ ಬಸ್ ಕಳುವು ಪ್ರಕರಣ CCTV ಕ್ಯಾಮರಾದಲ್ಲಿ ರೆಕಾರ್ಡ್ ಆಗಿದ್ದು ಅದನ್ನು ಹೊರತೆಗೆದರೆ ಇವರ ನಿಜಬಣ್ಣ ಬಯಲಾಗುತ್ತದೆ ಎಂಬುದು ಸಿಬ್ಬಂದಿಗಳ ಆಗ್ರಹ.

ಇನ್ನು ಡಿ.ಸಿ. ವಿಶ್ವನಾಥ್ ಸಾಹೇಬರ ಬಗೆಗಿನ ಕೆಲವು ಮಾಹಿತಿಗಳು ತೀವ್ರ ಕುತೂಹಲಕಾರಿಯಾಗಿರುವುದು ಮಾತ್ರವಲ್ಲ, ಕೆಎಸ್‌ಆರ್‌ಟಿಸಿಯಲ್ಲಿರುವ ಮರ್ಯಾದಸ್ಥರು ತಲೆತಗ್ಗಿಸುವಂತಿದೆ. ಈತನ ಕುಟುಂಬ ಬೆಂಗಳೂರಿನಲ್ಲಿ ವಾಸಿಸುತ್ತವೆ. ಬೆಂಗಳೂರಿಂದ-ತುಮಕೂರಿಗೆ ಕೇವಲ ಒಂದು ಗಂಟೆಯ ಪ್ರಯಾಣವಷ್ಟೆ. ಈ ಎರಡೂ ನಗರಗಳ ಮಧ್ಯೆ ಪ್ರತಿನಿತ್ಯ ಸಾವಿರಾರು ಉದ್ಯೋಗಿಗಳು ಓಡಾಡುತ್ತಿದ್ದಾರೆ. ಆದರೆ ನಮ್ಮ ವಿಶ್ವನಾಥ್ ಸಾಹೇಬರು ತುಮಕೂರಿನ ಹೊರವಲಯದ ಕ್ಯಾತ್ಸಂದ್ರದ ಬಳಿ ಮನೆ ಮಾಡಿಕೊಂಡು ವಾಸಿಸುತ್ತಿದ್ದಾರೆ. ಆ ಮನೆಯನ್ನು ಅವರು ಬಳಸಿಕೊಳ್ಳುತ್ತಿರುವ ರೀತಿಯನ್ನು ಕಂಡು ಸ್ಥಳೀಯ ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ. ಇವರ ಆಣತಿಯಂತೆ ನಡೆದುಕೊಳ್ಳುವ ಮಹಿಳಾ ಸಿಬ್ಬಂದಿಗೆ ಕೆಲಸದ ಖಾಯಂ, ಬಡ್ತಿಯಂತಹ ಉಡುಗೊರೆಗಳನ್ನೂ ಹಾಗೂ ಇವರ ಆಮಿಷವನ್ನು ತಿರಸ್ಕರಿಸಿದವರಿಗೆ ವರ್ಗಾವಣೆ ಮತ್ತಿತರ ಶಿಕ್ಷೆಗಳನ್ನೂ ಸಾಹೇಬರು ದಯಪಾಲಿಸುತ್ತಿದ್ದಾರೆ ಎಂಬುದು ಸಿಬ್ಬಂದಿಗಳಲ್ಲಿ ಓಪನ್ ಸೀಕ್ರೆಟ್.


ಡಿ.ಸಿ.ವಿಶ್ವನಾಥ್

ಈ ದುಷ್ಟ ಡಿಸಿ ಕೂಡಲೇ ಎತ್ತಂಗಡಿಯಾಗದಿದ್ದರೆ ತುಮಕೂರು ಕೆಎಸ್ಸಾರ್‌ಟಿಸಿಯ ಮರ್ಯಾದಸ್ಥ ಸಿಬ್ಬಂದಿಗೆ ಉಳಿಗಾಲವಿಲ್ಲ.

ಡಿಪೋ ಮ್ಯಾನೇಜರ್ ಅಬ್‌ಸ್ಕ್ಯಾಂಡ್ ಕಥೆ



ಫಕ್ರುದ್ದೀನ್


"ಇತ್ತೀಚೆಗೆ ಶಶಿಕಲಾ ಅವಾಂತರಗಳನ್ನು ಕಂಡು ಬೇಸತ್ತ ಹಾಲಿ ಡಿಪ್ಪೋ ಮ್ಯಾನೇಜರ್ ಫಕ್ರುದ್ದೀನ್, ಡಿ.ಸಿ. ಸಾಹೇಬರಿಗೆ ಲಿಖಿತ ದೂರು ಸಲ್ಲಿಸಿ ಈಕೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿದರು. ಪರಿಣಾಮ ಏನು ಗೊತ್ತೆ? ಸುಮಾರು ಒಂದು ವಾರದಿಂದ ಫಕ್ರುದ್ದೀನ್ ನಾಪತ್ತೆಯಾಗಿದ್ದಾರೆ. ಅವರು ರಜೆಯನ್ನೂ ತೆಗೆದುಕೊಂಡಿಲ್ಲ, ಕರ್ತವ್ಯಕ್ಕೂ ಹಾಜರಾಗಿಲ್ಲ. ಅವರ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿದೆ. ಮೃದು ಸ್ವಭಾವದ ಫಕ್ರುದ್ದೀನ್‌ರ ಈ ದುಸ್ಥಿತಿಗೆ ದುಷ್ಟ ಡಿ.ಸಿ. ವಿಶ್ವನಾಥ್ ಮತ್ತು ಶಶಿಕಲಾರ ಮಹಾ ಕೂಟವೇ ಕಾರಣವೆಂದು ಸಿಬ್ಬಂದಿ ಆತಂಕಗೊಂಡಿದ್ದಾರೆ. ಈಗ ಸದ್ಯ ಡಿಪ್ಪೋ ಅನಾಥವಾಗಿದೆ.

ಪ್ರಾಮಾಣಿಕ ಅಧಿಕಾರಿಯಾಗಿರುವ ಫಕ್ರುದ್ದೀನ್ ಕ್ಷೇಮವಾಗಿ ಬಂದು ಕರ್ತವ್ಯಕ್ಕೆ ಹಾಜರಾಗುವಂತಾಗಲಿ ಎಂಬುದು ಸಿಬ್ಬಂದಿಯ ಹಾರೈಕೆ.

ಇಂಥ ಸ್ವಭಾವದ ಲೋಕೇಶ್ ಶಶಿಕಲಾ ಎಂಬ ಲೇಡಿ ಡಾನ್‌ಳಿಂದ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುವಂತೆ ಕೋರಿ ಡಿ.ಸಿ. ವಿಶ್ವನಾಥ್‌ರಿಗೆ ಮೇಲಿಂದ ಮೇಲೆ ಪತ್ರ ಬರೆದರು. ವಿಶ್ವನಾಥ್ ಮಾಡಿದ್ದೇನು ಗೊತ್ತೆ? ಲೋಕೇಶ್‌ರ ದನಿ ಅಡಗಿಸಲು ಶಶಿಕಲಾ ಜೊತೆ ಸೇರಿ ಷಡ್ಯಂತ್ರ ರೂಪಿಸಿದ್ದು!! ಹೀನ ಪ್ರವೃತ್ತಿಯ ಈ ಹೆಂಗಸು ಮಾಮೂಲಿಯಂತೆ ಅತ್ಯಾಚಾರದ ಯತ್ನದ ದೂರು ಕೊಟ್ಟಳು. 19.3.2010 ರಂದು ಲೋಕೇಶ್ ಕರ್ತವ್ಯದ ಮೇಲಿದ್ದಾಗಲೇ ಅವರನ್ನು ಬಂಧಿಸುವಂತೆ ಡಿ.ಸಿ. ವಿಶ್ವನಾಥ್ ಅನುವು ಮಾಡಿಕೊಟ್ಟ. ಅನ್ಯಾಯವನ್ನು ಪ್ರಶ್ನಿಸಿ ಲೋಕೇಶ್ ನ್ಯಾಯಾಲಯದ ಮೆಟ್ಟಿಲೇರಿದರು. ಪುಣ್ಯಕ್ಕೆ ನ್ಯಾಯದೇವತೆ ಕಣ್ಣುತೆರೆದಿದ್ದರಿಂದ ಲೋಕೇಶ್ ನಿರ್ದೋಷಿಯೆಂದು ಸಾಬೀತಾಯ್ತು.

ಈ ಕೇಸಿನ ಸಾಕ್ಷಿಗಳೆಂದು ಹೆಸರಿಸಲಾಗಿದ್ದ ಸೂಪರ್‌ವೈಸರ್ ನಿರಂಜನಪ್ಪ ಮತ್ತು ಶ್ರೀಮತಿ ಮಾಲಾ ಬಾಳೇಕಾಯಿ ಎಂಬುವವರು ಸುಳ್ಳು ಸಾಕ್ಷ ಹೇಳಲು ನಿರಾಕರಿಸಿ, ತಮ್ಮ ಆತ್ಮಸಾಕ್ಷಿಗೆ ತಕ್ಕಂತೆ ಸತ್ಯ ನುಡಿದರು. ಈ ವಿಷಜಂತು ತನ್ನ ಪರ ಸುಳ್ಳು ಸಾಕ್ಷಿ ಹೇಳಲು ನಿರಾಕರಿಸಿದ ನಿರಂಜನಪ್ಪನ ಪತ್ನಿಯ ಬಳಿ ಹೋಗಿ "ಮಾಲಾ ಬಾಳೇಕಾಯಿಗೂ ನಿರಂಜನಪ್ಪನಿಗೂ ಅನೈತಿಕ ಸಂಬಂಧವಿದೆ" ಎಂದು ವಿಷ ಕಂಡಿದಳು. ಅಲ್ಲಿಯವರೆಗೆ ಹಾಲಿನಂತಿದ್ದ ಅವರ ಸಂಸಾರ ಒಡೆದು ಛಿದ್ರವಾಗುವ ಮಟ್ಟಕ್ಕೆ ತಲುಪಿತು. ಸಾಕ್ಷಿ ಹೇಳಿದ ಮಾಲಾ ಬಾಳೇಕಾಯಿಯ ಗಂಡನ ಬಳಿಯೂ ಇದೇ ವಿಷವನ್ನು ಹಿಂಡಲು ಪ್ರಯತ್ನಿಸಿದರೂ ಈಕೆಯ ಚರಿತ್ರೆ ಗಂಡನಿಗೆ ಮೊದಲೇ ಗೊತ್ತಿದ್ದರಿಂದ ಸದ್ಯ ಆತ ತಲೆ ಕೆಡಿಸಿಕೊಳ್ಳಲಿಲ್ಲ.

ಈಕೆಯ ಆಟಾಟೋಪವನ್ನು ನಿಯಂತ್ರಿಸಲು ಶಿವಣ್ಣ ಎಂಬ ಸೆಕ್ಯೂರಿಟಿಯವರು ಹಾಜರಾತಿ ಪುಸ್ತಕದಲ್ಲಿ ಈಕೆ ಒಳಬರುವ ಹಾಗೂ ಹೊರಹೋಗುವ ಸಮಯವನ್ನು ತಾರುವಕ್ಕಾಗಿ ನಮೂದು ಮಾಡಲು ಶುರು ಮಾಡಿದರು. ಇದರ ವಾಸನೆ ಹಿಡಿದ ಶೂರ್ಪನಖಿ ಶಿವಣ್ಣನ ಕಣ್ಣೆದುರಿನಲ್ಲೇ ಆ ಹಾಜರಾತಿ ಪುಸ್ತಕವನ್ನು ಎತ್ತಿಕೊಂಡು ಹೊರಟೇಬಿಟ್ಟಳು. ಹೀಗೆ ಹಾಜರಾತಿ ಪುಸ್ತಕವನ್ನು ಕದ್ದೊಯ್ದ ಬಗ್ಗೆ ಆತ ಸಲ್ಲಿಸಿದ ದೂರುಗಳನ್ನು ಕನಿಷ್ಠ ಪಕ್ಷ ಕೇಳಿಸಿಕೊಳ್ಳುವವರೂ ಇಲ್ಲ.




ಶಶಿಕಲಾಳ ಹಿರಿಯೂರಿನ ಬಂಗಲೆ

ಇಷ್ಟೆಲ್ಲಾ ದೂರುಗಳು ದಾಖಲಾಗಿರುವಾಗ ಆಕೆಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಯ ಬಯಸಿದ ಚಾಲಕ ಲೋಕೇಶ್‌ರವರು ಮಾಹಿತಿಹಕ್ಕು ಕಾಯಿದೆಯಡಿ ದೂರು ಸಲ್ಲಿಸಿದರು. ಆದರೆ ಅಧಿಕಾರಿಗಳು ಕೊಟ್ಟ ಮಾಹಿತಿ ಆಘಾತಕಾರಿಯಾಗಿದೆ. ಸಣ್ಣ ಪುಟ್ಟ ತಪ್ಪುಗಳಿಗೂ ಹಲವರನ್ನು ಸಸ್ಪೆಂಡ್ ಮಾಡಿರುವ ಅಧಿಕಾರಿಗಳು ಈಕೆಗೆ 100 ರೂ. ಅಥವಾ 200 ರೂ. ದಂಡ ವಿಧಿಸಿದಂತೆ ದಾಖಲೆ ಸೃಷ್ಟಿಸಿ ತೊಳೆದುಕೊಂಡಿದ್ದಾರೆ. ನೋಡಿ ತುಮಕೂರು ವಿಭಾಗದ ಕೆಎಸ್‌ಆರ್‌ಟಿಸಿ ಹೇಗೆ ಜಾಕರ, ದುಷ್ಟರ ಕೂಟದ ಹಿಡಿತಕ್ಕೆ ಸಿಕ್ಕಿಬಿದ್ದಿದೆ ಎಂದು.

ಅಷ್ಟು ಮಾತ್ರವಲ್ಲದೆ ಈಕೆ ಮಾತೆತ್ತಿದರೆ ಸ್ಥಳೀಯ ಶಾಸಕ ಸುಧಾಕರ್ ನನಗೆ ಆಪ್ತ ಎಂದು ಕೊಚ್ಚಿಕೊಳ್ಳುತ್ತಾಳೆ. ಶಾಸಕ ಸುಧಾಕರ್ ಆದರೂ ಈಕೆಯನ್ನು ಸಿಬಂದಿಗೆ ತರುವ ಕೆಲಸ ಮಾಡದಿರುವುದು ನೌಕರರಲ್ಲಿ ಅವರ ಬಗ್ಗೆಯೂ ಅನುಮಾನ ಮೂಡುವಂತಾಗಿದೆ. ಈ ದುಷ್ಟ ಹೆಂಗಸಿನ ಹಾಗೂ ಈಕೆಯನ್ನು ಹಲ್ಲಿರುಳು ನೆರಳಂತೆ ತಲೆಕಾಯ್ದು ಕಾಪಾಡುತ್ತಿರುವ ಡಿ.ಸಿ. ವಿಶ್ವನಾಥನಿಂದ ತೊಂದರೆಗೆ ಒಳಗಾದವರ ಪಟ್ಟಿ ಬಹಳ ಉದ್ದವಿದೆ. ನೊಂದ ಸಿಬ್ಬಂದಿಗಳು ಕೇಂದ್ರ ಕಚೇರಿಗೆ ದೂರು ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಈ ಬಗ್ಗೆ ಲೋಕಾಯುಕ್ತರಿಗೂ ದೂರು ಹೋಗಿದ್ದು ಸದ್ಯದಲ್ಲೇ ವಿಚಾರಣೆ ಪ್ರಾರಂಭವಾಗುವ ನಿರೀಕ್ಷೆ ಇದೆ.

ಈಗ ತುಮಕೂರು ವಿಭಾಗದ ಭದ್ರತಾಧಿಕಾರಿಯಾಗಿ ಕು. ದಿವ್ಯ ಎಂ.ಎಸ್. ಎಂಬ ಪ್ರಾಮಾಣಿಕ ಯುವ ಅಧಿಕಾರಿಣಿ ಬಂದಿದ್ದಾರೆ. ಆದರೆ ಕುತಂತ್ರಿ ಡಿ.ಸಿ. ವಿಶ್ವನಾಥ್ ಅವರನ್ನು ಮೂಲೆಗುಂಪು ಮಾಡಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾನೆ. ಅದೃಷ್ಟವಶಾತ್ ಭದ್ರತಾಧಿಕಾರಿ ಹುದ್ದೆ ಡಿ.ಸಿ.ಯಡಿಯಲ್ಲಿ ಬರುವುದಿಲ್ಲ. ಅವರು ನೇರವಾಗಿ ಕೇಂದ್ರ ಕಚೇರಿಯಿಂದ ನೇಮಕಗೊಂಡಿರುವುದರಿಂದ ಸದ್ಯ ಬಚಾವು. ಈ ಯುವ ಅಧಿಕಾರಿಣಿ ಬಗ್ಗೆ ಇಡೀ ವಿಭಾಗದ ಸಿಬ್ಬಂದಿಗಳಲ್ಲಿ ಸದಭಿಪ್ರಾಯವಿದೆ. ಇವರಾದರೂ ಈ ಬಗ್ಗೆ ತನಿಖೆ ನಡೆಸಿ ಈ ನತದೃಷ್ಟ ಸಿಬ್ಬಂದಿಗಳಿಗೆ ನ್ಯಾಯ ದೊರಕಿಸಲಿ ಎಂಬುದು ಎಲ್ಲರ ನಿರೀಕ್ಷೆ. ಹಾಗೆಯೇ ಕಣ್ಣುಮುಚ್ಚಿ ಕುಳಿತಂತೆ ನಟಿಸುತ್ತಿರುವ ಕೆಎಸ್‌ಆರ್‌ಟಿಸಿ ಎಂ.ಡಿ. ಗೌರವ ಗುಪ್ತರವರು ಮತ್ತು ಹಗರಣಗಳಿಂದ ಕುಖ್ಯಾತರಾಗುತ್ತಿರುವ ಸಾರಿಗೆ ಸಚಿವ ಆರ್. ಅಶೋಕ್ ಕೂಡ ತುಮಕೂರು ವಿಭಾಗದ ಕಡೆ ಸ್ವಲ್ಪವಾದರೂ ಗಮನಹರಿಸುವಂತಾಗಲಿ. ❖

ಬ್ಯಾಡಗಿ ಶಾಸಕ ಸುರೇಶ್‌ಗೌಡನ ಭೂ ಲೂಟಿ




ಬ್ಯಾಡಗಿ ಕ್ಷೇತ್ರದ ನಸೀಬು ಖೋಟಾ ಇದೆ. ಸಾಚಾ ಮನುಷ್ಯನೊಬ್ಬ ಶಾಸಕನಾದ ಎಂದುಕೊಂಡಿದ್ದವರೇ ಎಂಎಲ್‌ಎ ಸುರೇಶ್‌ಗೌಡನ ನುಂಗಾಟದ ಪವಾಡಗಳಿಂದ ಬೆಚ್ಚಿ ಬೀಳುತ್ತಿದ್ದಾರೆ.

2008ರಲ್ಲಿ ಯಡಿಯೂರಪ್ಪ ಕಿಕ್‌ಬ್ಯಾಕ್ ಪಡೆದು ಬಿ ಫಾರ್ಮ್ ಕೊಟ್ಟು ಲಿಂಗಾಯತರನ್ನ ಎತ್ತಿಕಟ್ಟಿ ವಿಧಾನಸೌಧದ ಮೆಟ್ಟಿಲು ಹತ್ತುವಂತೆ ಮಾಡಿದ್ದ. ಆಗ ಗೆದ್ದವರಲ್ಲಿ ಬ್ಯಾಡಗಿಯ ಶಾಸಕ ಸುರೇಶ್‌ಗೌಡನೂ ಒಬ್ಬ. ಆದರೆ ಸುರೇಶ್‌ಗೌಡ ಗೆದ್ದ ನಂತರ ತನ್ನ ಸ್ವಜಾತಿ ಸಾದರ ಲಿಂಗಾಯತರನ್ನಷ್ಟೇ ತನ್ನ ಲೂಟಿ ಸಂಘದ ಸದಸ್ಯರನ್ನಾಗಿ ಮಾಡಿಕೊಂಡನೇ ಹೊರತು ತನ್ನ ಗೆಲುವಿಗೆ ಬೆವರು ಹರಿಸಿದ್ದ ಪಂಚಮಸಾಲಿಗಳೂ ಸೇರಿದಂತೆ ಇತರೆ ಲಿಂಗಾಯತ ಒಳಪಂಗಡಗಳ ಮುಖಂಡರುಗಳನ್ನು ಒಬ್ಬೊಬ್ಬರನ್ನಾಗಿ ಸೈಡಿಗಿಟ್ಟ.

ಸದ್ಯ ಬ್ಯಾಡಗಿ ಪಟ್ಟಣದ ಬಸವೇಶ್ವರ ನಗರ ಉರ್ಫ್ ಡಾಲರ್ಸ್ ಕಾಲೋನಿ ಅಂತ ಕರೆಯಿಸಿಕೊಳ್ಳುವ ಏರಿಯಾದಲ್ಲಿ ಸುಮಾರು ಎರಡು ಎಕರೆ ಜಾಗವನ್ನು ಗುಳುಂ ಮಾಡಿರುವ ಸುರೇಶ್‌ಗೌಡ ಅದರಲ್ಲಿ 1/2 ಎಕರೆಯಲ್ಲಿ ಭವ್ಯ ಅರಮನೆ ಕಟ್ಟಿಕೊಂಡಿದ್ದಾನೆ. ಓಬಿರಾಯನ ಕಾಲದಲ್ಲಿ ಪುರಸಭೆಯಿಂದ ಲೀಸ್ ಮಾಡಿಕೊಂಡಿದ್ದ ಭೂಮಿಯನ್ನು ಸುರೇಶ್‌ಗೌಡ ಅಂಡ್ ಗ್ಯಾಂಗ್ ಸದ್ದಿಲ್ಲದೆ, ತಮ್ಮ ಹೆಸರಿಗೆ ಮಾಡಿಕೊಳ್ಳುವ ಸಂಚು ನಡೆಸಿದೆ. ಲೀಸ್ ಅವಧಿ 1986 ಕ್ಕೆ ಮುಗಿದಿದೆ. ನಿಯಮದಂತೆ ಸರ್ಕಾರಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಪಡೆದವರು ಅಲ್ಲಿ ಯಾವುದೇ ಕಟ್ಟಡ ನಿರ್ಮಿಸುವಂತಿಲ್ಲ. ಅವಧಿ ಮುಗಿದಾಕ್ಷಣ ಅದನ್ನು ಸರ್ಕಾರಕ್ಕೆ ಹಿಂದಿರುಗಿಸುವ ನಿಯಮವನ್ನು ಗಾಳಿಗೆ ತೂರಿರುವ ಸುರೇಶ್‌ಗೌಡನ ವಾಸದ ಮನೆಯೇ ಕಾನೂನು ಬಾಹಿರ. ಪುರಸಭೆಯ ಸದಸ್ಯರುಗಳನ್ನು ಬುಟ್ಟಿಗೆ ಹಾಕಿಕೊಂಡು ಸಾಮಾನ್ಯ ಸಭೆಯಲ್ಲಿ ಪ್ರತಿ ಗುಂಟೆಗೆ 500 ರೂ.ಗಳಂತೆ ರೇಟು ಫಿಕ್ಸ್ ಮಾಡಿ ಖರೀದಿಸುವ ಇವನ ಸಂಚಿಗೆ ಜಿಲ್ಲಾಧಿಕಾರಿ ಎಚ್.ಜಿ.ಶ್ರೀವರ ಬ್ರೇಕ್ ಹಾಕಿದ್ದಾರೆ.

ಒಂದು ಗುಂಟೆ 15 ಲಕ್ಷ ಬೆಲೆಬಾಳುವ ಜಾಗವನ್ನು ಶಾಸಕನಿಗಾಗಿ 500 ರೂ ನಿಗದಿ ಮಾಡಿದ ಇಲ್ಲಿಯ ಪುರಸಭೆಯ ಠರಾವು ಕಂಡು ಹೌಹಾರಿದ ಡಿ.ಸಿ. ಮಾರ್ಕೆಟ್ ದರ ನೀಡಿ ಖರೀದಿಸುವಂತೆ ಸೂಚಿಸಿದ್ದಾರೆ.

ಮಾರುಕಟ್ಟೆ ದರದಲ್ಲಿ ಆ ಎರಡು ಎಕರೆ ಜಾಗವನ್ನು ತನ್ನ ಹೆಸರಿಗೆ ಮಾಡಿಕೊಳ್ಳಬೇಕಾದರೆ 12 ಕೋಟಿಗೂ ಹೆಚ್ಚು ಹಣ ಪುರಸಭೆಗೆ ತುಂಬಬೇಕಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಬಡವರಿಗೆ ಉಚಿತವಾಗಿ ನಿವೇಶನ ವಿತರಿಸುವ ಹೆಸರಿನಲ್ಲಿ ಗೋಲ್‌ಮಾಲ್ ಯೋಜನೆಯನ್ನು ಚಾಲ್ತಿಗೆ ತಂದು ಭೂಮಿ ಕಬಳಿಸಲು ಶತಪ್ರಯತ್ನ ಮಾಡುತ್ತಿದ್ದಾನೆ ಸುರೇಶಗೌಡ ಎಂಬುದು ಲೇಟೆಸ್ಟ್ ಸುದ್ದಿ.



ಕಾನೂನುಬಾಹಿರವಾಗಿ ಸರ್ಕಾರಿ ಜಾಗದಲ್ಲಿ 25 ವರ್ಷದಿಂದ ಅಕ್ರಮವಾಗಿ ವಾಸವಾಗಿರುವ ಈತನನ್ನು ಅಲ್ಲಿಂದ ಹೊರದಬ್ಬಬೇಕಾದ ಪುರಸಭೆ ಅಧಿಕಾರಿ ಮತ್ತು ಆಡಳಿತ ಮಂಡಳಿ ಸರ್ಕಾರಿ ಜಾಗವನ್ನು ಸೇಫಾಗಿ ಸುರೇಶ್‌ಗೌಡನ ಹೆಸರಿಗೆ ಮಾಡಲು ಹೊರಟಿದೆ.

ಕೊಳೆತ ಮೆಣಸಿನಕಾಯಿಗೆ ಬಣ್ಣ ಸುರಿದ ಬ್ರ್ಯಾಂಡ್ ಕಾರಪುಡಿ ಕಂಪನಿಗೆ ಮಾರುವ ಡಬ್ಬಿಂಗ್ ಕಿಂಗ್ ಸುರೇಶ್‌ಗೌಡ ಈಗ ರಿಯಲ್ ಎಸ್ಟೇಟ್‌ನಲ್ಲೂ ಕಿಂಗ್!

ತಾನು ಲೂಟಿ ಹೊಡೆದಿದ್ದಲ್ಲದೆ ತನ್ನ ಅಳಿಯ ಶೇಖರಗೌಡ ಪಾಟೀಲನಿಗೂ ಸ್ಥಳೀಯ ಪುರಸಭೆಯಿಂದ 18 ಗುಂಟೆ ಜಾಗ ಕೊಡಿಸಿದ್ದಾನೆ. "ಅಪ್ಪು ಕ್ರೀಡಾ ಸಂಘ" ಎಂಬ ಹೆಸರಲ್ಲಿ ಆಗೊಂದು ಈಗೊಂದು ಆಟವಾಡಿಸಿಕೊಂಡಿದ್ದ ಅಬ್ಬೇಪಾರಿ ಸಂಸ್ಥೆಗೆ ಜಾಗ ಕೊಡಿಸುವ ತಂತ್ರ ಮಾಡಿದ್ದ ಶಾಸಕ ನಂತರ ಅನಾಮತು (ರಿ.ಸ.ನಂ. 177/1 ರಿಂದ 6) 18 ಗುಂಟೆ ಜಾಗವನ್ನು ಸಂಸ್ಥೆ ಹೆಸರಲ್ಲಿ ನೋಂದಾಯಿಸದೆ ಅಳಿಯ ಶೇಖರಗೌಡನ ಹೆಸರಲ್ಲಿ ಮಾಡಿಸಿದ್ದಾನೆ. ಕೇವಲ 5 ಸಾವಿರ ಹಣ ಪುರಸಭೆಗೆ ತುಂಬಿ ಜಾಗ ಪಡೆದು ಈಗ 60 ಲಕ್ಷಕ್ಕೆ ಅದನ್ನು ಮಾರಿಕೊಂಡಿದ್ದಾರೆ.


ಸುರೇಶ್‌ಗೌಡ ಡಿ.2 ರಂದು ತನ್ನ ರೌಡಿ ಹಿಂಬಾಲಕರೊಂದಿಗೆ ತನ್ನ ಮಾತು ಕೇಳದ ಗುತ್ತಿಗೆದಾರರೊಬ್ಬರ ಕಾಮಗಾರಿ ಸ್ಥಳದಲ್ಲಿದ್ದ ದುರಗಪ್ಪ ಮಾಳಮ್ಮನವರ ಎಂಬ ದಲಿತನ ಮೇಲೆ ಹಲ್ಲೆ ಮಾಡಿದ್ದಾನೆ. ಇವನ ಗೂಂಡಾ ವರ್ತನೆಯಿಂದ ಗಾಯಗೊಂಡಿದ್ದ ದುರಗಪ್ಪನ ದೂರನ್ನು ದಾಖಲಿಸಿಕೊಳ್ಳದ ಖಾಕಿಗಳ ವಿರುದ್ಧ ದಲಿತ ಸಂಘಟನೆಗಳು ಹಿಂದುಳಿದ ಆಯೋಗಕ್ಕೆ ದೂರು ನೀಡಿವೆ.

ಇವನ ಇಂತಹ ಹೊಲಸು ಬುದ್ಧಿಗೆ ಈಗ ಇಡೀ ಬ್ಯಾಡಗಿಯ ಮೆಣಸಿನಕಾಯಿ ಮಾರ್ಕೆಟ್ ಥೀ.. ಥೂ.. ಅಂತ ಉಗಿಯುತ್ತಿದೆ. ಕೇಂದ್ರ ಸರ್ಕಾರದ ಅಸೈಡ್ ಯೋಜನೆಯಲ್ಲಿ ಮಾರ್ಕೆಟ್ ಅಂಗಳಕ್ಕೆ ಹಾಕಬೇಕಿದ್ದ ಕಾಂಕ್ರೀಟನ್ನು ತನ್ನ ಅಂಗಡಿ ಮುಂದಿನ ಎರಡು ಎಕರೆ ಪ್ರದೇಶಕ್ಕೆ ಹಾಕಿಸಿಕೊಂಡು ತೆಪ್ಪಗಾಗಿದ್ದಾನೆ. ನೂರಾರು ವ್ಯಾಪಾರಸ್ಥರಿಗೆ ಅನುಕೂಲವಾಗಬೇಕಿದ್ದ ಸರ್ಕಾರಿ ಅನುದಾನ ಈ ಖದೀಮನ ಪಾಲಾಗಿದ್ದಕ್ಕೆ, ಎಲ್ಲಾ ವ್ಯಾಪಾರಸ್ಥರು ಇವನಿಗೆ ಹಿಡಿ ಶಾಪ ಹಾಕುತ್ತಾ ಯಾವಾಗ ಚುನಾವಣೆ ಬಂದಿತೋ ಎಂದು ಕಾಯುತ್ತಿದ್ದಾರೆ. ಪಂಚಮಸಾಲಿ ಮುಖಂಡರುಗಳು ಇವನ ವಿರುದ್ಧ ಈಗಾಗಲೇ ತಿರುಗಿ ಬಿದ್ದಿದ್ದಾರೆ.

ಶಾಸಕನಾದಾಗಿನಿಂದ ಸುರೇಶ್‌ಗೌಡ ಬ್ಯಾಡಗಿಯ ಜನರಿಗೆ ಉಪಯೋಗವಾಗುವಂತಹ ಒಂದು ಕೆಲಸವನ್ನೂ ಮಾಡಿಲ್ಲ. ಒಟ್ಟಿನಲ್ಲಿ ಸಾಚಾನಂತೆ ನಟಿಸಿ ಶಾಸಕನಾದ ಸುರೇಶ್‌ಗೌಡ, ಪುಕ್ಸಟ್ಟೆ ಪ್ರಾಪರ್ಟಿಗಳ ಲೂಟಿ, ಹಿಂಬಾಲಕರ ಗೂಂಡಾವರ್ತನೆ ಸೇರಿದಂತೆ ಸ್ವಜಾತಿಯ ಮೋಹದಲ್ಲಿ ಹೊರಳಾಡಿದ್ದರ ಫಲವಾಗಿ ರಾಜಕೀಯ ನಿವೃತ್ತಿ ಪಡೆಯುವ ಕಾಲ ಕೆಲ ತಿಂಗಳಲ್ಲಿ ಎದುರಾಗುವುದಂತೂ ಬ್ಯಾಡಗಿ ಮಿರ್ಚಿಯ ಖಾರದಷ್ಟೇ ಸತ್ಯ.

• ಹುರಳಿಕುಪ್ಪಿ ವಿನಯ

ಸುಬ್ರಮಣ್ಯನ ರಂಗ ಪ್ರಪಂಚ



ರಂಗಭೂಮಿ ಸಂಪರ್ಕವಿದ್ದವರಿಗೆ ರಂಗಪ್ರಪಂಚ ಸುಬ್ಬು ಎಂಬ ವ್ಯಕ್ತಿಯ ಪರಿಚಯವಿದ್ದೇ ಇರುತ್ತದೆ. ರಂಗಭೂಮಿಯಲ್ಲಿ ನಟರಾಗಿ, ನಿರ್ದೇಶಕರಾಗಿ, ನಾಟಕಕಾರರಾಗಿ, ತಂತ್ರಜ್ಞರಾಗಿ, ವಿಮರ್ಶಕರಾಗಿ, ಉಪನ್ಯಾಸಕರಾಗಿ, ರಂಗಭೂಮಿ ಕುರಿತ ಪತ್ರಿಕೆ, ಕಿರುತೆರೆ, ಸಿನಿಮಾ ನಟನೆ.. ಹೀಗೆ ಸಾಂಸ್ಕೃತಿಕ ಜಗತ್ತಿನಲ್ಲಿ ಸದಾ ಲವಲವಿಕೆಯಿಂದ ಓಡಾಡುವ ಸುಬ್ರಮಣ್ಯ ಮಂಡಿಸಿದ ಮಹಾ ಪ್ರಬಂಧಕ್ಕೆ ಬೆಂಗಳೂರು ವಿವಿಯ ಡಾಕ್ಟರೇಟ್ ಪದವಿ ಲಭಿಸಿದೆ.

ನಿರ್ಗತಿಕ ಕುಟುಂಬದಲ್ಲಿ ಹುಟ್ಟಿ ಕಿತ್ತು ತಿನ್ನುವ ಬಡತನದಲ್ಲಿ ಬೆಳೆದ ಸುಬ್ರಮಣ್ಯ ಸಣ್ಣ ವಯಸ್ಸಿನಲ್ಲೇ ಲಂಕೇಶರಿಂದ ಪ್ರಭಾವಿತರಾದವರು. ಇವರ ತಾಯಿ ಮನೆ ಕೆಲಸ ಮಾಡಿ ಮಕ್ಕಳನ್ನು ಓದಿಸುತ್ತಿದ್ದರಂತೆ. ಇಂಥದ್ದರಲ್ಲಿ ಪತ್ರಿಕೆ ಕೊಂಡು ಓದಲು ಕಾಸಿಲ್ಲದಿದ್ದರೂ ಲೈಬ್ರರಿಗೆ ಲಂಕೇಶ್ ಪತ್ರಿಕೆ ಬರುವುದನ್ನೇ ಕಾದು ಓದುತ್ತಿದ್ದರಂತೆ. ಸುಬ್ಬು ಲಂಕೇಶರ ನಾಟಕ, ಬರಹಗಳ ಬಗ್ಗೆ ಅದ್ಯಾವ ಪರಿ ಅಭಿಮಾನ ಹೊಂದಿದ್ದಾರೆಂದರೆ ತಮ್ಮ ಪಿ.ಎಚ್‌ಡಿಗೂ 'ಲಂಕೇಶ್‌ರ ನಾಟಕಗಳ ಸಮಗ್ರ ವಿಶ್ಲೇಷಣೆ – ಅಧ್ಯಯನ' ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು, ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದಿದ್ದಾರೆ.

ಸುಬ್ರಮಣ್ಯ ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಹೊರತರುತ್ತಿರುವ 'ನಮ್ಮ ರಂಗಪ್ರಪಂಚ' ಮಾಸಿಕವು ನಾಟಕ, ನೃತ್ಯ ಸಂಗೀತಗಳನ್ನು ಒಳಗೊಂಡ ಕನ್ನಡದ ಪ್ರಥಮ ಪತ್ರಿಕೆಯಾಗಿದೆ.

ನೀನಾಸಂ, ಅಭಿನಯತರಂಗಗಳಲ್ಲಿ ನಾಟಕ ಡಿಪ್ಲೊಮಾ ಪದವಿ ಪಡೆದುಕೊಂಡಿರುವ ಸುಬ್ಬು ತಲೆದಂಡ, ಸಂಗ್ಯಾಬಾಳ್ಯ, ಗುಣಮುಖ ಮುಂತಾದ ಸುಮಾರು 800 ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಂಕ್ರಾಂತಿ, ಬಂದನಾಳವಿಲ್ಲದ ಬದಾಮಿ, ನೀಲಿಕುದುರೆ ಮುಂತಾದ 160 ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸುಬ್ಬು ಸದ್ಯ ಕಿರುತೆರೆಯಲ್ಲಿ ಬ್ಯುಸೀ ನಟ. ಮುಸ್ಸಂಜೆ, ದರಾರ, ಸುಕನ್ಯ, ರಂಗೋಲಿ ಮುಂತಾದ 65 ಟಿ.ವಿ.ಧಾರವಾಹಿಗಳಲ್ಲಿ ನಟಿಸಿ ಈಗ ಸಖಿ, ನಿನಗಾಗಿ, ಯಾರದು? ಸೇರಿದಂತೆ ಸುಮಾರು ಅದಿನೈದು ಚಿತ್ರಗಳಲ್ಲಿ ಸಮರ್ಥವಾಗಿ ನಟಿಸಿದ್ದಾರೆ. ❖

ಶ್ರುತಿ-ಮಹೇಂದರ್ ಡೈವೋರ್ಸ್

ಶ್ರುತಿಯ ಮುಕ್ತಿಗೆ 40 ಲಕ್ಷ




"ಬಹುಶಃ ಈತನಕ ಯಾವ ಪತ್ನಿಯೂ ಮಾಡದ ಸಾಧನೆಯೊಂದಕ್ಕೆ ಈ ಮೂಲಕ ಶ್ರುತಿ ಕಾರಣರಾಗುತ್ತಿದ್ದಾರೆ. ಪತಿ ಮಹೇಂದರ್‌ನಿಂದ ಮುಕ್ತಿ ಪಡೆಯಲು ಶ್ರುತಿ ಕಳಕೊಂಡಿದ್ದು ಬರೋಬ್ಬರಿ ನಲವತ್ತು ಲಕ್ಷ! ಭಾರತೀಯ ಕೌಟುಂಬಿಕ ವ್ಯವಸ್ಥೆ, ಶತಶತಮಾನಗಳ ಪುರುಷಾಧಿಪತ್ಯ, ಸ್ತ್ರೀ ಶೋಷಣೆಯ ಕರ್ಮ ಎಲ್ಲಕ್ಕೂ ಓರ್ವ ಹೆಣ್ಣು ಮಗಳಾಗಿ ಶ್ರುತಿ ತನ್ನದೇ ರೀತಿಯಲ್ಲಿ ಉತ್ತರ ಕೊಟ್ಟಿದ್ದು ಈ 40 ಲಕ್ಷದ ಮೂಲಕವೇ."

• ರಾ. ಸೋಮನಾಥ್

ಅದೊಂದು ಮ್ಯೂಚುವಲ್ ಡೈವೋರ್ಸ್, ಪರಸ್ಪರ ಗೌರವಯುತವಾಗೇ ಇಬ್ಬರೂ ಒಪ್ಪಿ ವಿಚ್ಛೇಧನಕ್ಕೆ ಸಹಿ ಹಾಕಿದ್ದಾರೆ. ಇತ್ಯಾದಿಯಾಗಿ ಟಿವಿ-ಪತ್ರಿಕೆಗಳೆಲ್ಲ ಏನೇ ಜಾಗಟೆ ಹೊಡೆದರೂ ಶ್ರುತಿ-ಮಹೇಂದರ್ ಬೇರ್ಪಡೆಗೆ ಮತ್ತೂ ಒಂದು ಕರಾಳ ಮುಖವಿತ್ತು.

ತಾರಾ ಥಳುಕು ಬಳುಕಿನ ಮಧ್ಯೆ ಅದು ಸದ್ದಿಲ್ಲದೆ ಮುಚ್ಚಿ ಹೋಯಿತು.

ಸಿನಿಮಾ ಸಂಬಂಧಿ ವಿವಾಹ ವಿಚ್ಛೇಧನಗಳಲ್ಲಿ ಇತ್ತೀಚೆಗೆ ದೊಡ್ಡ ಸುದ್ದಿಯಾದದ್ದು ತಮಿಳಿನ ಪ್ರಭುದೇವ ತನ್ನ ಪತ್ನಿಗೆ 30 ಕೋಟಿಯ ಪರಿಹಾರ ಕೊಟ್ಟು ನಟಿ ನಯನತಾರಾಳ ಕೈ ಹಿಡಿದದ್ದು ಮತ್ತು ಪ್ರಕಾಶ್ ರೈ ತನ್ನ ಪತ್ನಿ ಲಲಿತಾ (ಈಕೆ ಡ್ಯಾನ್ಸರ್ ಡಿಸ್ಕೋ ಶಾಂತಿಯ ತಂಗಿ)ಳಿಗೆ ಐದು ಕೋಟಿಯ ಡೈವೋರ್ಸ್ ಕೊಟ್ಟು ಮುಂಬಯಿಯ ಕೋರಿಯೋಗ್ರಾಫರ್ ಪೋನಿವರ್ಮಾಳ ತೆಕ್ಕೆಗೆ ಜಾರಿದ್ದು. ಸಾಮಾನ್ಯವಾಗಿ ಪ್ರತಿ ಡೈವೋರ್ಸಿನಲ್ಲೂ ಗಂಡನಾದವನು ತನ್ನ ವಿಚ್ಛೇದಿತ ಪತ್ನಿಗೆ, ಆಕೆಗೆ ತನ್ನಿಂದಾದ ಮಕ್ಕಳ ಪೋಷಣೆಗೆಂದು ಪರಿಹಾರ ಕೊಟ್ಟಿದ್ದು, ಕೊಡುವುದನ್ನು ಕೇಳಿದ್ದೇವೆ, ನೋಡಿದ್ದೇವೆ.



ಆದರೆ ಪತ್ನಿಯೇ ತನ್ನ ಗಂಡನಿಗೆ-ಅದರಲ್ಲೂ ಕೈಕಾಲು ನೆಟ್ಟಗಿದ್ದು ಬುದ್ಧಿ ಸ್ಥಿಮಿತಕ್ಕಿದ್ದು ದುಡಿಯುವ ತಾಕತ್ತಿದ್ದೂ; ಗಂಡ ಹೆಂಡತಿಯಿಂದ ಜೀವನಾಂಶಕ್ಕೆ ಕೈಚಾಚಿದ್ದು ಅಂತಿದ್ದರೆ ಅದು ಶ್ರುತಿ-ಮಹೇಂದರ್ ಪ್ರಕರಣ ಮಾತ್ರ!

ಈ ಬಗ್ಗೆ ಶ್ರುತಿ ಬಾಯಿ ಬಿಡುತ್ತಿಲ್ಲ. 'ನಾವು ಸೆಲಿಬ್ರಿಟಿಗಳು. ಜನ ನಮ್ಮ ಬದುಕನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಆ ಕಾರಣಕ್ಕೆ ನಾವು ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ. ಮಗು ನಮ್ಮಿಬ್ಬರ ಮಧ್ಯೆಯೂ ಓಡಾಡಿಕೊಂಡಿರ್ತದೆ. ಇಬ್ಬರೂ ಪರಸ್ಪರ ಒಪ್ಪಿಯೇ ವಿಚ್ಛೇಧನಕ್ಕೆ ಸಹಿ ಹಾಕಿದ್ದೇವೆ.....' ಎಂದೆಲ್ಲಾ ಮಹಾನ್ ಆದರ್ಶವಾದಿಯಂತೆ ಕೌಟುಂಬಿಕ ನ್ಯಾಯಾಲಯದ ಹೆಬ್ಬಾಗಿಲಲ್ಲಿ ನಿಂತು ಟಿವಿ ಕ್ಯಾಮೆರಾಗಳ ಮುಂದೆ ಮಹೇಂದರ್ ಡೈಲಾಗ್ ಹೊಡೆದರೆ ಶ್ರುತಿ ಮುಖ ಕೂಡ ಮೇಲೆತ್ತದೆ ವಿಷಾಧದ ಹೆಜ್ಜೆಯಿಟ್ಟು ನಡೆದುಬಿಟ್ಟರು. ಡಿಸೆಂಬರ್ 1 ರ ಗುರುವಾರ ಅಪರಾಹ್ನದ ಹೊತ್ತಿಗೆ ಕಿಕ್ಕಿರಿದ ಕೋರ್ಟ್ ಆವರಣದಲ್ಲೇ ಜಸ್ಟೀಸ್ ಬೋಪಯ್ಯ ಮಹೇಂದರ್‌ನನ್ನುದ್ದೇಶಿಸಿ ಕೇಳಿದ ಕೊನೆಯ ಮಾತೇ 'ಏನ್ರೀ, ಮಹೇಂದರ್ ಈ ಡೈವೋರ್ಸ್‌ನಿಂದ ಎಷ್ಟು ಬೆನಿಫಿಟ್ ಮಾಡಿದ್ರಿ?' ಎಂದು.

ಕೌಟುಂಬಿಕ ನ್ಯಾಯಾಧೀಶರ ಆ ಪ್ರಶ್ನೆಯಲ್ಲೇ ಇಡೀ ಡೈವೋರ್ಸ್‌ನ ಮರ್ಮವಿತ್ತು.

ಅದು ನಲವತ್ತು ಲಕ್ಷದ ಡೈವೋರ್ಸ್!

ಪತಿ ಮಹೇಂದರ್‌ನಿಂದ ಮುಕ್ತಿ ಪಡೆಯಲು ಶ್ರುತಿ ಕಳಕೊಂಡಿದ್ದು ಬರೋಬ್ಬರಿ ನಲವತ್ತು ಲಕ್ಷ!

ಮೊದಲ ಕಂತಾಗಿ ಹತ್ತು ಲಕ್ಷ ಜೇಬಿಗಿಳಿಸಿದ ನಂತರವೇ ಮಹೇಂದರ್ ಕೋರ್ಟಿಗೆ ಬಂದು ಸಹಿ ಹಾಕಿದ್ದು ಮತ್ತು ಇನ್ನು ಆರು ತಿಂಗಳೊಳಗೆ ಮಹೇಂದರ್‌ಗೆ ಶ್ರುತಿ ಮತ್ತೆ 15 ಲಕ್ಷ ಕೊಡಬೇಕು. ಅದಕ್ಕೊಂದು ಮುಂಗಡವಾಗಿ ಮಹೇಂದರ್ ಚೆಕ್ ಪಡೆದಿದ್ದಾರೆ. ಇದಿಷ್ಟೇ ಅಲ್ಲದೆ ಮಹೇಂದರ್‌ನ 15 ಲಕ್ಷದ ಬ್ಯಾಂಕ್ ಸಾಲವನ್ನು ಶ್ರುತಿಯೇ ತೀರಿಸಬೇಕು. ಅಲ್ಲಿಗೆ ತನ್ನ ಸಶಕ್ತ ಪರಿತ್ಯಕ್ತ ಪತಿಗೆ ಶ್ರುತಿ ನೀಡಿದ ಒಟ್ಟೂ ಪರಿಹಾರದ ಮೊತ್ತ 40 ಲಕ್ಷ!

ಬಹುಶಃ ಈತನಕ ಯಾವ ಪತ್ನಿಯೂ ಮಾಡದ ಸಾಧನೆಯೊಂದಕ್ಕೆ ಈ ಮೂಲಕ ಶ್ರುತಿ ಕಾರಣರಾಗುತ್ತಿದ್ದಾರೆ. ಭಾರತೀಯ ಕೌಟುಂಬಿಕ ವ್ಯವಸ್ಥೆ, ಶತಶತಮಾನಗಳ ಪುರುಷಾಧಿಪತ್ಯ ಸ್ತ್ರೀ ಶೋಷಣೆಯ ಕರ್ಮ ಎಲ್ಲಕ್ಕೂ ಓರ್ವ ಹೆಣ್ಣು ಮಗಳಾಗಿ ಶ್ರುತಿ ತನ್ನದೇ ರೀತಿಯಲ್ಲಿ ಉತ್ತರ ಕೊಟ್ಟಿದ್ದು ಈ 40 ಲಕ್ಷದ ಮೂಲಕವೆ.

ಮಹೇಂದರ್ ಅಂಗವಿಕಲನಲ್ಲ, ಬುದ್ಧಿ ಮಾಂದ್ಯನಲ್ಲ, ದುಡಿಯಲು ನಿಶಕ್ತನೂ ಅಲ್ಲ, ಕನ್ನಡದ ಹೆಸರಾಂತ ಚಿತ್ರ ನಿರ್ದೇಶಕ. ಖ್ಯಾತಿಯಿದೆ. ಚಿತ್ರ ನಿರ್ದೇಶನದ ಕಸುಬು ಗೊತ್ತಿದೆ. ಇಷ್ಟೆಲ್ಲ ಇದ್ದೂ ಒಂದು ಕೋಟಿ ಕೊಟ್ಟರೇನೇ ವಿಚ್ಛೇದನಕ್ಕೆ ಸಹಿ ಹಾಕ್ತೀನಿ ಎಂದು ಪಕ್ಕಾ ಹೆಣ್ಣಿಗನಂತೆ ಹಠಕ್ಕೆ ಬಿದ್ದ ಬಗ್ಗೆ ಈ ಹಿಂದೆ ಪತ್ರಿಕೆಯೇ ಬರೆದಿತ್ತು. 2009 ರ ಮೇ 6 ರಂದು ಮಹೇಂದರ್‌ನಿಂದ ವಿಚ್ಛೇದನ ಕೋರಿ ಶ್ರುತಿ ಬೆಂಗಳೂರಿನ ಕೌಟುಂಬಿಕ-ನ್ಯಾಯಾಲಯದ ಮೋರೆ ಹೊಕ್ಕಿದ್ದೇನೋ ದೊಡ್ಡ ಸುದ್ದಿಯಾಯಿತು. ಆದರೆ ಯಾರೂ ಗಮನಿಸದ ಸುದ್ದಿಯೆಂದರೆ ಅದೇ ಕೌಟುಂಬಿಕ ನ್ಯಾಯಾಲಯದಲ್ಲಿ ಶ್ರುತಿ ವಿರುದ್ಧ ಮಹೇಂದರ್ ಕೂಡ ಮತ್ತೊಂದು ಮೊಕದ್ದಮೆ ಹೂಡಿದ್ದ.


ಅದು ಪತ್ನಿಯಿಂದಲೇ ಪತಿ ಜೀವನಾಂಶ ಕೋರಿ ಹಾಕಿದ ವಿಲಕ್ಷಣ ಕೇಸು. ಶ್ರುತಿಗೆ ತಾನು ಡೈವೋರ್ಸ್ ನೀಡಬೇಕು ಅಂದರೆ ನನಗೆ ಒಂದು ಕೋಟಿಯ ಪರಿಹಾರ ಕೊಡಬೇಕು. ಶ್ರುತಿಯನ್ನು ಮದುವೆಯಾಗಿ ನಾನು ಕೋಟಿಗಟ್ಟಲೆ ದುಡ್ಡು ಕಳಕೊಂಡಿರುವುದರಿಂದ ಈಗ ಆಕೆಯೇ ನನಗೆ ಜೀವನಾಂಶ ಕೊಡಬೇಕು. ಶ್ರುತಿಗೆ ಬಸವೇಶ್ವರನಗರದ 8 ನೇ ಮುಖ್ಯ ರಸ್ತೆಯ 2 ನೇ 'ಬಿ' ಕ್ರಾಸಿನಲ್ಲಿ 691ನೇ ನಂಬರಿನ ಮನೆಯಿದೆ. 60x40 ಅಳತೆಯ ಆ ನಿವೇಶನದ ಸದ್ಯದ ಮಾರುಕಟ್ಟೆ ರೇಟೇ ಮೂರು ಕೋಟಿಯಷ್ಟಾಗುತ್ತದೆ. ತನಗೆಲ್ಲಿ ಜೀವನಾಂಶ ಕೊಡಬೇಕಾಗುತ್ತೋ ಎಂದು ಶ್ರುತಿ ಅದನ್ನು ಮಾರಲು ಯತ್ನಿಸುತ್ತಿದ್ದಾರೆ. ಹಾಗೊಮ್ಮೆ ಅದನ್ನು ಮಾರಿದ್ದೇ ಆದರೆ ಅದರಿಂದ ನನಗೆ ದಕ್ಕಬೇಕಿದ್ದ ಜೀವನಾಂಶಕ್ಕೆ ವಂಚನೆಯಾಗುತ್ತದೆ. ಆದ್ದರಿಂದ ಶ್ರುತಿ ಅದನ್ನು ಪರಬಾರೆ ಮಾಡದ ಹಾಗೆ ಕೋರ್ಟ್ ತಡೆಯಾಜ್ಞೆ ನೀಡಬೇಕೆಂದು ಪ್ರಾರ್ಥಿಸುತ್ತೇನೆ.....!

ಇದು ಮಹೇಂದರ್ ಕೌಟುಂಬಿಕ ನ್ಯಾಯಾಲಯದಲ್ಲಿ ಶ್ರುತಿ ವಿರುದ್ಧ ಹೂಡಿದ್ದ ವಿಶೇಷ ಮೊಕದ್ದಮೆಯಲ್ಲಿದ್ದ ಮನವಿಯ ಸಾರಾಂಶ! ಶ್ರುತಿ ವಿಚ್ಛೇದನ ಕೋರಿ ಕೇಸು ಹಾಕಿದ್ದ ಮೂರೇ ತಿಂಗಳಿಗೆ ಮಹೇಂದರ್ ಇಂಥದೊಂದು ವಿಚಿತ್ರ ಕೇಸನ್ನು ಹಾಕಿದ್ದ. ಕೇಸಿನ ಸಾರಾಂಶ ನೋಡಿಯೇ

ಬಹಿರಂಗ ಸಭೆಯಲ್ಲಿ ಹೆಂಡತಿಯನ್ನೇ ಹೀಯಾಳಿಸಿದ!

ಶ್ರುತಿಗೆ ಸಿಕ್ಕಿದ್ದು ಡೈವೋರ್ಸ್ ಎನ್ನುವುದಕ್ಕಿಂತಲೂ ಅದನ್ನು ಮುಕ್ತಿ ಎಂದರೇನೇ ಹೆಚ್ಚು ಸಮಂಜಸವಾದೀತು.

ಶ್ರುತಿ-ಮಹೇಂದರ್ ಮದುವೆಯ ನಂತರ ಇಡೀ ಚಿತ್ರರಂಗ ಗಮನಿಸಿದ ಒಂದು ಸೂಕ್ಷ್ಮವೆಂದರೆ ಶ್ರುತಿಯ ಕಾಲ್‌ಶೀಟ್, ಸಭೆ-ಸಮಾರಂಭ, ಪಾತ್ರ, ಪತ್ರಿಕಾ ಸಂದರ್ಶನ ಎಲ್ಲವನ್ನೂ ನಿರ್ಧರಿಸುತ್ತಿದ್ದದ್ದು ಪತಿ ಮಹೇಂದರ್. ಶ್ರುತಿಯ ಮೊಬೈಲ್ ಎಂದು ಯಾರೇ ಫೋನ್ ಮಾಡಿದರೂ ಅತ್ತಲಿಂದ ಮಹೇಂದರ್ ಧ್ವನಿ ಮಾತ್ರವೇ ಕೇಳಿಸುತ್ತಿತ್ತು. ಶ್ರುತಿ ಎಲ್ಲಿಗೆ ಹೋದರೂ ಮಹೇಂದರ್ ಅಣ್ಣ ಮತ್ತು ತಮ್ಮನ ಮಕ್ಕಳು ಸರ್ಪಗಾವಲಿರುತ್ತಿದ್ದರು. ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಶ್ರುತಿಯ ಜೊತೆ ಮಾತಾಡಲು ಪ್ರೇಮಾ ಕೃಷ್ಣ ಪಟ್ಟಪಾಡು ಅಷ್ಟಿಷ್ಟಲ್ಲ. ಶ್ರುತಿಯನ್ನು ಎಮ್ಮೆಲ್ಸಿ ಮಾಡಿ ಕಾಂಗ್ರೆಸ್ಸಿಗೆ ಸೆಳೆಯುವುದು ಕೃಷ್ಣರ ಉದ್ದೇಶವಾಗಿತ್ತು. ಅದಕ್ಕೆಂದೇ ಐದಾರು ಬಾರಿ ಪ್ರೇಮಾ ಕೃಷ್ಣ ಫೋನ್ ಮಾಡಿದರೆ ಮಹೇಂದರ್ ಹಾರಿಕೆ ಉತ್ತರ ಕೊಟ್ಟು ಅದನ್ನು ಶ್ರುತಿಗೆ ಹೇಳೇ ಇರಲಿಲ್ಲ!



ಕೊನೆಗೆ ಪ್ರೇಮಾ ಕೃಷ್ಣ ರೋಸತ್ತು 'ಯಾವತ್ತು ಫೋನ್ ಮಾಡಿದ್ರೂ ನೀನೇ ಮಾತಾಡ್ತಿಯಲ್ಲಯ್ಯ? ನಿನ್ನ ಹೆಂಡತಿಗೆ ಫೋನ್ ಕೊಡು ನಾನೇ ಮಾತಾಡ್ತೀನಿ' ಎಂದು ಹಠಕ್ಕೆ ಬಿದ್ದಾಗಲೇ ಮಹೇಂದರ್ ಫೋನ್ ಕೊಟ್ಟ. 'ಯಾಕಮ್ಮಾ ಎಮ್ಮೆಲ್ಸಿ ಆಗೋಕೆ ಇಷ್ಟಾ ಇಲ್ವಾ? ಅಥವಾ ಕಾಂಗ್ರೆಸ್ಸಿಗೆ ಬರೋಕೆ ಮನಸ್ಸಿಲ್ವಾ?' ಎಂದು ಪ್ರೇಮಾ ಕೇಳಿದಾಗಲೇ ಶ್ರುತಿಗೆ ಮಹೇಂದರ್ ಮಾಡಿದ ದ್ರೋಹ ಗೊತ್ತಾಗಿದ್ದು!

ಎಮ್ಮೆಲ್ಸಿಯಾಗಬೇಕೆಂಬ ಮುಖ್ಯಮಂತ್ರಿ ಕೃಷ್ಣರ ಕೋರಿಕೆಯನ್ನು ಮಹೇಂದರ್ ಶ್ರುತಿ ಗಮನಕ್ಕೆ ತಂದೇ ಇರಲಿಲ್ಲ. 'ನನ್ನ ಮಿಸೆಸ್ಸಿಗೆ ರಾಜಕೀಯ ಇಷ್ಟ ಇಲ್ವಂತೆ. ನನಗೆ ಕೊಳ್ಳೇಗಾಲಕ್ಕೆ ಟಿಕೆಟು ಕೊಟ್ಟರೆ ಮಾತ್ರ ಬಂದು ಪ್ರಚಾರ ಮಾಡ್ತಾರಂತೆ' ಎಂದು ಮಹೇಂದರ್ ಕೃಷ್ಣರ ಬಳಿ ಪಟ್ಟುಹಿಡಿದಿದ್ದ.

ಆ ಹೊತ್ತಿಗಾಗಲೇ ಶ್ರುತಿಗೆ ಮಹೇಂದರ್ ಬಗ್ಗೆ ಅಸಹ್ಯ ಶುರುವಾಗಿತ್ತು, ವಾರಗಟ್ಟಲೇ ಮನೆಬಿಟ್ಟು ಹೊರಗೆ ಬರುತ್ತಿರಲಿಲ್ಲ. ಹುಟ್ಟಾ ಸೋಮಾರಿ. ಪ್ರತಿಯೊಂದರಲ್ಲೂ ನಿರಾಸಕ್ತಿ. ಮಗಳ ಬಗ್ಗೆ ಕಿಂಚಿತ್ತೂ ಪ್ರೀತಿಯಿಲ್ಲ. ಅದೆಂಥದ್ದೋ ಮನೋ ಖಿನ್ನತೆಗೆ ಬಿದ್ದು ಕತ್ತಲ ಕೋಣೆ ಹೊಕ್ಕನೆಂದರೆ ಮೂರು ದಿನಗಳಾದರೂ ಕೋಣೆ ಬಿಟ್ಟು ಬರುತ್ತಿರಲಿಲ್ಲ. ಸೂರ್ಯನ ಬೆಳಕನ್ನು ನೋಡದೆ ಮೂರು ದಿನಗಳ ಕಾಲ ಕತ್ತಲಲ್ಲಿ ಕೂತು ಅದೇನು ಮಾಡುತ್ತಿದ್ದ, ಏಕೆ ಕತ್ತಲನ್ನು ಇಷ್ಟ ಪಡುತ್ತಿದ್ದ ಎಂಬುದು ಇವತ್ತಿಗೂ ನಿಗೂಢ. ಬರುಬರುತ್ತ ನಿರ್ದೇಶನವನ್ನೇ ಮರೆತುಬಿಟ್ಟ. ಶ್ರುತಿಯನ್ನು ಮುಂದಿಟ್ಟುಕೊಂಡು ಹೇಗೆ ಹಣ ಬಾಚಬೇಕು, ಯಾವ ರೀತಿ ರಾಜಕೀಯವಾಗಿ ತಾನು ಬೆಳೆಯಬೇಕು ಎಂಬುದಷ್ಟೇ ಆತನ ಹುನ್ನಾರವಾಗಿತ್ತು.

ಇದೆಲ್ಲವನ್ನೂ ಹೇಗೋ ಸಹಿಸಿಕೊಂಡಿದ್ದ ಶ್ರುತಿಗೆ ಮಹೇಂದರ್ ಎಂಥ ರಣಹೇಡಿಯೆಂಬುದು ಮೊದಲಬಾರಿಗೆ ಗೊತ್ತಾಗಿದ್ದು ಕೊಳ್ಳೇಗಾಲದಲ್ಲಿ. ಬಿಜೆಪಿ ಟಿಕೆಟ್ ಗಿಟ್ಟಿಸಿ ಚುನಾವಣೆಗಿಳಿದಿದ್ದ ಮಹೇಂದರ್ ಪರ ಶ್ರುತಿ ಹಳ್ಳಿಹಳ್ಳಿ ಸುತ್ತಿ ಪಾದಯಾತ್ರೆ ಮಾಡುತ್ತಿದ್ದರೆ ಆತ ಮಾತ್ರ ಕೋಣೆ ಹೊಕ್ಕಿ ಕೂತುಬಿಡುತ್ತಿದ್ದ.



ಅದೊಮ್ಮೆ ಪಾದಯಾತ್ರೆಯಲ್ಲಿ ಪುಂಡರ ಗುಂಪೊಂದು ಶ್ರುತಿಯನ್ನು ಮುತ್ತಿಕೊಂಡಿದ್ದೇ ರವಿಕೆಯನ್ನೇ ಹರಿದುಹಾಕಿತು. ಅಲ್ಲಿಂದ ಹೇಗೋ ಬಚಾವಾಗಿ ಬಂದ ಶ್ರುತಿ ಅವತ್ತಿನ ಬಹಿರಂಗ ಸಭೆಯಲ್ಲಿ ತನ್ನ ಮೇಲೆ ಪುಂಡರ ಗುಂಪು ನಡೆಸಿದ ದೌರ್ಜನ್ಯವನ್ನು ಹೇಳಿಕೊಂಡು ವೇದಿಕೆಯಲ್ಲೇ ಕಣ್ಣೀರಿಟ್ಟರು. ಅದೇ ವೇದಿಕೆಯಲ್ಲಿದ್ದ ಮಹೇಂದರ್ ಏಕಾಏಕಿ ಬಾಯಿ ಹಾಕಿ 'ಮಹಾಜನಗಳೇ... ನನ್ನ ಹೆಂಡತಿಗೆ ಕೊಂಚ ಕಾಮನ್‌ಸೆನ್ಸ್ ಕಮ್ಮಿ, ಎಲೆಕ್ಷನ್ನು ಅಂದಮೇಲೆ ಇದೆಲ್ಲ ಇದ್ದಿದ್ದೆ, ಯಾರೋ ಒಂದಿಬ್ಬರು ಮೈಮೇಲೆ ಕೈಹಾಕೋದು ಸಹಜ. ಅದನ್ನ ಅಡ್ಜೆಸ್ಟ್ ಮಾಡ್ಕೊಂಡು ಹೋಗಬೇಕು. ನನ್ನ ಮಿಸೆಸ್ಸು ಹೀಗೆಲ್ಲ ಹೇಳುದ್ರು ಅಂತ ನೀವೇನೂ ಬೇಜಾರ್ ಮಾಡ್ಕೋಬೇಡಿ. ಆಕೆಗೆ ನಾನೇ ಬುದ್ಧಿ ಹೇಳ್ತೀನಿ...!?' ಎಂದುಬಿಟ್ಟ.

ತನ್ನ ಪತಿಯೇ ತನ್ನ ಮೇಲಾದ ದೌರ್ಜನ್ಯವನ್ನು ಸಮರ್ಥಿಸಿದ್ದನ್ನು ಕೇಳಿದ ಶ್ರುತಿಗೆ ಏನಾಗಿರಬೇಡ? ಅರೆಕ್ಷಣ ಕೂಡ ಯೋಚಿಸದೆ, ಮಹೇಂದರ್ ಮುಖ ಕೂಡ ನೋಡದೆ ವೇದಿಕೆಯಿಂದಿಳಿದು ಹೊರಟೇಬಿಟ್ಟರು. ಮತ್ತೆಂದೂ ಕೊಳ್ಳೇಗಾಲಕ್ಕೆ ಕಾಲಿಡಲಿಲ್ಲ. ಶ್ರುತಿ ಕೂಡಿಟ್ಟಿದ್ದ ಐವತ್ತು ಲಕ್ಷದಷ್ಟು ದುಡ್ಡನ್ನು ಒಯ್ದಿದ್ದೇ ಮಹೇಂದರ್ ಕೊಳ್ಳೇಗಾಲಕ್ಕೆ ಸುರಿದ. ತನ್ನ ಬದಲಿಗೆ ಬಿಜೆಪಿ ಟಿಕೆಟ್ ಗಿಟ್ಟಿಸಿದ ಮಹೇಂದರ್‌ನನ್ನು ತಾನೇ ನಿಂತು ಗೆಲ್ಲಿಸುತ್ತೇನೆಂದು ನಂಬಿಸಿದ ಹಾಲೀ ಶಾಸಕ ನಂಜುಂಡಸ್ವಾಮಿ ಅವತ್ತು ಮನೆಮನೆಗೂ ಹಂಚಬೇಕು ಎಂದು ಮಹೇಂದರ್‌ನಿಂದ ಪಡೆದ 50 ಲಕ್ಷವನ್ನು ಸಪಾಟಾಗಿ ನುಂಗಿಹಾಕಿದ.

ಬೇರೆ ಯಾರನ್ನೋ ಎಮ್ಮೆಲ್ಲೆ ಮಾಡುವ ಬದಲು ಜೊತೆಗಿದ್ದೇ ಸೋಲಿಸಿಬಿಟ್ಟರೆ ಕನಿಷ್ಠ ಮುಂದಿನ ಬಾರಿಯಾದರೂ ತಾನು ಗೆಲ್ಲಬಹುದಲ್ಲ ಎಂದು ಲೆಕ್ಕ ಹಾಕಿದ ನಂಜುಂಡಸ್ವಾಮಿ ಮಹೇಂದರ್‌ಗೆ ಸಮಾ ನಾಮ ಹಾಕಿದ್ದ. ಚುನಾವಣಾ ಮೋಸದ ಗಂಧ ಗೊತ್ತಿಲ್ಲದ ಮಹೇಂದರ್ ದುಡ್ಡು-ಬಿಜೆಪಿ ಟಿಕೆಟ್ಟು ಎರಡನ್ನೂ ವ್ಯರ್ಥಪಡಿಸಿದ್ದ. ಬಹುಶಃ ಮಹೇಂದರ್ ಪರ ಶ್ರುತಿ ಅವತ್ತು ಕೊಳ್ಳೇಗಾಲಕ್ಕೆ ಹೋಗದೇ ಇದ್ದಿದ್ದರೆ ಬಹುಜನ ಸಮಾಜ ಪಕ್ಷದ ಮಹೇಶ್ ಸಲೀಸಾಗಿ ಗೆದ್ದುಬಿಡುತ್ತಿದ್ದರು. ಕರ್ನಾಟಕದಲ್ಲಿ ಬಿಎಸ್‌ಪಿ ಖಾತೆ ತೆರೆದಂತಾಗುತ್ತಿತ್ತು.

ಬಿಜೆಪಿ ಕೊಟ್ಟ ಟಿಕೆಟ್ಟು, ಶ್ರುತಿ ಕೂಡಿಟ್ಟ ದುಡ್ಡು ಹೋಗಿದ್ದರೆ ಪರವಾಗಿರಲಿಲ್ಲ, ಮಹೇಂದರ್ ತನ್ನ ಪತ್ನಿಯ ನಂಬಿಕೆಯನ್ನೇ ಕಳಕೊಂಡಿದ್ದ. ಅವತ್ತು ವೇದಿಕೆಯಲ್ಲಿ ತನ್ನ ಪತ್ನಿಯ ಮೇಲಾದ ದೌರ್ಜನ್ಯವನ್ನು ಮಹೇಂದರ್ ಸಮರ್ಥಿಸದೇ ಹೋಗಿದ್ದರೆ ಇವತ್ತಿಗದು ವಿಚ್ಛೇದನದ ತನಕ ಮುಟ್ಟುತ್ತಲೇ ಇರಲಿಲ್ಲ.

ಪತ್ನಿಯ ಮಾನವನ್ನೇ ಲೆಕ್ಕಿಸದವನಿಗೆ ಮಗಳ ಕಾಳಜಿ ಯಾವ ಲೆಕ್ಕ? ಹೆಂಡತಿಗಿಂತ ಆಕೆಯ ಆಸ್ತಿ ತಾನೇ ಮುಖ್ಯ?

ಪ್ರ


ನ್ಯಾಯಾಧೀಶರು 'ಅಲ್ರೀ, ನೀವೇನು ಗಂಡಸಲ್ವಾ? ಕೈಕಾಲು ಬಿದ್ದು ಹೋಗಿದೆಯಾ? ಗಂಡ ಹೆಂಡತಿಗೆ ಜೀವನಾಂಶ ಕೊಡೋದನ್ನು ನೋಡಿದ್ದೀವಿ. ನೀವು ಹೆಂಡ್ತಿ ಹತ್ರಾನೇ ಜೀವನಾಂಶ ಕೇಳಿದ್ದೀರಲ್ರೀ....?' ಎಂದು ವಿಚಿತ್ರವಾಗಿ ಪ್ರಶ್ನೆಯಿಟ್ಟಿದ್ದರು.

ಯಾಕೋ ಇದು ತನಗೇ ಉಲ್ಟಾ ಹೊಡೆಯುತ್ತಿದೆಯೆಂದು ಲೆಕ್ಕ ಹಾಕಿದ ಮಹೇಂದರ್ ತನ್ನ ವಕೀಲರ ಮೂಲಕ ಹೊಸದೊಂದು ವಾದವಿಟ್ಟ. ತಾನು ದುಡಿದದ್ದನ್ನೆಲ್ಲ ತಂದು ಪತ್ನಿ ಹೆಸರಲ್ಲಿ ಮನೆ ಕಟ್ಟಿಸಿದ್ದೇನೆಂದೂ ಬಸವೇಶ್ವರನಗರದಲ್ಲಿ ಶ್ರುತಿಯ ಹೆಸರಿಗಿರುವ ಬಂಗಲೆಗೆ ದುಡ್ಡು ಹಾಕಿದ್ದೇ ತಾನೆಂದೂ ಈಗ ವಿಚ್ಛೇದನಕ್ಕೆ ಮುನ್ನ ತನಗೆ ಒಂದು ಕೋಟಿ ಕೊಡಬೇಕೆಂದೂ ವಾದಿಸಿದ್ದ. ಮಹೇಂದರ್ ಅರ್ಜಿಯನ್ನು ನೋಡಿದ ಕೋರ್ಟು ಶುರುವಿನಲ್ಲಿ ಶ್ರುತಿ ವಿರುದ್ಧ ಮನೆ ಮಾರದ ಹಾಗೆ ಇಂಜಂಕ್ಷನ್ ಆದೇಶವನ್ನು ಜಾರಿಗೊಳಿಸಿತು.

ಶ್ರುತಿಗಿದು ದೊಡ್ಡ ಆಘಾತ. ಹಾಗೆ ನೋಡಿದರೆ ಶ್ರುತಿ ಬಸವೇಶ್ವರನಗರದ ಮನೆ ಕಟ್ಟಿಸಿದ್ದು 2006 ರಲ್ಲಿ, ಆ ಹೊತ್ತಿಗಾಗಲೇ ಮಹೇಂದರ್ ಎಂಟೋ ಹತ್ತೋ ಚಿತ್ರಗಳನ್ನು ನಿರ್ದೇಶಿಸಿದ್ದ. ಎರಡೋ ಮೂರೋ ಚಿತ್ರಗಳಿಗೆ ಮಹೇಂದರ್ ಮೂರು ಲಕ್ಷದ ಸಂಭಾವನೆ ಪಡೆದದ್ದು ಬಿಟ್ಟರೆ ಉಳಿಕೆ ಬಹುತೇಕ ಚಿತ್ರಗಳಿಗೆ ಪಡೆದದ್ದು ಒಂದೋ ಅಥವಾ ಒಂದೂವರೆ ಲಕ್ಷ ಮಾತ್ರ. ಹೆಸರಿಗೆ ನಿರ್ದೇಶಕ ಎಂಬುದರ ಹೊರತಾಗಿ ಬರುತ್ತಿದ್ದ ಸಂಭಾವನೆ ಅಷ್ಟಕ್ಕಷ್ಟೆ. ಏನೇ ಲೆಕ್ಕ ಹಾಕಿದರೂ ಆತನಕ ಮಹೇಂದರ್ ಐವತ್ತು ಲಕ್ಷಕ್ಕಿಂತ ಅಧಿಕವಾಗಿ ದುಡಿದೇ ಇರಲಿಲ್ಲ. ಹತ್ತು ವರ್ಷದಲ್ಲಿ ಐವತ್ತು ಲಕ್ಷ ದುಡಿದು ಮನೆ ಬಾಡಿಗೆ, ಊಟ, ಬಟ್ಟೆ, ಖರ್ಚು ಎಂದೆಲ್ಲ ಕಳೆದರೂ ಎಷ್ಟು ತಾನೇ ಉಳಿಸಲು ಸಾಧ್ಯ?



ಇಂಥಾದ್ದರಲ್ಲಿ ಮಹೇಂದರ್ ಇಡೀ ಬಸವೇಶ್ವರನಗರದ ಮನೆಯನ್ನು ತಾನೇ ಕಟ್ಟಿಸಿದ್ದು ಎನ್ನಲು ಯಾವುದೇ ಆಧಾರವಿರಲಿಲ್ಲ. ಆದರೆ ಶ್ರುತಿ ಆ ಹೊತ್ತಿಗಾಗಲೇ ಚತುರ್ಭಾಷಾ ನಟಿ. ತಮಿಳು, ತೆಲುಗು, ಮಲೆಯಾಳಂ, ಕನ್ನಡ ಸೇರಿದಂತೆ ಎಲ್ಲಾ ಭಾಷೆಗಳಲ್ಲೂ ಶ್ರುತಿ ನಟಿಸಿಯಾಗಿತ್ತು. ಪ್ರತಿ ಚಿತ್ರಕ್ಕೊಂದು ಆಕೆ ಪಡೆಯುತ್ತಿದ್ದ ಸಂಭಾವನೆ ಹತ್ತು ಲಕ್ಷವನ್ನು ಮೀರಿತ್ತು. ಬಸವೇಶ್ವರ ನಗರದಲ್ಲಿ 60x40 ಸೈಟು ಖರೀದಿಸುವ ಹೊತ್ತಿಗಾಗಲೇ ಮಲೆಯಾಳಂನ 'ಕೈರಾಳಿ' ಟಿವಿ ಚಾನಲ್ಲಿನಲ್ಲಿ ಶ್ರುತಿ ನಟಿಸಿದ್ದ ಮೆಗಾ ಧಾರಾವಾಹಿ 'ಸ್ತ್ರೀತ್ವಂ' ಪ್ರಸಾರವಾಗುತ್ತಿತ್ತು. ಕೇರಳದಲ್ಲಿ ಮನೆಮಾತಾಗಿದ್ದ 'ಸ್ತ್ರೀತ್ವಂ' ಧಾರಾವಾಹಿ ಸತತ ಒಂದು ವರ್ಷದ ಕಾಲ ಪ್ರಸಾರಗೊಂಡ ಜನಪ್ರಿಯ ಮೆಗಾ ಸೀರಿಯಲ್ಲಾಗಿತ್ತು. ಅದರ ಮುಖ್ಯ ಪಾತ್ರವೇ ಶ್ರುತಿ. ಪ್ರತಿನಿತ್ಯ ಶೂಟಿಂಗ್‌ಗೆಂದೇ ಸಂಭಾವನೆಯಾಗಿ ಶ್ರುತಿ ಪಡೆಯುತ್ತಿದ್ದದ್ದು 40 ಸಾವಿರ ರೂಪಾಯಿ. ತಿಂಗಳಿಗದು 12 ಲಕ್ಷ. ಕನಿಷ್ಠ ಹತ್ತು ತಿಂಗಳಿಗೆ ಲೆಕ್ಕ ಹಾಕಿದರೂ ಒಂದು ವರ್ಷದ ಮೆಗಾ ಧಾರಾವಾಹಿಯಿಂದ ಶ್ರುತಿ ಸರಿಸುಮಾರು ಒಂದು ಕೋಟಿಯಷ್ಟು ದುಡಿದಾಗಿತ್ತು. ಇದಕ್ಕೂ ಮೊದಲೇ ಚಂದ್ರಾ ಲೇಔಟಿನಲ್ಲಿ 30x40 ಸೈಟೊಂದನ್ನು ಶ್ರುತಿ ಖರೀದಿಸಿಟ್ಟುಕೊಂಡಿದ್ದರು. ಇದಲ್ಲದೆ ಶ್ರುತಿಯ ತಂದೆ ಜೆ.ವಿ. ಕೃಷ್ಣರಿಗೆ ಮೈಸೂರು ರಸ್ತೆ ದೊಡ್ಡಾಲದ ಮರದ ಬಳಿ ಅರೆಕೆರೆಯ ತೋಟವಿತ್ತು. ಆ ತೋಟವನ್ನು ಮಾರಿ ಅದರಲ್ಲಿ ಬಂದ ದುಡ್ಡಿನ ಒಂದು ಭಾಗವನ್ನು ಮಗಳು ಬಸವೇಶ್ವರನಗರದಲ್ಲಿ ಖರೀದಿಸಿದ ಸೈಟಿಗೆಂದು ಕೊಟ್ಟರು. ಅದೇ ಹೊತ್ತಿಗೆ ತನ್ನ ಚಂದ್ರಲೇಔಟ್ ಸೈಟನ್ನು ಶ್ರುತಿ 30 ಲಕ್ಷಕ್ಕೆ ಮಾರಿ ಅದನ್ನೂ ಬಸವೇಶ್ವರನಗರದ ಮನೆಗೆ ಸುರಿದರು.



ಅಪ್ಪ ತೋಟ ಮಾರಿದ್ದು, ಚಂದ್ರಾಲೇಔಟಿನಲ್ಲಿದ್ದ ಸೈಟು ಮಾರಿದ್ದು ಮತ್ತು ತಾನು ಬಣ್ಣ ಹಚ್ಚಿ ಆತನಕ ದುಡಿದದ್ದನ್ನೆಲ್ಲ ಒಟ್ಟುಗೂಡಿಸಿಯೇ ಶ್ರುತಿ ಬಸವೇಶ್ವರನಗರದಲ್ಲಿ ಮನೆ ಕಟ್ಟಿಸಿಕೊಂಡಿದ್ದು, ಅದಕ್ಕೊಂದು ಮಹೇಂದರ್ ನಯಾಪೈಸೆಯನ್ನೂ ಕೊಟ್ಟಿರಲಿಲ್ಲ, ಕೊಡಲು ದುಡ್ಡು ತಾನೇ ಎಲ್ಲಿತ್ತು?

ಇದನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿದ ಕೌಟುಂಬಿಕ ನ್ಯಾಯಾಲಯ ಒಂದೇ ತಿಂಗಳಲ್ಲಿ ಮಹೇಂದರ್ ಪರವಾಗಿ ನೀಡಿದ ತಡೆಯಾಜ್ಞೆಯನ್ನು ರದ್ದುಗೊಳಿಸಿತು. ಅಷ್ಟಕ್ಕೂ ಮನೆ ಮಾರುವ ಯೋಚನೆಯೇ ಶ್ರುತಿಗಿರಲಿಲ್ಲ, ವಾಸಕ್ಕೊಂದು ಕಟ್ಟಿಸಿಕೊಂಡ ಮನೆಯನ್ನು ಮಾರಿ ಎಲ್ಲಿಗೆ ಹೋಗಲಿ? ಮಹೇಂದರ್ ಜೊತೆಗಿನ ಮದುವೆ ಮುರಿದು ಬಿದ್ದ ಮಾತ್ರಕ್ಕೆ ಏಕೆ ಮನೆ ಮಾರಲಿ? ಎಂದು ಶ್ರುತಿಯೇ ನ್ಯಾಯಾಲಯಕ್ಕೆ [illegible] ಹಾಕಿದ್ದರು.

ಎತ್ತಿಂದೆತ್ತ ಲೆಕ್ಕ ಹಾಕಿದರೂ ಶ್ರುತಿ ಕಟ್ಟಿಸಿದ್ದ ಮನೆಗೆ ಮಹೇಂದರ್ ಕವಡೆ ಕಿಮ್ಮತ್ತಿನಷ್ಟೂ ಕಾಸು ಹಾಕಿರಲಿಲ್ಲ. ಯಾವತ್ತು ಮನೆ ಮಾರದ ಹಾಗೆ ತಂದಿದ್ದ ಇಂಜಂಕ್ಷನ್ ಆದೇಶ ರದ್ದಾಗಿ ಮುಖಭಂಗವಾಗಿತೋ ಈ ಬಾರಿ ಮಹೇಂದರ್ ಹೊಸ ತಂತ್ರವೊಂದನ್ನು ಪ್ರಯೋಗಿಸಿದ. ಅದು ಡೈವೋರ್ಸ್ ಕೇಸಿನ ವಿಚಾರಣೆಗೇ ಚಕ್ಕರ್ ಹಾಕುವುದು. ಪ್ರತಿ ಹಿಯರಿಂಗ್‌ಗೆ ಬಂದು ಗಂಟೆಗಟ್ಟಲೆ ಕಾದು ಶ್ರುತಿ ಬರಿಗೈಯಲ್ಲಿ ವಾಪಸ್ಸಾಗುತ್ತಿದ್ದರೆ ಮಹೇಂದರ್ ಕೋರ್ಟಿನತ್ತ ತಲೆ ಹಾಕುತ್ತಲೇ ಇರಲಿಲ್ಲ. ರೋಸತ್ತ ನ್ಯಾಯಾಧೀಶರು ವಿಚಾರಣೆಗೆ ಹಾಜರಾಗುವಂತೆ ಒಂದರ ಮೇಲೊಂದು ನೋಟಿಸ್ ಕೊಡುತ್ತಲೇ ಬಂದರು.

ಎಲ್ಲಿ ಶ್ರುತಿಯಿಂದ ರೊಕ್ಕ ಕೀಳಲು ತಡೆಯಾಗುತ್ತೋ ಎಂದು ಮಹೇಂದರ್ ಪದೇಪದೇ ತನ್ನ ವಕೀಲರನ್ನು ಬಿಟ್ಟು ಪೀಡಿಸಲಾರಂಭಿಸಿದ. ಸದ್ಯಕ್ಕೆ ಇದು ಬಗೆಹರಿಯುವುದಲ್ಲ ಎನ್ನಿಸಿ ಜಡ್ಜ್ ಬೋಪಯ್ಯ ತಮ್ಮ ಛೇಂಬರಿಗೇ ಕರೆಸಿ ಶ್ರುತಿ-ಮಹೇಂದರ್ ಇಬ್ಬರನ್ನೂ ಕೂರಿಸಿ ರಾಜಿ ಪಂಚಾಯ್ತಿಗೆ ಯತ್ನಿಸಿದ್ರೂ ಫಲ ಕಾಣದೇ ಹೋಯಿತು. ಆಗಲೇ ನ್ಯಾಯಾಧೀಶರು 'ಅಲ್ರೀ ಈ ಹೆಣ್ಣುಮಗಳಿಗೆ ನಿಮ್ಮ ಜೊತೆ ಬದುಕೋಕ್ಕೆ ಇಷ್ಟ ಇಲ್ಲ ಅಂದ ಮೇಲೆ ಯಾಕ್ರೀ ಬಲವಂತ ಮಾಡ್ತೀರ? ನೀವು ಗಂಡಸಲ್ವಾ? ಬದುಕು ರೂಪಿಸಿಕೊಳ್ಳೋಕೆ ಕೈಕಾಲು ನೆಟ್ಟಗಿದೆಯಲ್ಲ? ಯಾಕ್ರಿ ಹೆಣ್ಣುಮಕ್ಕಳ ದುಡ್ಡಿಗೆ ಆಸೆಪಡ್ತೀರ?' ಎಂದೆಲ್ಲ ಹೀಯಾಳಿಸಿಬಿಟ್ಟರು. ಬಂಡಗೆಟ್ಟವನಿಗೆ ಯಾವ ನಾಚಿಕೆ?

ಅತ್ತ ಕೇಸಿಗೂ ಬಾರದೆ ರಾಜಿ ಪಂಚಾಯ್ತಿಗೂ ಜಗ್ಗದೆ ಕಣ್ಣಾಮುಚ್ಚಾಲೆ ಆಡುತ್ತಿದ್ದ ಮಹೇಂದರ್ ಇಲ್ಲಿಗೆ ಆರು ತಿಂಗಳ ಹಿಂದೆ ಏಕಾಏಕಿ ಶ್ರುತಿ ತಮ್ಮ ಶರಣ್‌ಗೆ ಫೋನ್ ಮಾಡಿ 'ಆಯ್ತು ಒಂದು ಕೋಟಿ ಕೊಡೋಕೆ ಆಗದೇ ಹೋದ್ರೆ 70 ಲಕ್ಷವನ್ನಾದ್ರೂ ಕೊಡಿ, ನನ್ನತ್ರ ಈಗ ದುಡ್ಡಿಲ್ಲ. ನಾನೂ ಜೀವನ ರೂಪಿಸ್ಕೋಬೇಕಲ್ವಾ?' ಎಂದು ದಮ್ಮಯ್ಯಗುಡ್ಡೆ ಹಾಕಿದ್ದಾನೆ. ಇದನ್ನು ಕೇಳಿದ್ದೇ ಶ್ರುತಿ 70 ಲಕ್ಷ ಆತನಿಗೆ ಕೊಡೋ ಬದಲು ವಕೀಲರಿಗೆ 5 ಲಕ್ಷ ಕೊಡ್ತೀನಿ. ಕೋರ್ಟೇ ನ್ಯಾಯ ಕೊಡಲಿ ಎಂದು ಪಟ್ಟುಹಿಡಿದರು.

ಈ ರೀತಿ ಶ್ರುತಿಗೆ ಮುಕ್ತಿ ಕೊಡಲು ಹಣ ವಸೂಲಿಯ ಹಾದಿ ಹಿಡಿದ ಮಹೇಂದರ್‌ಗೆ ಇನ್ನು ದುಡ್ಡು ಬರುವುದು ಕಷ್ಟ ಎನ್ನಿಸಿದೆ. ಎರಡು ತಿಂಗಳು ಸುಮ್ಮನಿದ್ದು ಈಗ ಕೊನೆಯ ಯತ್ನವೋ ಎಂಬಂತೆ ತನ್ನ ಪರಮಾಪ್ತ ರಮೇಶ್ ಯಾದವ್‌ನನ್ನು ಛೂ ಬಿಟ್ಟಿದ್ದಾನೆ. ನಿರ್ಮಾಪಕ ರಮೇಶ್ ಯಾದವ್ ಡೀಲಿಗಿಳಿದನೆಂದರೆ ಸುಲಭಕ್ಕೆ ಜಗ್ಗುವ ಆಸಾಮಿಯಲ್ಲ. ಪದೇಪದೇ ಶ್ರುತಿಗೆ ರಮೇಶ್ ಯಾದವ್‌ನಿಂದ ಫೋನ್ ಬಂದಿದೆ. ಶ್ರುತಿ ತಂದೆ, ಅಣ್ಣ ಶರಣ್ ಮತ್ತು ರಮೇಶ್ ಯಾದವ್ ಕೂತು ಅಂತಿಮ ನಿರ್ಧಾರವೊಂದಕ್ಕೆ ಬಂದಿದ್ದಾರೆ.

ಅದು ಮಹೇಂದರ್‌ಗೆ 25 ಲಕ್ಷ ಕೊಡುವುದು ಮತ್ತು ಮಹೇಂದರ್ ತನ್ನ ಚುನಾವಣಾ ಖರ್ಚಿಗೆಂದು ಮನೆ ಮೇಲೆ ಮಾಡಿದ ಸಾಲದ ಬಾಕಿಯಾದ 15 ಲಕ್ಷವನ್ನೂ ಶ್ರುತಿಯೇ ವಹಿಸಿಕೊಳ್ಳುವುದು. ಅಲ್ಲಿಗೆ ಶ್ರುತಿಯಿಂದ ಮಹೇಂದರ್‌ಗೆ 40 ಲಕ್ಷ ಬಂದಂತಾಯ್ತು. ಕೋರ್ಟ್ ಹೊರಗೇ ಈ ಬಗ್ಗೆ ಒಪ್ಪಂದ ಮಾಡಿಕೊಳ್ಳುವುದು. ಮೊದಲ ಹತ್ತು ಲಕ್ಷ ನಗದು ಮತ್ತು ಮಹೇಂದರ್ ಸಹಿ ಹಾಕಿದ ನಂತರ 6 ತಿಂಗಳಲ್ಲಿ 15 ಲಕ್ಷ ಕೊಡುವುದು. ಮಗಳನ್ನು ಬೇಕೆನಿಸಿದಾಗ ಮಹೇಂದರ್ ಭೇಟಿ ಮಾಡಲು ಶ್ರುತಿ ಅಡ್ಡ ಬರುವಂತಿಲ್ಲ. ಹಾಗಂಥ ಮಗಳ ಓದಿಗೆ, ಪೋಷಣೆಗೆ, ಖರ್ಚಿಗೆಂದು ಮಹೇಂದರ್ ನಯಾಪೈಸೆ ಕೊಡುವುದಿಲ್ಲ, ಮಗಳ ಯಾವ ಜವಾಬ್ದಾರಿಯೂ ಮಹೇಂದರ್‌ಗಿಲ್ಲ!

ಇಂಥದೊಂದು ಲಿಖಿತ ಒಪ್ಪಂದಕ್ಕೆ ಸಹಿಹಾಕಿದ ನಂತರವೇ ಮಹೇಂದರ್ ಕೋರ್ಟಿಗೆ ಬಂದು ವಿಚ್ಛೇದನಕ್ಕೆ ಸಹಿಹಾಕಿದ್ದು. ಇಲ್ಲಿ ಲಾಭವಾಗಿದ್ದು ಮಹೇಂದರ್‌ಗಾದರೆ ಕಳಕೊಂಡಿದ್ದು ಶ್ರುತಿ. ಮಗಳ ಪೂರ್ತಿ ಹೊಣೆ ಆಕೆಯ ಹೆಗಲ ಮೇಲಿದೆ. ಸಾಲದ್ದಕ್ಕೆ ಮಹೇಂದರ್‌ಗೆ ಜೀವನಾಂಶವಾಗಿ 40 ಲಕ್ಷ ಕೈಬಿಟ್ಟಿದೆ. ಹೆಂಡತಿಗೆ ಗಂಡ ಜೀವನಾಂಶ ಕೊಟ್ಟಿದ್ದನ್ನು ಕೇಳಿದ್ದೇವೆ. ಆದರೆ ಗಂಡನಿಗೆ ಹೆಂಡತಿಯೇ ಜೀವನಾಂಶ ಕೊಟ್ಟಿದ್ದು ಬಹುಶಃ ಶ್ರುತಿಯ ವಿಷಯದಲ್ಲೇ ಇರಬೇಕು. ಕೊನೆಗೂ ಮುಕ್ತಿ ಸಿಕ್ಕಿತಲ್ಲ! ಆದರ ಬೆಲೆ 40 ಲಕ್ಷ.....!

ಪತ್ರಕರ್ತೆ ಮೇಲೆ ಹಲ್ಲೆ: ದೇಶಪ್ರೇಮದ ಸೋಗಿನಲ್ಲಿ ಕೋಮುವಾದಿ ಕೃತ್ಯ



ಪ್ರಜ್ಞಾವಂತ ಸಮಾಜ ಇಡಿಯಾಗಿ ತಲೆ ತಗ್ಗಿಸುವಂತಹ ಘಟನೆಯಿದು. ಬೆಂಗಳೂರು ಬ್ಲಾಸ್ಟ್‌ಗೆ ಸಂಬಂಧಿಸಿದಂತೆ ಪೊಲೀಸರಿಂದ ಅನಗತ್ಯವಾಗಿ ಫಿಟ್ ಆಗಿರುವ ಕೇರಳ ಮೂಲದ ತೆಹಲ್ಕಾ ವರದಿಗಾರ್ತಿ ಶಾಹಿನ ಕೆ.ಕೆ ವಿಚಾರಣೆಗೆ ಸೋಮವಾರಪೇಟೆಯ ತಹಶೀಲ್ದಾರರ ಮುಂದೆ ಇದೇ ಡಿಸೆಂಬರ್ 9ನೇ ತಾರೀಖು ಹಾಜರಾಗಿದ್ದಳು. ಈ ಸಂದರ್ಭದಲ್ಲಿ ಹಿಂದೂ ಜಾಗರಣ ವೇದಿಕೆಯ ಸದಸ್ಯರೆಂದು ಹೇಳಿಕೊಂಡ ಕೆಲವರು ಪೊಲೀಸರ ಸಮ್ಮುಖದಲ್ಲೇ ಶಾಹಿನ ಮೇಲೆ ಹಲ್ಲೆನಡೆಸಲು ಯತ್ನಸಿದ್ದು ಅಸಹ್ಯ ಹುಟ್ಟಿಸುವಂತಿತ್ತು. ಎರಡು ವರ್ಷ ಕಳೆದರು ಸರಿಯಾದ ಜಾಡು ಹಿಡಿಯುವಲ್ಲಿ ಪದೇಪದೇ ದಿಕ್ಕು ತಪ್ಪುತ್ತಿರುವ ತನಿಖೆಯ ಮತ್ತೊಂದು ಮಹಾನ್ ಲೋಪವಿದು. ಆದರೆ ಈ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್ ವರ್ತಿಸಿದ್ದ ಹೊಣೆಗೇಡಿತನದ ರೀತಿ ಮಾತ್ರ ಪೊಲೀಸ್ ಇಲಾಖೆ ಮೇಲಿನ ವಿಶ್ವಾಸವನ್ನೇ ಕುಗ್ಗಿಸುವಂತಿದೆ.

2008ರಲ್ಲಿ ಬೆಂಗಳೂರು ಒಂದರ ಹಿಂದೊಂದರಂತೆ ಎಂಟು ಸರಣಿ ಬ್ಲಾಸ್ಟ್‌ಗೆ ಬೆಚ್ಚಿಬಿದ್ದಿದ್ದು, ಅಮಾಯಕ ಹೆಣ್ಣುಮಗಳೊಬ್ಬಳು ಸೇಂಟ್ ಜಾನ್ ಆಸ್ಪತ್ರೆಯ ಹತ್ತಿರದ ಬಸ್‌ಸ್ಟಾಪಿನಲ್ಲಿ ಹೆಣವಾಗಿ ಮಲಗಿದ್ದು, ಪಾಕಿಸ್ತಾನದ ಐಎಸ್‌ಐ ಲಷ್ಕರ್ ತೊಯ್ಬಾಗಳ ಕಡೆ ಬೊಟ್ಟು ಮಾಡಿದ್ದು, ಕೇರಳದಿಂದ ಅಬ್ದುಲ್ ನಾಸರ್ ಮದನಿಯನ್ನು ಗದುಮಿ ತಂದು ಜೈಲಿಗೆ ಪೇರಿಸಿದ್ದು ಇವ್ಯಾವನ್ನು ಮರೆಯಲು ಸಾಧ್ಯವೇ ಇಲ್ಲ. ದುರದೃಷ್ಟವೆಂದರೆ ಆರೋಪಿಗಳನ್ನು ಸರಿಯಾಗಿ ಟ್ರೇಸ್ ಮಾಡುವಲ್ಲಿ ವಿಫಲರಾದ ಪೊಲೀಸರು ಹತಾಶೆಗೆ ಬಿದ್ದವರಂತೆ ವರ್ತಿಸುತ್ತಿದ್ದು, ನಿಜವನ್ನು ಅನಾವರಣಗೊಳಿಸಲು ಮುಂದಾದವರ ಮೇಲೆಯೇ ಕೇಸು ಜಡಿದು ಕೋರ್ಟಿಗೆ ಅಲೆಸುವ ಡ್ಯೂಟಿ ಮಾಡುತ್ತಿದ್ದಾರೆ.



ಕೇರಳದಲ್ಲಿ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಯ ಮೂಲಕ ಮುಸ್ಲಿಮರ ಸಂಘಟನೆ ಗಿಳಿದಿದ್ದ ಅಬ್ದುಲ್ ನಾಸರ್ ಮದನಿಯಿಂದ ವೋಟ್‌ಬ್ಯಾಂಕ್ ರಾಜಕಾರಣಿಗಳಿಗೆ ದಿಗಿಲು ಶುರುವಾಗಿತ್ತು, ಅದಕ್ಕೆಂದೇ ಆತನನ್ನು 1998ರ ಕೊಯಂಬತ್ತೂರು ಬ್ಲಾಸ್ಟ್ ಪ್ರಕರಣಕ್ಕೆ ತಗುಲಿಸಿ ಜೈಲು ಸೇರುವಂತೆ ಮಾಡಿದ್ದರು. ವಿಚಾರಣಾಧೀನ ಖೈದಿಯಾಗಿ 10 ವರ್ಷ ಜೈಲಿನಲ್ಲಿ ಕಳೆದ ಮದನಿಯನ್ನು 2007ರಲ್ಲಿ ಕೋರ್ಟ್ ನಿರ್ದೋಷಿಯೆಂದು ತೀರ್ಪಿತ್ತು ಬಿಡುಗಡೆ ಮಾಡಿತ್ತು. ಆದಾದ ಒಂದು ವರ್ಷಕ್ಕೇ ಬೆಂಗಳೂರು ಬ್ಲಾಸ್ಟ್ ಸಂಭವಿಸಿ, ಆ ಪ್ರಕರಣದಲ್ಲಿ ನಾಸರ್ ಮದನಿಯನ್ನು ಮತ್ತೊಮ್ಮೆ ಆರೋಪಿಯನ್ನಾಗಿಸಿ ಅರೆಸ್ಟ್ ಮಾಡಿದ್ದು ಹಲವು ಅನುಮಾನ ಗಳಿಗೆ ಎಡೆಮಾಡಿಕೊಟ್ಟಿತ್ತು.

ನಾಸರ್ ಮದನಿಯನ್ನು ಬ್ಲಾಸ್ಟ್‌ಗೆ ತಳುಕು ಹಾಕುವಲ್ಲಿ ಪೊಲೀಸರಿಗೆ ಇದ್ದದ್ದು ಕೊಡಗಿನ ಕೆ.ಕೆ.ಯೋಗಾನಂದ್ ಮತ್ತು ರಫೀಕ್ ಬಾಪಟ್ಟಿ ಎಂಬೆರಡು ಸಾಕ್ಷಿಗಳ ಹೇಳಿಕೆಗಳು. ಈ ಇಬ್ಬರೂ 2006-07ರಲ್ಲಿ ನಾಸರ್ ಮದನಿಯು ಕೊಡಗಿನ ಲಕ್ಕೇರಿ ಎಸ್ಟೇಟ್‌ನಲ್ಲಿ ಲಷ್ಕರ್-ಇ-ತೊಯ್ಬಾ ಭಯೋತ್ಪಾದಕ ಸಂಘಟನೆಯ ಉಗ್ರ ನಾಸಿರ್ ಜೊತೆಯಲ್ಲಿರುವುದನ್ನು ಕಂಡುದಾಗಿ ಸಾಕ್ಷ್ಯ ನೀಡಿದ್ದಾರೆಂಬ ಹೇಳಿಕೆ ಪೊಲೀಸರದಾಗಿತ್ತು. ಈ ಹಿಂದೆ ಕೊಯಂಬತ್ತೂರು ಸ್ಫೋಟದಲ್ಲಿ ಮದನಿಯನ್ನು ಬೇಕುಬೇಕಂತಲೇ ಫಿಟ್ ಮಾಡಿದ್ದರಿಂದ ಈ ಬಾರಿಯೂ ಸಾಕ್ಷಿಗಳನ್ನು manipulate ಮಾಡಿರಬಹುದೆಂಬ ಅನುಮಾನ ಹಲವರಲ್ಲಿ ಮೂಡಿತ್ತಾದ್ದರಿಂದ ತೆಹೆಲ್ಕಾದ ವರದಿಗಾರ್ತಿ ಶಾಹಿನಾ ಆ ಇಬ್ಬರೂ ಸಾಕ್ಷಿದಾರರನ್ನು ಸಂದರ್ಶನ ಮಾಡಿ ಸತ್ಯವನ್ನು ಹೊರಗೆಡವುವ ಸಾಹಸಕ್ಕೆ ಕೈ ಹಾಕಿದ್ದಳು.

2010ರ ನವೆಂಬರ್‌ನಲ್ಲಿ ಈ ಸಾಕ್ಷಿಗಳನ್ನು ಸಂದರ್ಶಿಸಿದ ಶಾಹಿನಾ, ಇಬ್ಬರ ಹೇಳಿಕೆಗಳೂ ಅನುಮಾನದಂತೆಯೇ ಮ್ಯಾನುಪ್ಯುಲೇಟೆಡ್ ಎಂಬುದನ್ನು ತನ್ನ ಲೇಖನದ ಮೂಲಕ ತೆರೆದಿಟ್ಟಿದ್ದಳು. ಆರ್.ಎಸ್.ಎಸ್ ಮೂಲದವನೆಂದು ಹೇಳಲಾದ ಯೋಗಾನಂದ ಎಂಬ ಸಾಕ್ಷಿಗೆ ತನ್ನ ಹೆಸರನ್ನು ಅಬ್ದುಲ್ ನಾಸರ್ ಮದನಿಯ ಕೇಸಿಗೆ ತಗುಲಿಸಿರುವುದರ ಬಗ್ಗೆ ತಿಳಿದೇ ಇರಲಿಲ್ಲವಂತೆ. 'ನಾಸರ್ ಮದನಿಯನ್ನು ತಾನು ನೋಡಿಯೇ ಇಲ್ಲ, ತಾನು ಉಗ್ರ ನಾಸಿರ್‌ನನ್ನು ಮಾತ್ರ ಎಸ್ಟೇಟ್‌ನಲ್ಲಿ ನೋಡಿದ್ದಾಗಿ ಹೇಳಿದ್ದೆ' ಎಂಬುದಾಗಿ ಹೇಳಿಕೊಂಡಿದ್ದ. ಇನ್ನು ಎರಡನೇ ಸಾಕ್ಷಿ ರಫೀಕ್‌ನಂತೂ 'ಪೊಲೀಸರ ಒತ್ತಡಕ್ಕೆ ಮಣಿದು ಈ ರೀತಿ ಸುಳ್ಳು ಹೇಳಿಕೆ ನೀಡಿದ್ದೇನೆ' ಎಂದಿದ್ದ.

ಈ ಸಂದರ್ಶನವನ್ನೆ ನೀಟಾಗಿ ಬರೆದ ಶಾಹಿನಾ 25 ನವೆಂಬರ್ 2010ರ ತೆಹೆಲ್ಕಾ ಪತ್ರಿಕೆಯಲ್ಲಿ ಪ್ರಕಟಿಸಿದ್ದಳು. ಶಾಹಿನಾಳ ಲೇಖನ ಪ್ರಕಟವಾದ ನಂತರ ಮದನಿ ಮೇಲಿನ ಕೇಸು ತೀರಾ ಮಗುಚಿಕೊಳ್ಳುವ ಹಂತಕ್ಕೆ ಬಂದು ತಲುಪಿತ್ತು. ಆಗ ತರಾತುರಿಯಲ್ಲಿ ಪೊಲೀಸರು ಶಾಹಿನಾಳ ಮೇಲೆಯೇ ಸಾಕ್ಷ್ಯಗಳನ್ನು ಬೆದರಿಸಿ, ವ್ಯತಿರಿಕ್ತ ಹೇಳಿಕೆ ಪಡೆಯಲು ಯತ್ನಿಸಿದ್ದಾಳೆ ಎಂಬ ಸುಳ್ಳು ಆರೋಪವನ್ನು ಫಿಟ್ ಮಾಡಿ ಅರೆಸ್ಟ್ ಮಾಡಿದ್ದರು. ಆಕೆ ಸಂದರ್ಶನ ನಡೆಸಿದ್ದ ಯೋಗಾನಂದ ಎಂಬಾತನಿಂದ ಬೆದರಿಕೆಯ ಕಂಪ್ಲೇಂಟನ್ನು ಪಡೆದುಕೊಂಡು ಇಷ್ಟೆಲ್ಲಾ ಹುನ್ನಾರವನ್ನು ನಡೆಸಲಾಗಿತ್ತು. ಆ ಮೂಲಕ ಕೇಸನ್ನು ಜೀವಂತವಾಗಿರಿಸಿಕೊಳ್ಳಬೇಕೆಂಬ ಅವರ ಪ್ರಯತ್ನವನ್ನು ಫಿಲ್ಮ್ ಮೇಕರ್ಸ್ ಮತ್ತು ಮಾಧ್ಯಮದವರು ಸಾರ್ವಜನಿಕವಾಗಿ ವಿರೋಧಿಸಿ ಪ್ರತಿಭಟಿಸಿದ್ದರು. ಜಾಮೀನಿನ ಮೇಲೆ ಶಾಹಿನಾ ಹೊರಬಂದಿದ್ದಳಾದರೂ ಪ್ರತಿ ಹದಿನೈದು ದಿನಕ್ಕೊಮ್ಮೆ ವಿಚಾರಣೆಯ ಉಸ್ತುವಾರಿ ವಹಿಸಿರುವ ಬೆಂಗಳೂರಿನ ಅಧಿಕಾರಿ ಮುಂದೆ ಪರೇಡ್ ನಡೆಸುತ್ತಿದ್ದಾಳೆ.

ಮೊನ್ನೆ ಒಂಬತ್ತನೇ ತಾರೀಖು ಪೊಲೀಸರು ಜಡಿದಿರುವ ಸಾಕ್ಷಿಗಳಿಗೆ ಬೆದರಿಕೆ ಹಾಕಿದ ಸುಳ್ಳು ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿಯ ಗುರುತು ಪತ್ತೆಹಚ್ಚಲು ಕಂಪ್ಲೆಂಟುದಾರರ ಮುಂದೆ ಹಾಜರಾಗಬೇಕಿದ್ದ ಕಾರಣ ಸೋಮವಾರಪೇಟೆ ತಹಶೀಲ್ದಾರರ ಕಚೇರಿಯಲ್ಲಿ ವಿಚಾರಣೆ ಇಟ್ಟುಕೊಳ್ಳಲಾಗಿತ್ತು. ಕಂಪ್ಲೆಂಟು ಕೊಟ್ಟ ಆರ್.ಎಸ್.ಎಸ್ ಮೂಲದ ಯೋಗಾನಂದನಿಂದ ವಿಷಯ ತಿಳಿದುಕೊಂಡ ಹಿಂದೂ ಜಾಗರಣ ವೇದಿಕೆಯವರೆಂದು ಹೇಳಿಕೊಂಡ ಕೆಲವರು ಅಲ್ಲಿ ಜಮಾಯಿಸಿದ್ದರು. ತನ್ನ ಸ್ನೇಹಿತರೊಂದಿಗೆ ಸ್ಕೂಟರ್ ಮೂಲಕ ಅಲ್ಲಿಗೆ ಶಾಹಿನಾ ತಲುಪಿದಾಗ ತಹಶೀಲ್ದಾರರು ಬರುವುದು ಸ್ವಲ್ಪ ತಡವಾಗಲಿದ್ದು ಪಕ್ಕದ ಕೊಠಡಿಯಲ್ಲೇ ಕಾಯುವಂತೆ ಆಕೆ ಮತ್ತು ಆಕೆಯ ಲಾಯರ್ ಚೆಂಗಪ್ಪ ಎಂಬುವವರಿಗೆ ತಿಳಿಸಿದ್ದರು.

ಇವರಿನ್ನು ಒಳಗಿದ್ದಂತೆಯೇ ಹಲ್ಲೆ ಮಾಡಬೇಕೆಂದು ಪೂರ್ವನಿಯೋಜಿಸಿಕೊಂಡಿದ್ದ ಆ ಜನರ ಗುಂಪು ಹೆಚ್ಚಾಗುತ್ತಿರುವುದನ್ನು ಕಂಡ ಪೊಲೀಸ್ ಇನ್ಸ್‌ಪೆಕ್ಟರ್ ಶಾಹಿನಾಗೆ ಪರಿಸ್ಥಿತಿ ಕೈಮೀರುವ ಸಂಭವವಿರು ವುದರಿಂದ ಸ್ಕೂಟರ್ ಬದಲಿಗೆ ಕಾರನ್ನು ಬಳಸಿ ಅಲ್ಲಿಂದ ಹೋಗುವುದು ಸೂಕ್ತ ಎಂಬ ಬಿಟ್ಟಿ ಸಲಹೆ ನೀಡಿದ್ದ. ಅಸಲಿಗೆ ತನ್ನ ವ್ಯಾಪ್ತಿಯಲ್ಲಿ ನಡೆ ಯುತ್ತಿದ್ದ ನ್ಯಾಯಾಧಿಕರಣದ ವಿಚಾರಣೆಯದು, ಶಾಹಿನಾ ಅಲ್ಲಿಗೆ ಆರೋಪಿಯಾಗಿ ಹಾಜರಾಗಿ ದ್ದಳು. ಅವಳಿಗೆ ಸೂಕ್ತ ರಕ್ಷಣೆ ನೀಡುವುದು ಆ ಇನ್ಸ್‌ಪೆಕ್ಟರ್‌ನ ಕರ್ತವ್ಯವಾಗಿತ್ತಾದರು ಆತ ಇವಳಿಗೆ ತನ್ನ ರಕ್ಷಣೆಗೆ ತಾನೇ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಚಿಸಿದ್ದ. ಇದರಿಂದ ಕೆರಳಿಹೋದ ಶಹಿನಾ ತನಗೆ ಪೊಲೀಸರೇ ರಕ್ಷಣೆ ನೀಡಬೇಕೆಂದು ಪಟ್ಟು ಹಿಡಿದಾಗ 'ನಿನಗೆ ರಕ್ಷಣೆ ಕೊಡುವುದು ನನ್ನ ಕೆಲಸವಲ್ಲ' ಎಂದ್ಹೇಳಿ ಹಲ್ಲೆಗೆ ಸಂಪೂರ್ಣ ಸಹಕಾರ ಕೊಡುವ ಸೂಚನೆ ನೀಡಿದ್ದ. ಕೂಡಲೇ ಈ ಕೇಸಿನ ವಿಚಾರಣೆ ನಡೆಸುತ್ತಿರುವ ಬೆಂಗಳೂರಿನ ಡಿ.ಎಸ್.ಪಿಯನ್ನು ಸಂಪರ್ಕಿಸಿದ ಶಾಹಿನಾ ಪರಿಸ್ಥಿತಿಯನ್ನು ವಿವರಿಸಿದ್ದಳು. ಅತ್ತ ಕಡೆಯಿಂದ ಡಿ.ಎಸ್.ಪಿ. ಕೆಂಪಗಾಗುವಂತೆ ಕ್ಯಾಕರಿಸಿದ ಮೇಲಷ್ಟೆ ಆತ ಆಕೆಗೆ ರಕ್ಷಣೆ ನೀಡಲು ಮುಂದಾದದ್ದು.

ಪೊಲೀಸ್ ವ್ಯಾನನ್ನೇರಿ ಶಾಹಿನಾ ಹೊರಬರುತ್ತಿದ್ದಂತೆ 50 ಜನಕ್ಕೂ ಹೆಚ್ಚಿದ್ದ ಹಿಂದೂ ಸಂಘಟನೆಯವರು ಎಂದೇಳಿಕೊಂಡ ಕೋಮುವಾದಿಗಳು ಅಸಭ್ಯ ಮತ್ತು ಅಸಹ್ಯಕರ ಬೈಗುಳದ ಸುರಿಮಳೆಗೈಯುತ್ತ ವ್ಯಾನಿನ ಮೇಲೆ ಮುಗಿಬಿದ್ದು ಹಲ್ಲೆಗೆ ಯತ್ನಿಸಿದ್ದರು. ಅವತ್ತು ಆಕೆ ಹೊರಗೆ ಸಿಕ್ಕಿದ್ದಿದ್ದರೆ ಪ್ರಜಾಪ್ರಭುತ್ವದ ಮಾನವನ್ನು ಇಡಿಯಾಗಿ ಹರಾಜು ಹಾಕಿಬಿಡುವಷ್ಟು ಹದ್ದು ಮೀರಿ ಹೋಗಿದ್ದರು ಅವರೆಲ್ಲ. ತಮ್ಮ ಮುಷ್ಠಿಯಲ್ಲೆ ವ್ಯಾನಿನ ಗಾಜುಗಳಿಗೆ ಗುದ್ದುತ್ತಿದ್ದ ಗುಂಪನ್ನು ಸರಿಸಿಕೊಂಡು ಹೊರಬಂದ ಪೊಲೀಸ್ ವ್ಯಾನು ಸೋಮವಾರಪೇಟೆಯಿಂದ 5 ಕಿ.ಮೀ ದೂರದಲ್ಲಿ ಆಕೆಯನ್ನಿಳಿಸಿ ಹೋಗಿತ್ತು. ತನ್ನ ಖಾಸಗಿ ಕಾರಿನ ಮೂಲಕ ಅಲ್ಲಿಗೆ ಬಂದ ವಕೀಲ ಚೆಂಗಪ್ಪ ಆಕೆಯನ್ನು ಅಲ್ಲಿಂದ ಪಾರು ಮಾಡಿದ್ದರು.

ನ್ಯಾಯಾಲಯದ ವ್ಯಾಪ್ತಿಯಲ್ಲಿನ್ನು ವಿಚಾರಣೆ ನಡೆಯುತ್ತಿರುವಾಗಲೆ, ಅದೂ ಒಂದು ಮುಕ್ತ ಸಂದರ್ಶನ ನಡೆಸಿದ ಆರೋಪಕ್ಕಾಗಿ, ಈ ಪರಿ ಹಲ್ಲೆ ನಡೆಸಲು ಮುಂದಾಗಿದ್ದು ನಿಜಕ್ಕೂ ಹೇಯ ಕೃತ್ಯ. ಹಲ್ಲೆಗೆ ಮುಂದಾದವರು ಕೋರ್ಟಿನ ತೀರ್ಪಿಗು ಮುನ್ನವೇ ಆಕೆಯನ್ನು ಸಮಾಜ ದ್ರೋಹಿ, ದೇಶದ್ರೋಹಿ ಎಂದೆಲ್ಲ ಅಬ್ಬರಿಸುತ್ತಿದ್ದದ್ದು ಅವರಿಗೆ ನ್ಯಾಯಾಲಯದ ಮೇಲಿನ ಅಗೌರವ, ತಮ್ಮ ದೌರ್ಜನ್ಯಶಾಹಿಯ ಹಾಗೂ ಅವಕಾಶವಾದಿತನಗಳ ಮೇಲಿನ ವಿಪರೀತ ನಂಬಿಕೆಗಳನ್ನು ಪ್ರತಿನಿಧಿಸುತ್ತಿತ್ತೇ ಹೊರತು ದೇಶಪ್ರೇಮವನ್ನಂತು ಖಂಡಿತ ಅಲ್ಲ. ಭಯೋತ್ಪಾದಕತೆಯನ್ನು ಭಯೋತ್ಪಾದಕರಿಗಿಂತ ಭಯಂಕರವಾಗಿ ಬಳಸಿಕೊಳ್ಳಲು [illegible] ಬೇಧವಿಲ್ಲದೆ ಅವಕಾಶವಾದಿ-ಮೂಲಭೂತವಾದಿಗಳು ಸಜ್ಜಾಗಿ ಕುಳಿತಿದ್ದಾರೆ ಎಂಬುದನ್ನು ಈ ಪ್ರಕರಣ ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಜೋಡಿ ಎಂದಳು ಜಯಾ

ಜಯಾ ಕುರ್ಚಿ ಮೇಲೆ ಶಶಿ ಕಣ್ಣು





ಜಯಲಲಿತಾಳ ಪಕ್ಕದಲ್ಲೇ ನಿಂತು ಆಕೆಯ ಗೆಳತಿಯಂತೆ, ಹಿತರಕ್ಷಕಿಯಂತೆ, ಆಪ್ತ ಸಲಹೆಗಾರ್ತಿಯಂತೆ ವರ್ತಿಸುತ್ತಿದ್ದ ಅದೇ ಶಶಿಕಲಾ ಇನ್ನು ಹಲವೇ ದಿನಗಳಲ್ಲಿ ಜಯಾಳ ಬೆನ್ನಿಗೇ ಇರಿದು ತಮಿಳುನಾಡಿನ ಮುಖ್ಯಮಂತ್ರಿ ಸ್ಥಾನಕ್ಕೆ ತನ್ನ ಗಂಡ ನಟರಾಜನ್‌ನನ್ನು ತರಲು ಗುಪ್ತವಾಗಿ ಮಾಡಿದ್ದ ಯೋಜನೆಗಳ ಬಗ್ಗೆ ಜಯಾಗೆ ಗೊತ್ತಾಗಿ ಶಶಿಯನ್ನು ಹೊರ ದಬ್ಬಿದ್ದಾಳೆ!!

ಗೌರಿ ಲಂಕೇಶ್

ತಮಿಳು ನಾಡಿನ ಮುಖ್ಯಮಂತ್ರಿ ಜಯಲಲಿತಾ ತನ್ನ ಆಪ್ತೆ ಶಶಿಕಲಾಳನ್ನು ರಾತ್ರೋರಾತ್ರಿ ತನ್ನ ಮನೆಯಿಂದ ಒದ್ದೋಡಿಸಿದ್ದೇಕೆ?

ಮೂವತ್ತು ವರ್ಷಗಳ ಕಾಲ ಜಯಾಳ ನೆರಳಿನಂತಿದ್ದ, ಸೇವಕಿಯಂತಿದ್ದ, ಆಕೆಯ ಎಲ್ಲಾ ಬೇಕು ಬೇಡಗಳನ್ನು ಪೂರೈಸುತ್ತಿದ್ದ ಮಾನಸಿಕ ಸ್ಥೈರ್ಯ ನೀಡುತ್ತಿದ್ದ ಕಷ್ಟ ಕಾಲದಲ್ಲೂ ಜೊತೆಗಿದ್ದ ಶಶಿಕಲಾಳನ್ನು ಬೆಳಗಾಗುವುದರೊಳಗೆ ಎಐಎಡಿಎಂಕೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೂ ಜಯಾ ಹೊರಹಾಕಿದ್ದೇಕೆ?

ಶಶಿಕಲಾ ಮಾತ್ರವಲ್ಲ, ಆಕೆಯ ಗಂಡ ನಟರಾಜನ್ ಮತ್ತು ಇತರ ಹನ್ನೊಂದು ಸಂಬಂಧಿಕರೆಲ್ಲರಿಗೂ ಇದ್ದಕ್ಕಿದ್ದಂತೆ ಜಯಾ ಗೇಟ್‌ಪಾಸ್ ಕೊಟ್ಟಿದ್ದೇಕೆ?

ಈ ಎಲ್ಲಾ ಪ್ರಶ್ನೆಗಳಿಗೆ ಒಂದೇ ಉತ್ತರ: ಜಯಲಲಿತಾಳ ಪಕ್ಕದಲ್ಲೇ ನಿಂತು ಆಕೆಯ ಗೆಳತಿಯಂತೆ, ಹಿತರಕ್ಷಕಿಯಂತೆ, ಆಪ್ತ ಸಲಹೆಗಾರ್ತಿಯಂತೆ ವರ್ತಿಸುತ್ತಿದ್ದ ಅದೇ ಶಶಿಕಲಾ ಇನ್ನು ಹಲವೇ ದಿನಗಳಲ್ಲಿ ಜಯಾಳ ಬೆನ್ನಿಗೇ ಇರಿದು ತಮಿಳುನಾಡಿನ ಮುಖ್ಯಮಂತ್ರಿ ಸ್ಥಾನಕ್ಕೆ ತನ್ನ ಗಂಡ ನಟರಾಜನ್‌ನನ್ನು ತರಲು ಗುಪ್ತವಾಗಿ ಮಾಡಿದ್ದ ಯೋಜನೆಗಳ ಬಗ್ಗೆ ಜಯಾಗೆ ಗೊತ್ತಾಗಿ ಶಶಿಯ ಗುಟ್ಟು ರಟ್ಟಾಗಿದ್ದು!!

ಚೆನ್ನೈನಲ್ಲಿರುವ ಜಯಾಳ 36, ಪೋಯೆಸ್ ಗಾರ್ಡನ್ ನಿವಾಸವನ್ನಲ್ಲದೆ ಇಡೀ ತಮಿಳುನಾಡಿನ ರಾಜಕೀಯವನ್ನೇ ಬದಲಾಯಿಸಬಲ್ಲ ಇಂತಹದ್ದೊಂದು ಉಚ್ಚಾಟನೆಯ ಸುದ್ದಿ ದೇಶದ ಜನರ ಮೇಲೆ ಧುತ್ತೆಂದು ಎರಗಿದ್ದರೂ ಇಂತಹ ಘಟನೆಯೊಂದು ಸದ್ಯದಲ್ಲೇ ಸಂಭವಿಸಲಿದೆ ಎಂಬ ಮಾತು ಕಳೆದ ಒಂದು ತಿಂಗಳಿನಿಂದ ಚೆನ್ನೈನಲ್ಲಿ ಸುಳಿದಾಡುತ್ತಿತ್ತು. ಆದರೆ ಆ ಮಾತುಗಳ ತರ್ಕ ಎಂತಹದ್ದಾಗಿತ್ತೆಂದರೆ ಶಶಿಯನ್ನು ಜಯಾ ಓಡಿಸುವ ಬದಲಾಗಿ ಶಶಿಯೇ ಜಯಾಳನ್ನು ಕಿತ್ತೆಸೆಯುತ್ತಾಳೆ ಎಂಬುದಾಗಿತ್ತು. ಆದರೀಗ ಆ ತರ್ಕಗಳೆಲ್ಲ ಉಲ್ಟಾಪಲ್ಟಾ ಆಗಿದೆ. ಶಶಿಕಲಾ, ಆಕೆಯ ಗಂಡ ನಟರಾಜನ್, ಸಹೋದರರು, ಅಳಿಯಂದಿರು ಮತ್ತು ಹಲವಾರು ಸಂಬಂಧಿಕರು ಇವತ್ತು ತಮ್ಮ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ತಲೆ ಮರೆಸಿಕೊಂಡಿದ್ದಾರಲ್ಲದೆ ಅವರಲ್ಲಿ ಹಲವರು ಆದಷ್ಟು ಬೇಗ ಈ ದೇಶದಿಂದಲೇ ಪರಾರಿ ಆಗುವ ಹಪಹಪಿಯಲ್ಲಿದ್ದಾರೆ.

ಈ ಹಿಂದೆ ಇದೇ ಶಶಿಕಲಾಳ ರೌಡಿ ಗ್ಯಾಂಗುಗಳ, ದಬ್ಬಾಳಿಕೆಗಳ ಬಗ್ಗೆ ದೂರುಗಳು ಬಂದಾಗ ಜಯಾ ಆಕೆಯನ್ನು ಸಮರ್ಥಿಸಿಕೊಂಡಿದ್ದಳು, ಶಶಿಯ ಧನ ದಾಹದ ಬಗ್ಗೆ ಆರೋಪಗಳು ಕೇಳಿಬಂದಾಗ ಜಯಾ ಆಕೆಯನ್ನು ರಕ್ಷಿಸಿದ್ದಳು, ಶಶಿಯ ಸರ್ವಾಧಿಕಾರಿಣಿ ಧೋರಣೆಯ ವಿರುದ್ಧ ಎಐಎಡಿಎಂಕೆಯ ಹಿರಿಯರು ಪ್ರತಿಭಟಿಸಿದಾಗ ಅಂತಹ ಭಿನ್ನಮತೀಯರನ್ನೇ ತನ್ನ ಪಕ್ಷದಿಂದ ಜಯಾ ಒದ್ದೋಡಿಸಿದ್ದಳು.



ಚೋ. ರಾಮಸ್ವಾಮಿ

ಅಂತಹ ಜಯಾ ಈಗ ತನ್ನ ನಂಬಿಕಸ್ತ ಶಶಿಕಲಾಳನ್ನೇ ತನ್ನ ಮನೆ, ಪಕ್ಷ ಮತ್ತು ಜೀವನದಿಂದಲೇ ಕಿತ್ತೊಗೆದಿದ್ದಾಳೆ. ತನ್ನ ಪಕ್ಷದವರ್ಯಾರೂ ಉಚ್ಚಾಟಿತಗೊಂಡಿರುವವರೊಂದಿಗೆ ಯಾವ ಸಂಪರ್ಕವನ್ನೂ ಹೊಂದಿರಬಾರದೆಂದು ಫತ್ವಾ ಹೊರಡಿಸಿದ್ದಾಳೆ.

ಹಿಂದೊಮ್ಮೆ ಎಂಜಿಆರ್ ತರಹದ ಕಿಲಾಡಿ ನಾಯಕನನ್ನೇ ತನ್ನ ಕೈಬೆರಳ ಮೇಲೆ ಆಟವಾಡಿಸಿದ್ದ, ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನೇ ಅಲ್ಲಾಡಿಸಿದ್ದ, ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿಯನ್ನೇ ಯಾಮಾರಿಸಿದ್ದ ಜಯಲಲಿತಾ ಈ ದೇಶ ಕಂಡಿರುವ ಅಸಮಾನ್ಯ ರಾಜಕಾರಿಣಿಗಳಲ್ಲಿ ಒಬ್ಬಾಕೆ. ಆದರೆ ಈಗ ಬಯಲಾಗಿರುವುದೇನೆಂದರೆ ಅಂತಹ ಜಯಾ ಜೊತೆಗಿದ್ದೇ ಆಕೆಗೆ ಚಳ್ಳೆಹಣ್ಣು ತಿನ್ನಿಸಲು ಶಶಿಕಲಾ ಎಂಬ ಮಾಜಿ ವೀಡಿಯೋ ಪಾರ್ಲರ್ ಮಾಲೀಕಿ ದೊಡ್ಡದಾದ ವ್ಯೂಹತಂತ್ರವೊಂದನ್ನು ರೂಪಿಸಿದ್ದು. ಅದೂ ಎಂತಹ ವ್ಯೂಹತಂತ್ರ...



ನಟರಾಜನ್

ಶಶಿಕಲಾ ಎಷ್ಟು ಜಾಣತನದಿಂದ ತನ್ನ ಸ್ವಜಾತಿ ಪ್ರೇಮವನ್ನು, ಜಯಾಳೊಂದಿಗೆ ಇದ್ದ ನೇರ ಸಂಪರ್ಕವನ್ನು, ಉತ್ತರದಾಯಿತ್ವವಿಲ್ಲದ ರಾಜಕೀಯ ಪ್ರಭಾವವನ್ನು ಉಪಯೋಗಿಸಿಕೊಂಡು ತನ್ನದೇ ಆದ ಒಂದು ಸಾಮ್ರಾಜ್ಯವನ್ನು ಕಟ್ಟಿಕೊಂಡು ಅಧಿಕಾರಕ್ಕೆ ಹಪಹಪಿಸಲಾರಾಂಭಿಸಿದ್ದಳೆಂದರೆ ತನ್ನ ಗೆಳತಿ, ಹಿತೈಷಿ, ರಕ್ಷಕಿ, ಪೋಷಕಿಯಾದ ಜಯಾಳನ್ನೇ ಬಲಿ ಕೊಟ್ಟು ತನ್ನ ಗಂಡನನ್ನು ತಮಿಳುನಾಡಿನ ಮುಖ್ಯಮಂತ್ರಿಯನ್ನಾಗಿ ಪ್ರತಿಷ್ಠಾಪಿಸಲು ಸಂಚು ರೂಪಿಸಿದ್ದಳು. ಅಂತಹ ಸಂಚಿಗೆ ಕಲ್ಲೆಸೆದದ್ದು ತಮಿಳುನಾಡಿನ ಪ್ರಮುಖ ಪತ್ರಿಕೋದ್ಯಮಿಯಾದ ಚೋ. ರಾಮಸ್ವಾಮಿ. ಇದೆಲ್ಲ ಆದದ್ದು ಹೀಗೆ...

ಶಶಿಕಲಾ ತಂಜಾವೂರ್ ಜಿಲ್ಲೆಯ ಮನ್ನಾರಗುಡಿ ಎಂಬ ಹಳ್ಳಿಯವಳು. ಅದಕ್ಕಿಂತ ಮುಖ್ಯವಾಗಿ ಆಕೆ ತಮಿಳುನಾಡಿನ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುವ ಥೇವರ್ ಜಾತಿಗೆ ಸೇರಿದವಳು. ಜಯಲಲಿತಾ ಬ್ರಾಹ್ಮಣ ಅಯ್ಯಂಗಾರ್ ಜಾತಿಗೆ ಸೇರಿದವಳು. ಆದ್ದರಿಂದ ಜಯಾಗೆ ಜಾತಿ ಬೆಂಬಲ ಎಂಬುದಿಲ್ಲ. ಇದನ್ನೇ ತನ್ನ ಅಸ್ತ್ರವಾಗಿ ಬಳಸಿಕೊಂಡ ಶಶಿಕಲಾ ಕಳೆದ ಬಾರಿ ಜಯಾ ಅಧಿಕಾರದಲ್ಲಿದ್ದಾಗಲೂ ತನ್ನ ಸ್ವಜಾತಿ ಪ್ರೇಮ ಮೆರೆದಿದ್ದಳು. ಅದು ಉತ್ತುಂಗಕ್ಕೆ ಹೋಗಿದ್ದು ಕಳೆದ ಏಪ್ರಿಲ್ ತಿಂಗಳಲ್ಲಿ, ತಮಿಳುನಾಡಿನ ವಿಧಾನ ಸಭೆಗೆ ನಡೆದ ಚುನಾವಣೆ ಸಂದರ್ಭದಲ್ಲಿ, ಯಾರ್ಯಾರಿಗೆ ಎಐಎಡಿಎಂಕೆ ಪಕ್ಷದ ಟಿಕೆಟ್ ಕೊಡಬೇಕೆಂದು ನಿರ್ಧರಿಸುವಾಗ ಶಶಿಕಲಾ ತನ್ನ ಥೇವರ್ ಜಾತಿಯ ಜನರಿಗೆ ಮತ್ತು ತನ್ನ ಹಿಂಬಾಲಕರಿಕೆ ಟಿಕೆಟ್‌ಗಳು ಸಿಗುವಂತೆ ನೋಡಿಕೊಂಡಿದ್ದಳು. ಎಷ್ಟರ ಮಟ್ಟಿಗೆಂದರೆ ಆ ಚುನಾವಣೆಯಲ್ಲಿ ಎಐಎಡಿಎಂಕೆ ಪಕ್ಷವೆಂದರೆ ಥೇವರ್ ಜಾತಿಯವರ ಪಕ್ಷವೆಂಬಂತೆ ಬಿಂಬಿತಗೊಂಡಿತ್ತು. ಆದರೇನಂತೆ, ಕರುಣಾನಿಧಿಯ ಡಿಎಂಕೆ ಪಕ್ಷದ ದುರಾಡಳಿತ, 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಕರುಣಾನಿಧಿಯ ಮಗಳು ಕನ್ನಿಮೋಳಿ ಮತ್ತು ಆಕೆಯ ಮಿತ್ರ ಎ. ರಾಜಾ ಜೈಲುಪಾಲಾಗಿದ್ದು, ಇತ್ಯಾದಿಗಳೆಲ್ಲ ಜೊತೆಗೂಡಿ ಡಿಎಂಕೆ ನೆಲಕಚ್ಚಿತು ಮತ್ತು ಜಯಾಳ ಎಐಎಡಿಎಂಕೆ ಜಯ ಸಾಧಿಸಿತು. ಆದರೆ ಅಂತಹ ಜಯ ಸಾಧಿಸುವಲ್ಲಿ ಶಶಿಕಲಾ ಆಯ್ಕೆ ಮಾಡಿದ್ದ ಥೇವರ್ ಜಾತಿಯ ಶಾಸಕರೇ ಅಧಿಕ ಸಂಖ್ಯೆಯಲ್ಲಿದ್ದರು.

ಜಯಲಲಿತಾ ತಮಿಳುನಾಡಿದ ಮುಖ್ಯಮಂತ್ರಿಯಾಗಿ ಮೂರನೇ ಬಾರಿಗೆ ಅಧಿಕಾರ ಸ್ವೀಕರಿಸುವ ಮುನ್ನವೇ ಶಶಿಕಲಾ ಅನಧಿಕೃತ 'ನಂಬರ್ 2' ಮುಖ್ಯಮಂತ್ರಿಯಾಗಿ ತನ್ನ ಅಧಿಕಾರ ಚಲಾಯಿಸಲಾರಾಂಭಿಸಿದ್ದಳು. ಆಕೆಯೊಂದಿಗೆ ಕೈಜೋಡಿಸಿದ್ದು ತಮಿಳುನಾಡಿನಲ್ಲಿ 'ಮುನ್ನಾರಡಿ ಮಾಫಿಯಾ' ಎಂದೇ ಕುಖ್ಯಾತಿ ಪಡೆದಿರುವ ತಂಡ. ಆ ತಂಡದ ಸದಸ್ಯರು ಬೇರೆ ಯಾರೂ ಅಲ್ಲ, ಶಶಿಯ ಗಂಡ ನಟರಾಜನ್, ಆಕೆಯ ಅಳಿಯ ಸುಧಾಕರನ್ (ಇದೇ ಸುಧಾಕರನ್‌ನನ್ನು ಈ ಹಿಂದೆ ಜಯಲಲಿತಾ ತನ್ನ ಮಾನಸ ಪುತ್ರ ಎಂದು ಘೋಷಿಸಿ ಆನಂತರ ಆತನನ್ನು ದೂರ ಇಟ್ಟಿದ್ದರು), ಮತ್ತೊಬ್ಬ ಅಳಿಯ ದಿನಕರನ್ ಮತ್ತು ತರಹೇವಾರಿ ಸಹೋದರರು, ಅಳಿಯಂದಿರು, ಸಂಬಂಧಿಕರು, ಇತ್ಯಾದಿ. ಎಲ್ಲರೂ ಥೇವರ್ ಜಾತಿಗೆ ಸೇರಿದವರೇ ಆಗಿದ್ದರು.

ಈ ಮುನ್ನಾರಗುಡಿ ಮಾಫಿಯಾ-ಥೇವರ್ ಜಾತಿಯ ಗ್ಯಾಂಗಿನ ಆರ್ಭಟ ಎಂತಹದ್ದಾಗಿತ್ತೆಂದರೆ ಜಯಲಲಿತಾ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನ ಆಕೆಯ ಮನೆಯ ಮುಂದೆ ಅಭಿಮಾನಿಗಳು ನೆರೆದಿದ್ದರೆ ಬೆಸೆಂಟ್ ನಗರದಲ್ಲಿರುವ ಶಶಿಕಲಾಳ ಗಂಡ ನಟರಾಜನ್‌ನ ಮನೆಯ ಮುಂದೆ ಸಚಿವ ಸ್ಥಾನ ಆಶಿಸುತ್ತಿದ್ದ ಶಾಸಕರು, ಆಯಾಕಟ್ಟಿನ ಸ್ಥಾನ ಬಯಸಿದ್ದ ಅಧಿಕಾರಿಗಳು ದೈನೇಸಿಗಳಂತೆ ಸಾಲುಗಟ್ಟಿನಿಂತಿದ್ದರು. ಶಶಿ ಮತ್ತು ಆಕೆಯ ಗಂಡ ಹಣಬಲ ಮತ್ತು ಜಾತಿ ಬಲದ ಆಧಾರದ ಮೇಲೆ ಸಚಿವ ಸ್ಥಾನಗಳನ್ನು ಮತ್ತು ಪ್ರಮುಖ ಹುದ್ದೆಗಳನ್ನು ನಿರ್ಧರಿಸಿದ್ದರು. ಇದೆಲ್ಲದರಿಂದಾಗುವ ಅಪಾಯದ ಸೂಚನೆ ಜಯಾಗೆ ಸಿಗಲೇ ಇಲ್ಲ, ಯಾಕೆಂದರೆ ಅಂತಹ ಸೂಚನೆ ಜಯಾಗೆ ಸಿಗದಂತೆ ಶಶಿ ಮತ್ತು ಆಕೆಯ ಗ್ಯಾಂಗ್ ಜಯಾ ಸುತ್ತ ಒಂದು ಭದ್ರಕೋಟೆಯನ್ನೇ ರೂಪಿಸಿತ್ತು.

ರಾಜ್ಯದಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಮುಖ್ಯ ಮಂತ್ರಿಗೆ ಮಾಹಿತಿ ನೀಡುವ ಕಾರ್ಯದರ್ಶಿ, ಡೆಪ್ಯೂಟಿ ಕಾರ್ಯದರ್ಶಿ ಹುದ್ದೆಗಳಿಗೂ ತಮ್ಮ ಬೆಂಬಲಿಗರನ್ನೇ ಶಶಿ-ನಟರಾಜನ್ ತಂಡ ನೇಮಿಸಿತ್ತು, ಅದಕ್ಕಿಂತ ಮುಖ್ಯವಾಗಿ ಗುಪ್ತಚರ ಇಲಾಖೆಯ ಪ್ರಮುಖ ಹುದ್ದೆಗೂ ತನ್ನದೇ ಆದ ಅಭ್ಯರ್ಥಿಯನ್ನು ನೇಮಿಸಿತ್ತು. ಇವರೆಲ್ಲ ಜಯಲಲಿತಾಗೆ ನಿಷ್ಠರಾಗಿರುವುದಕ್ಕಿಂತಲೂ ಶಶಿ-ನಟರಾಜನ್ ದಂಪತಿಗಳಿಗೆ ಋಣಿಗಳಾಗಿದ್ದರು.

ಇದೆಲ್ಲದರ ಅರ್ಥ ಜಯಲಲಿತಾ ನಾಮಕಾವಸ್ಥೆ ಮುಖ್ಯಮಂತ್ರಿ ಆಗಿದ್ದರೆ ಶಶಿಕಲಾ ಅನಧಿಕೃತ ಮುಖ್ಯಮಂತ್ರಿಯಾಗಿ ಅಧಿಕಾರ ಚಲಾಯಿಸುತ್ತಿದ್ದಳು.

ಶಶಿಕಲಾಳ 'ಮನ್ನಾರಗುಡಿ ಮಾಫಿಯಾ' ವಸೂಲಿ ಕಾರ್ಯಕ್ಕೆ ಕೈಇಕ್ಕಿತು. ಉದ್ಯಮಿಗಳು, ಕಾಂಟ್ರ್ಯಾಕ್ಟುದಾರರು, ವ್ಯಾಪಾರಿಗಳು, ಎಲ್ಲರನ್ನು ಹಫ್ತಾಗೆ ಹಿಂಸಿಸಲು ಪ್ರಾರಂಭಿಸಿತು. ಮರಳು ದಂಧೆಯಿಂದಲೇ ಈ ಗ್ಯಾಂಗ್ ಕೋಟ್ಯಂತರ ರೂಪಾಯಿಗಳನ್ನು ದೋಚಿತು. ತಮಿಳುನಾಡಿನ ಯಾವುದೇ ಭಾಗದಲ್ಲಿ ಯಾವ ಸರ್ಕಾರಿ ಯೋಜನೆ ಪ್ರಾರಂಭವಾಗುವ ಮುನ್ನ ಕಾಂಟ್ರ್ಯಾಕ್ಟುದಾರ ಈ ಗ್ಯಾಂಗಿಗೆ ಇಡೀ ಯೋಜನೆಯ ಶೇಕಡ ಇಪ್ಪತ್ತರಷ್ಟು ಹಫ್ತಾ ಕೊಡಲೇ ಬೇಕಿತ್ತು. ಇಡೀ ರಾಜ್ಯದಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಯಿತೆಂದರೆ 'ಮನ್ನಾರಗುಡಿ ಮಾಫಿಯಾ' ಅಂದರೆ ಸಾಕು ಸಚಿವರು ಮತ್ತು ಹಿರಿಯ ಅಧಿಕಾರಿಗಳು ಥರಗುಡುತ್ತಿದ್ದರು. ಆ ಗ್ಯಾಂಗಿನ ಆದೇಶಗಳನ್ನು ವಿಧಿ ಇಲ್ಲದೆ ಪಾಲಿಸುತ್ತಿದ್ದರು.

ಶಶಿಯ ಗ್ಯಾಂಗಿನ ಅಟ್ಟಹಾಸದ ಬಗ್ಗೆ ಯಾವ ಮಾಹಿತಿಯೂ ಜಯಾಳ ಕಿವಿಗೆ ಬೀಳದಂತೆ ಈ ಗ್ಯಾಂಗ್ ಮೊದಲೇ ನೋಡಿಕೊಂಡಿತ್ತಲ್ಲ... ಅದರೊಂದಿಗೆ ಜಯಲಲಿತಾಗೆ ತನ್ನದೇ ಆದ ಬೇರೆ ಸಮಸ್ಯೆಗಳಿದ್ದವು. ಆಕೆ ಅಕ್ರಮ ಸಂಪತ್ತು ಹೊಂದಿದ್ದರ ಕುರಿತು ಬೆಂಗಳೂರಿನಲ್ಲಿ ಕೇಸ್ ನಡೆಯುತ್ತಿದೆಯಲ್ಲಾ, ಅದು ಜಯಾಳ ತಲೆ ತಿನ್ನುತ್ತಿದ್ದರಿಂದ ಆಕೆಯ ಗಮನವೆಲ್ಲ ಅದರ ಮೇಲಿತ್ತು.

ಶಶಿಯ ಗಮನ ಕೂಡ ಅದೇ ಕೇಸಿನ ಮೇಲಿತ್ತು, ಆದರೆ ಬೇರೆ ಕಾರಣಗಳಿಗೆ...

ಶಶಿಕಲಾಳ ಪ್ರಕಾರ ಆ ಕೇಸಿನಲ್ಲಿ ಜಯಾ ಜೈಲು ಪಾಲಾಗುವುದು ಗ್ಯಾರಂಟಿ. ಹೇಗಿದ್ದರೂ ಎಐಎಡಿಎಂಕೆ ಪಕ್ಷದಲ್ಲಿ ಜಯಾ ನಂತರ ಎರಡನೇ ಸಾಲಿನ ನಾಯಕ/ನಾಯಕಿ ಇಲ್ಲ, ಅದಕ್ಕಿಂತಲೂ ಮುಖ್ಯವಾಗಿ ತಾನೆ 'ನಂಬರ್ 2 ಸಿಎಮ್'. ಜೊತೆಗೆ ತಾನು ಮತ್ತು ಗಂಡ ನಟರಾಜನ್ ಆರಿಸಿ,




ಬಗಲಲ್ಲೇ ಇದ್ದು ದ್ರೋಹ ಬಗೆಯಲು ಸಂಚು ಹೂಡಿದ್ದ ಶಶಿಕಲಾ....



ಜೋಡಿ ಎಂದರೆ ಇದು...!







ಶಶಿಕಲಾಳ ಭೂದಾಹ

...ಹಿಂದೆ ಒಂದು ಪುಟ್ಟ ವೀಡಿಯೋ ಲೈಬ್ರರಿ ಅಂಗಡಿ ಇಟ್ಟುಕೊಂಡಿದ್ದ ... ಜಯಲಲಿತಾಳ ಪಕ್ಕ ನಿಂತುಕೊಂಡೇ ತಮಿಳುನಾಡಿನ ಅನಧಿಕೃತ ...ನುಂತ್ರಿಯಾಗಿದ್ದು, ಮನ್ನಾರಗುಡಿ ಮಾಫಿಯಾದ ಲೀಡರ್ ಆಗಿ ...ಸಿಗಳಿಗೆ ಕೈ ಹಾಕಿದ್ದು, 'ಚಿನ್ನಮ್ಮ' ಎಂದು ಕುಖ್ಯಾತಿ ಪಡೆದದ್ದು, ...ತರ ರೂಪಾಯಿ ಬೆಲೆ ಬಾಳುವ ಬಂಗಲೆಗಳನ್ನು, ಚಿನ್ನಾಭರಣಗಳನ್ನು ..., ಈಗ ತಲೆ ಮರೆಸಿಕೊಂಡಿರುವುದು...... ಎಲ್ಲವೂ ಯಾವ ತಮಿಳು ...ಂತ ಕಡಿಮೆಯದ್ದಲ್ಲ.

...ಎ 80ರ ದಶಕ. ಆಗ ಎಂಜಿಆರ್ ತಮಿಳುನಾಡಿನ ಮುಖ್ಯಮಂತ್ರಿ. ...ಎಂಜಿಆರ್ ನೇತೃತ್ವದ ಎಐಎಡಿಎಂಕೆ ಪಕ್ಷದ ಪ್ರಚಾರ ಕಾರ್ಯದರ್ಶಿ ...ಯಸಡೆ. ಆದರೆ ಆಗ ಜಯಾಳಿಗೆ ಅಷ್ಟೇನು ಕೆಲಸಗಳಿರಲಿಲ್ಲ.

...ಜಿಆರ್ ಅವರ ನೆಚ್ಚಿನ ಐಎಎಸ್ ಅಧಿಕಾರಿಗಳಲ್ಲಿ ವಿ. ಚಂದ್ರಲೇಖಾ ...ಟ್ಟ ಮಹಿಳೆ ಪ್ರಮುಖರು. ಅದೇ ಹೊತ್ತಿಗೆ ನಟರಾಜನ್ ಎಂಬಾತ ...ನಾಡಿನ ಸರ್ಕಾರದಲ್ಲಿ ಯಾವುದೋ ಒಂದು ಇಲಾಖೆಗೆ ಪಿಆರ್‌ಓ ... ಸಹಜವಾಗಿಯೇ ಚಂದ್ರಲೇಖಾ ಅವರಿಗೆ ನಟರಾಜನ್‌ನ ...ಯವಾಗಿತ್ತು, ಜೊತೆಗೆ ಆತನ ಹೆಂಡತಿ ಶಶಿಕಲಾಳ ಪರಿಚಯ ಕೂಡ. ...ಜಯಲಲಿತಾ ತನಗೆ ತುಂಬಾ ಬೋರ್ ಹೊಡೆಯುತ್ತಿದೆ ಎಂದಾಗ ...ಶಿಕಲಾಳನ್ನು ಪರಿಚಯಿಸಿದ್ದು ಅದೇ ಚಂದ್ರಲೇಖ.

...ದವೊದಲು ಬೋರ್ ಹೊಡೆದು ಮನೆಯಲ್ಲಿ ಕೆಲಸವಿಲ್ಲದೆ ...ತ್ತಿದ್ದ ಜಯಲಲಿತಾಗೆ ಸಿನಿಮಾಗಳ ವೀಡಿಯೋ ಕ್ಯಾಸೆಟ್ ಅನ್ನು ... ಸರಬರಾಜು ಮಾಡುತ್ತಿದ್ದಳು. ಅದು ಜಯಲಲಿತಾಳ ಬದುಕಿನಲ್ಲಿ ...ಕಾಲವಾಗಿತ್ತು, ಎಂಜಿಆರ್ ತೀರಿಕೊಂಡು ಅವರ ಉತ್ತರಾಧಿಕಾರಿ ...ಎಂಜಿಆರ್ ಪತ್ನಿ ಜಾನಕಿ ಮತ್ತು ತೆರೆಯ ಮೇಲಿನ ಮಾಜಿ ಪ್ರೇಯಸಿ ...ಲಿತಾ ನಡುವೆ ಪೈಪೋಟಿ ನಡೆದಿತ್ತು. ಮೊದಲೇ ಜಯಲಲಿತಾಳ ತಂದೆ ...ವಳಾಗಿದ್ದಾಗಲೇ ಓಡಿ ಹೋಗಿದ್ದ, ತಾಯಿ ಸಂಧ್ಯಾ ತೀರಿಕೊಂಡಿದ್ದರು, ...ತು ಎಂಬುವವರಿರಲಿಲ್ಲ, ಹಿತೈಷಿಗಳೂ ಇರಲಿಲ್ಲ. ಜಯಾ ...ಯಾಗಿದ್ದಳು. ಆಗಲೇ ಶಶಿಕಲಾ ನಿಧಾನವಾಗಿ ಜಯಾಳ ಸ್ನೇಹವನ್ನು, ...ಸನ್ನು ಗಳಿಸಲಾರಂಭಿಸಿದಳು.

...91ರಲ್ಲಿ ಜಯಲಲಿತಾಳ ಅದೃಷ್ಟ ಕುದುರಿತು. ಆಕೆಯ ಎಐಎಡಿಎಂಕೆ ...ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿತ್ತು, ಅದೇ ಹೊತ್ತಿಗೆ ಕಾಂಗ್ರೆಸ್‌ನ ...ರಾಜೀವ್ ಗಾಂಧಿ ಹತ್ಯೆಯಾಗಿದ್ದರಿಂದ ಅನುಕಂಪದ ಅಲೆ ಮೇಲೆ ...ಲ್ಲಿ ಕಾಂಗ್ರೆಸ್ ಜಯ ಸಾಧಿಸಿತಲ್ಲದೆ, ತಮಿಳುನಾಡಿನಲ್ಲಿ ಜಯಾಳ ...ಕ್ಕ ನೆರವಾಗಿತ್ತು.

...91ರಲ್ಲಿ ಜಯಲಲಿತಾ ತನ್ನ ಮುಂದಿದ್ದ ಎಲ್ಲ ಸವಾಲುಗಳನ್ನು ಮೀರಿ ...ಮಂತ್ರಿಯಾದಾಗ ಶಶಿಕಲಾ ತನ್ನ ಗಂಡ ನಟರಾಜನ ಮನೆ ತೊರೆದು ...ಸ್ ಗಾರ್ಡನ್ ಪ್ರದೇಶದಲ್ಲಿರುವ ಜಯಲಲಿತಾಳ ಮನೆ ಹೊಕ್ಕಳು. ...ಂದ ಆಕೆ ಜಯಾಳ ಪ್ರತಿಯೊಂದು ಅಗತ್ಯಗಳನ್ನು ...ಳ್ಳಲಾರಂಭಿಸಿದಳು, ರಾಜಕೀಯ ನಿರ್ಧಾರಗಳ ಮೇಲೆ ಕಣ್ಣಿಟ್ಟಳು, ...ದಲೂ ಲಾಭ ಮಾಡಿಕೊಳ್ಳಲಾರಂಭಿಸಿದಳು.

...ನಡೆದದ್ದೇ 3.5 ಕೋಟಿಯ ತನ್ಸಿ ಭೂ ಹಗರಣ. ಅದರಲ್ಲಿ ಜಯಾ ...ಯ ಪಾತ್ರವಿದೆ ಎಂದು ಈ ಹಿಂದೆ ಇವರಿಬ್ಬರನ್ನು ಪರಿಚಯಿಸಿದ್ದ ... ಅಧಿಕಾರಿಣಿ ಚಂದ್ರಲೇಖಾ ಅವರೇ ಆರೋಪಿಸಿದರು. ಆಗ ಈ ...ಎಂತಹ ಕೃತ್ಯಕ್ಕೂ ಹೇಸುವುದಿಲ್ಲ ಎಂದು ತಮಿಳರಿಗೆ ಗೊತ್ತಾಯಿತು. ...ರೆ ಚಂದ್ರಲೇಖಾ ಅವರು ಜಯಾ ಮತ್ತು ಶಶಿಯ ವಿರುದ್ಧ ಆರೋಪ ...ಕೆಲ ದಿನಗಳಲ್ಲೇ ಹಾಡಹಗಲೇ ಚಂದ್ರಲೇಖಾ ಅವರ ಮುಖಕ್ಕೆ ...ಗಳ ಗುಂಪೊಂದು ಆಸಿಡ್ ಎರಚಿತ್ತು!

...ದ ನಂತರ ಇತರೆ ಹಲವಾರು ಹಗರಣಗಳು ಬಯಲುಗೊಂಡು ...ತಾ 1996ರಲ್ಲಿ ಅಧಿಕಾರ ಕಳೆದುಕೊಂಡರು. ಅದಕ್ಕೆ ಮುಖ್ಯ ...ಆಗಿದದ್ದು ನಿಸ್ಸಂದೇಹವಾಗಿ ಶಶಿಕಲಾಳ ದೌರ್ಜನ್ಯ ಮತ್ತು ದಬ್ಬಾಳಿಕೆಗಳು. ಇದು ಗೊತ್ತಿದ್ದೂ ಆಕೆಯ ವಿರುದ್ಧ ಜಯಲಲಿತಾ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಡಿಎಂಕೆಯ ಕರುಣಾನಿಧಿ ಮತ್ತೊಮ್ಮೆ ಮುಖ್ಯಮಂತ್ರಿಯಾದರು.

2002ರಲ್ಲಿ ಮತ್ತೆ ಚುನಾವಣೆ ಎದುರಾದಾಗ ತಮಿಳುನಾಡಿನ ಜನರು ಕರುಣಾನಿಧಿಯ ಆಡಳಿತದಿಂದ ಬೇಸತ್ತಿದ್ದರು. ಅಷ್ಟು ಹೊತ್ತಿಗೆ ಜಯಾ ಪಾಠ ಕಲಿತಿರುತ್ತಾಳೆಂದು ಭಾವಿಸಿದ ಜನ ಆಕೆಯನ್ನು ಮತ್ತೊಮ್ಮೆ ಗೆಲ್ಲಿಸಿದರು.

ಜಯಾ ಎರಡನೇ ಬಾರಿಗೆ ತಮಿಳುನಾಡಿನ ಮುಖ್ಯಮಂತ್ರಿ ಆದಾಗ ಶಶಿಕಲಾ ಕೂಡ ಎರಡನೇ ಬಾರಿಗೆ ತನ್ನ 'ನಂ 2' ಮುಖ್ಯಮಂತ್ರಿ ಹುದ್ದೆಯನ್ನು ಸವಿಯಲಾರಂಭಿಸಿದಳು. ಈ ಹಿಂದೆ ಆಕೆ ಒಡವೆ ಅಂಗಡಿಗಳಿಗೆ ನುಗ್ಗಿ ತನಗೆ ಇಷ್ಟವಾದದ್ದನ್ನೆಲ್ಲ ಖರೀದಿಸುತ್ತಿದ್ದಳು. ಆದರೆ ಎರಡನೇ ಸುತ್ತಿನ ಹೊತ್ತಿಗೆ ಶಶಿಯ ಚಿನ್ನ ದಾಹ ಸ್ವಲ್ಪ ಕಡಿಮೆಯಾಗಿ ಅದರ ಬದಲಿಗೆ ಬಂಗಲೆ ದಾಹ ಹೆಚ್ಚಾಗಿತ್ತು. ಆಗ ಆಕೆ ತನಗೆ ಚೆನ್ನಾಗಿ ಕಂಡ ಮನೆಗಳನ್ನು, ಬಂಗಲೆಗಳನ್ನು ಖರೀದಿಸಲು ಮುಂದಾಗುತ್ತಿದ್ದಳು. ಅಕಸ್ಮಾತ್ ಮನೆಯ ಓನರ್‌ಗೆ ತನ್ನ ಮನೆಯನ್ನು ಮಾರುವ ಇಚ್ಛೆ ಇಲ್ಲದಿದ್ದರೆ ಶಶಿಕಲಾಳ ಗೂಂಡಾ ಪಡೆ ಭೇಟಿ ಕೊಟ್ಟು ಆತ ತನ್ನ ಮನೆ ಮಾರುವಂತೆ ಆತನ ಮನಸ್ಸನ್ನು ಬದಲಾಯಿಸುತ್ತಿತ್ತು.

ಹೀಗೆ ಶಶಿ ಮನೆ ಮಾಲೀಕರನ್ನು ಬೆದರಿಸಿ ಕೊಂಡುಕೊಂಡ ಬಂಗಲೆಗಳಲ್ಲಿ ಓನರ್‌ಗಳು ಜನಸಾಮಾನ್ಯರು ಮಾತ್ರವಲ್ಲ. ಖ್ಯಾತ ಸಿನಿಮಾ ನಿರ್ದೇಶಕ ಭಾರತಿ ರಾಜನಿಗೂ ಪುಡಿಕಾಸು ಕೊಟ್ಟು ಆತನ ಬಂಗಲೆಯನ್ನು ತನ್ನದಾಗಿಸಿಕೊಂಡಳು. ಅಮೃತಾಂಜನ್ ತಯಾರಿಸುವ ಕಂಪನಿಯ ಮಾಲೀಕರಾದ ಪಂತುಲು ವಂಶವನ್ನೇ ಬೆದರಿಸಿ ಅವರ ಮನೆಯನ್ನೂ ಪಡೆದಳು. ಖ್ಯಾತ ಸಂಗೀತ ನಿರ್ದೇಶಕ ಇಳಯರಾಜ ಅವರ ಸಹೋದರ ಗಂಗೈ ಅಮರನ್ ಎಂಬುವವರ ಮನೆಯನ್ನೂ ಅಪೋಶನ ಮಾಡಿದಳು. ಸಿಂಗಪೂರಿನಲ್ಲಿ ಉದ್ಯಮಿಯಾಗಿರುವ ತಮಿಳುನಾಡಿನ ಮೂಲದವರಾದ ರಂಗರಾಜ್ ಎಂಬುವವರಿಗೆ ಸೇರಿದ್ದ ನೀಲಾಂಕರೈ ಬಂಗಲೆಯ ಮಾರುಕಟ್ಟೆ ಬೆಲೆ ಹಲವು ಕೋಟಿಗಳಾಗಿದ್ದರೂ ಅದನ್ನು ಕೇವಲ ಐದು ಲಕ್ಷ ರೂಪಾಯಿಗಳಿಗೆ ಪಡೆದಳು.

ಹೀಗೆ ಆಕೆ ಪಡೆದ ಬಂಗಲೆಗಳಲ್ಲಿ ಸಿರುಡವೂರ್ ಬಂಗಲೆ ನೋಡುವವರ ಕಣ್ಣುಕುಕ್ಕುವಂತಿದೆ. ಚೆನ್ನೈನಿಂದ ಕೇವಲ 50 ಕಿಲೋಮಿಟರ್ ದೂರದಲ್ಲಿರುವ ಈ ಬಂಗಲೆಯನ್ನು ಕಟ್ಟಿರುವುದು 200 ಎಕರೆ ಅಷ್ಟು ವಿಸ್ತಾರವಾದ ಪ್ರದೇಶದಲ್ಲಿ. ಈ ಮನೆಯನ್ನು ತಲುಪಬೇಕಾದರೆ ಗೇಟಿನಿಂದ ಅರ್ಧ ಕಿಲೋಮೀಟರ್‌ನಷ್ಟು ಉದ್ದನೆಯ ರಸ್ತೆಯನ್ನು ಕ್ರಮಿಸಬೇಕು. ಆ ರಸ್ತೆಯ ಅಕ್ಕಪಕ್ಕ ಸುಂದರವಾದ ದೀಪಾಲಂಕಾರಗಳು ಇವೆಯಲ್ಲದೆ ಜುಳುಜುಳು ಎಂದು ಹರಿಯುವ ನೀರಿಗೆಂದೇ ನಾಲೆಗಳಿವೆ. ಈ ನಾಲೆಗಳಿಂದ ಮನೆಯೊಳಗಿರುವ ಆರು ಮೀನಿನ ಹೊಂಡಗಳಿಗೆ ನೀರು ಹರಿಯುತ್ತದೆ. ಈ ಬೃಹತ್ ಬಂಗಲೆಗೆ ಕೇವಲ ಒಂದು ಮುಖ್ಯದ್ವಾರವಿಲ್ಲ, ಬದಲಾಗಿ ನಾಲ್ಕು ದಿಕ್ಕಿಗೂ ಒಂದೊಂದು ಮುಖ್ಯದ್ವಾರವಿದೆ. ಪ್ರತಿ ದ್ವಾರಕ್ಕೂ ಪೋರ್ಟಿಕೋಗಳಿವೆ. ಮನೆಯೊಳಗೆ ಬರೋಬ್ಬರಿ 45 ರೂಮುಗಳು, ನಾಲ್ಕು ಅಡುಗೆ ಮನೆಗಳಿವೆ. ಒಂದನೇ ಮಹಡಿಗೆ ಹೋಗಲು ಒಂದು ಮೆಟ್ಟಿಲ ಸಾಲು ಇಲ್ಲ, ಬದಲಾಗಿ ಎರಡಿವೆ. ಮೊದಲನೇ ಮಹಡಿಯಲ್ಲಿ ಎರಡು ರೂಮುಗಳಿದ್ದು, ಪ್ರತೀ ರೂಮಿನ ಅಳತೆ 1,500 ಚದುರಡಿ! ಇದೇ ಬಂಗಲೆಯ ಆವರಣದಲ್ಲಿ ಒಂದು ಒಲಿಂಪಿಕ್ ಸೈಜಿನ ಸ್ವಿಮ್ಮಿಂಗ್ ಪೂಲು ಮತ್ತು ಒಂದು ಹೆಲಿಪ್ಯಾಡ್ ಕೂಡ ಇದೆ!!

ಶಶಿಕಲಾಳ ಲೂಟಿ ಮತ್ತು ಅವ್ಯವಹಾರ ಯಾವ ಮಟ್ಟಕ್ಕೆ ಹೋಗಿತ್ತೆಂದರೆ ಆಕೆಯ ಅಳಿಯ ಸುಧಾಕರನ್‌ನ ಮದುವೆ, ನಟ ಶಿವಾಜಿ ಗಣೇಶನ್ ಅವರ ಮೊಮ್ಮಗಳೊಂದಿಗೆ ಚೆನ್ನೈನಲ್ಲಿ ಅದ್ಧೂರಿಯಾಗಿ ನಡೆದಾಗ ಶಶಿಕಲಾ ಮುಡಿಯಿಂದ ಅಡಿಯವರೆಗೆ ಚಿನ್ನಾಭರಣವನ್ನು ತೊಟ್ಟು ತನ್ನ ಗತ್ತು ಮತ್ತು ಗೈರತನ್ನು ಲೋಕಕ್ಕೇ ಪ್ರದರ್ಶಿಸಿದ್ದಳು.

2006ರಲ್ಲಿ ಚುನಾವಣೆಗಳು ಎದುರಾದಾಗ ಸಾವಿರಾರು ಜನ ಜಯಾಳ ಬಹಿರಂಗ ಸಭೆಗಳಿಗೆ ಬರುತ್ತಿದ್ದರು. ಅದನ್ನು ನೋಡಿ ತಾನು ಗೆಲ್ಲುತ್ತೇನೆಂಬ ವಿಶ್ವಾಸ ಜಯಾಳಿಗಿತ್ತು. ಆದರೆ ಅಷ್ಟೊಂದು ಜನ ಬರುತ್ತಿದ್ದದ್ದು ಜಯಾಳ ಭಾಷಣವನ್ನು ಕೇಳುವುದಕ್ಕಲ್ಲ, ಬದಲಾಗಿ ಆಕೆಯೊಂದಿಗೆ ಬರುತ್ತಿದ್ದ ಶಶಿಕಲಾ ಎಂತಹ ಒಡವೆಗಳನ್ನು ಹಾಕಿಕೊಂಡಿರುತ್ತಾಳೆಂದು ನೋಡಲು. ಜನರ ಕುತೂಹಲವನ್ನು ತಣಿಸಲೆಂದು ಶಶಿಕಲಾ ಕೂಡ ತರೆಹೇವಾರಿ ಚಿನ್ನಾಭರಣಗಳನ್ನು ತೊಟ್ಟು ಹೋಗುತ್ತಿದ್ದಳು. ಇದರಿಂದ ಜನರಿಗೆ ಎಷ್ಟು ಹೇಸಿಗೆ ಹುಟ್ಟಿತೆಂದರೆ ಜಯಲಲಿತಾಳನ್ನು ಮಾತ್ರವಲ್ಲದೆ, ಆಕೆಯ ಪಕ್ಷದ ಹಲವಾರು ಹಿರಿಯರನ್ನೂ ಸೋಲಿಸಿದರು.







ಜಯಾಳ ಕಷ್ಟಗಳು ಚುನಾವಣೆಯಲ್ಲಿನ ಸೋಲಿಗೆ ಸೀಮಿತವಾಗಿರಲಿಲ್ಲ. 2002ರಲ್ಲಿ ಆಕೆ ಗೆದ್ದಾಗ ಡಿಎಂಕೆ ನಾಯಕ ಕರುಣಾನಿಧಿಯನ್ನು ಆತನ ಮನೆಯಿಂದಲೇ ಪೊಲೀಸರು ಎತ್ತುಹಾಕಿಕೊಂಡು ಹೋಗುವಂತೆ ಮಾಡಿದ್ದಳು. ಆ ನೆನಪು ಕರುಣಾನಿಧಿಯನ್ನು ಕೊರೆಯುತ್ತಿತ್ತು. ಆ ನಂತರ ಜಯ ಸೋತು ಮತ್ತೆ ಕರಣಾನಿಧಿ ಗೆದ್ದಿದ್ದರು. ಜಯಾ ಮೇಲೆ ಸೇಡಿಗೆ ಬಿದ್ದ ಕರುಣಾನಿಧಿಯ ಸರ್ಕಾರ ಆಕೆಯನ್ನು ಮತ್ತು ಆಕೆಯ ಗೆಳತಿ ಶಶಿಕಲಾಳನ್ನು ಭ್ರಷ್ಟಾಚಾರದ ಆರೋಪದ ಮೇಲೆ ಜೈಲಿಗೆ ದೂಡಿತು. ಆಗ ಪ್ರಾಯಶಃ ಜಯಲಲಿತಾಗೆ ಮನದಟ್ಟಾಗಿರಬೇಕು; ತಾನು ಸೋತಿದ್ದಕ್ಕೆ ಜೈಲು ಸೇರಿದ್ದಕ್ಕೆ ಶಶಿಕಲಾಳೇ ಕಾರಣ ಎಂದು. ಜಯಾ ಆಗ "ಇನ್ನು ಮುಂದೆ ನನಗೂ ಶಶಿಕಲಾಗೂ ಯಾವ ನಂಟೂ ಇಲ್ಲ" ಎಂದು ಘೋಷಿಸಿದ್ದಳು.

ಆದರೆ ಸುಮಾರು 30 ವರ್ಷಗಳಿಂದ ಜಯಾ ಜೊತೆ ಇರುವ ಶಶಿಕಲಾಳಿಗೆ ತನ್ನ ಗೆಳತಿಯ ದೌರ್ಬಲ್ಯಗಳು ಚೆನ್ನಾಗಿ ಗೊತ್ತಿದ್ದವು. ಅಂತಹ ಅದ್ಯಾವ ದೌರ್ಬಲ್ಯವನ್ನು ಉಪಯೊಗಿಸಿ ಜಯಾಳ ಮನವೊಲಿಸಿದಳೋ ಗೊತ್ತಿಲ್ಲ, ಆದರೆ ತನ್ನೊಂದಿಗಿನ ನಂಟನ್ನು ಕಡಿದುಕೊಂಡಿದ್ದ ಜಯಾಳ ಪಕ್ಕ ಕೆಲ ತಿಂಗಳಲ್ಲೇ ಮತ್ತೆ ಪ್ರತ್ಯಕ್ಷಳಾದಳು. ಮಾತ್ರವಲ್ಲ, ಜಯಾಳನ್ನು ಮೋಡಿ ಮಾಡಿ ತನಗೆ ಬೇಕಾದವರಿಗೆ, ಸ್ವಜಾತಿಯವರಿಗೆ ಎಐಎಡಿಎಂಕೆ ಟಿಕೆಟ್ ಸಿಗುವಂತೆ ನೋಡಿಕೊಂಡು ಕೊನೆಗೆ ಜಯಲಲಿತಾಳ ಬೆನ್ನಿಗೆ ಇರಿದು ತನ್ನ ನಾಲಾಯಕ್ ಗಂಡ ನಟರಾಜನನ್ನೇ ಮುಖ್ಯಮಂತ್ರಿಯಾನ್ನಾಗಿಸುವ ಷಡ್ಯಂತ್ರ ರೂಪಿಸಿದಳು...

ಅದು ಜಯಲಲಿತಾಗೆ ಗೊತ್ತಾಗಿ ಈಗ ಶಶಿಕಲಾಳಿಗೆ ಅತ್ತ ಅಧಿಕಾರವೂ ಇಲ್ಲ, ಇತ್ತ ತನ್ನ ಗೆಳತಿಯ ರಕ್ಷಣೆಯೂ ಇಲ್ಲ ಎಂಬಂತಾಗಿದೆ.

ಅತಿ ಆಸೆಯೇ ವಿನಾಶಕ್ಕೆ ಮೂಲ ಎಂಬ ಮಾತಿನ ಅರ್ಥ ಈಗ ಶಶಿಕಲಾಗೆ ಆಗಿರಬೇಕು... ❖



...ಕೊಟ್ಟು ಗೆಲ್ಲಿಸಿರುವ ತಮ್ಮ ಸ್ವಜಾತಿ ಥೇವರ್ ...ಸಚ್ಚಿನ ಸಂಖ್ಯೆಯಲ್ಲಿದ್ದು ಅವರೆಲ್ಲ ತಮ್ಮ ಬೆನ್ನಿಗೆ ...ದ್ದರಿಂದ ಜಯಾ ಜೈಲು ಸೇರಿದ ನಂತರ ತನ್ನ ...ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಬಹುದು ...ಲೆಕ್ಕಾ ಹಾಕಿದ್ದಳು.

...ಳ ತನ್ನ ಭೂಕಬಳಿಕೆ ಹಗರಣದಲ್ಲಿ ಶಶಿಕಲಾ ...ಆರೋಪಿಯಾಗಿದ್ದು ಆಕೆ ಆ ಕೇಸಿಗೆ ಸಂಬಂಧಿಸಿದಂತೆ ...ನ ನ್ಯಾಯಾಲಯಕ್ಕೆ ಬರುತ್ತಿರುತ್ತಾಳೆ. ಹಾಗೆ ...ರಗಳ ಹಿಂದೆ ಶಶಿ ಬೆಂಗಳೂರಿಗೆ ಬಂದಿದ್ದಾಗ ...ನ್ನಿಗಿಸ ಹಲವರೊಂದಿಗೆ ಗುಪ್ತ ಸಭೆಯನ್ನೂ ... ಆ ಸಭೆಯಲ್ಲಿ ಶಶಿಯ ಅಳಿಯಂದಿರಾದ ... ಮತ್ತು ಥೇವರ್ ಸಮುದಾಯದ ...ಭಾಗವಹಿಸಿದ್ದರು. ಅಷ್ಟೇ ಅಲ್ಲ, ಆ ಸಭೆಯಲ್ಲಿ ..., ಮುಂದೆಯೊಂದ ಯಾವಾಗ, ಹೇಗೆ ..., ತಮ್ಮ ಗ್ರಾನಿಗಿಸ ವಿರುದ್ಧ ದಂಗೆ ಏಳದಂತೆ ಹೇಗೆ ಎಚ್ಚರವಹಿಸುವುದು, ಭಾವೀ ಮುಖ್ಯಮಂತ್ರಿ ನಟರಾಜನ್‌ನ ಸಂಪುಟದಲ್ಲಿ ಯಾರ್ಯಾರಿಗೆ ಸ್ಥಾನ ಕೊಡುವುದು, ಇದೆಲ್ಲದಕ್ಕೆ ನೆರವಾಗುವ ಯಾವ ಯಾವ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಯಾವ ಜಾಗದಲ್ಲಿ ನೇಮಿಸುವುದು ಎಂದೆಲ್ಲ ಚರ್ಚೆ ನಡೆಯಿತು.



ಆದರೆ ಬೆಂಗಳೂರಿನಿಂದ ಶಶಿಕಲಾ ವಾಪಸ್ ಹೋಗುವ ಹೊತ್ತಿಗೆ ಚೆನ್ನೈನಲ್ಲೊಂದು ಮುಖ್ಯ ಘಟನೆ ನಡೆದಿತ್ತು. 'ಮನ್ನಾರಗುಡಿ ಮಾಫಿಯಾ'ದ ಅಟ್ಟಹಾಸದಿಂದ ಬೇಸತ್ತಿದ್ದ ಅಧಿಕಾರಿಗಳು, ಉದ್ಯಮಿಗಳು, ಜಯಲಲಿತಾಳ ಹಿತೈಷಿಗಳು ಹೇಗಾದರೂ ಮಾಡಿ ಇದೆಲ್ಲದರ ಬಗ್ಗೆ ಜಯಾಳನ್ನು ಎಚ್ಚರಿಸಬೇಕೆಂದು ನಿರ್ಧರಿಸಿದ್ದರು. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

ಆಗ ಎಲ್ಲರಿಗೂ ತೋಚಿದ್ದು ಚೋ. ರಾಮಸ್ವಾಮಿ ಎಂಬ ಹಿರಿಯ ಪತ್ರಿಕೋದ್ಯಮಿ. ಈ ಹಿಂದೆ ಚೋ ಅವರು ಜಯಲಲಿತಾಗೆ ಆಪ್ತರಾಗಿದ್ದರಲ್ಲದೆ, ಅವರ ಸಂಪಾದಕತ್ವದ ಪತ್ರಿಕೆಗಾಗಿ ಜಯಾ ತನ್ನ ಆತ್ಮಚರಿತ್ರೆಯನ್ನು ಬರೆದಿದ್ದಳು. ಇತ್ತೀಚೆಗೆ ಚೋ ಮತ್ತು ಜಯಾ ನಡುವಿನ ಸಂಬಂಧ ಹಳಸಿದ್ದರೂ ಆಕೆಗೆ ಎಚ್ಚರ ನೀಡುವುದರಲ್ಲಿ ಚೋಗೆ ಯಾವುದೇ ಸ್ವಂತ ಲಾಭವಿಲ್ಲ ಎಂಬುದಂತೂ ಜಯಾಗೆ ಗೊತ್ತಾಗುತ್ತದೆ ಎಂದು ನಿರ್ಧರಿಸಿದರು. ಚೋ ಕೂಡ ಇದಕ್ಕೆ ಒಪ್ಪಿ ಎರಡು ವಾರಗಳ ಹಿಂದೆ ಜಯಲಲಿತಾರನ್ನು ಭೇಟಿಯಾದರು.

ಅವತ್ತು ಚೋ ಅವರು ಜಯಾಗೆ ಶಶಿಕಲಾಳ 'ಮನ್ನಾರಗುಡಿ ಮಾಫಿಯಾ'ದ ಅವ್ಯವಹಾರಗಳ ಬಗ್ಗೆ, ದಬ್ಬಾಳಿಕೆ ಬಗ್ಗೆ, ಹಫ್ತಾ ವಸೂಲಿ ಬಗ್ಗೆ ವಿವರವಾಗಿ ಹೇಳಿದಾಗ ಜಯಾಳಿಗೆ ಶಾಕ್ ಆಯಿತು. ಅದಕ್ಕಿಂತ ಮುಖ್ಯವಾಗಿ, ತನ್ನ ಆಪ್ತೆ ಶಶಿಕಲಾ ತನ್ನನ್ನೇ ಮುಖ್ಯಮಂತ್ರಿ ಸ್ಥಾನದಿಂದ ಕಿತ್ತೆಸೆಯಲೂ ಸಂಚು ರೂಪಿಸಿದ್ದಾಳೆಂದು ಚೋ ಹೇಳಿದಾಗ ಜಯಾಗೆ ತಾನೆಂತಹ ವಿಷ ಸರ್ಪವನ್ನು ಸಾಕಿದ್ದೇನೆ ಎಂಬುದರ ಅರಿವಾಯಿತು ಯಾವುದಕ್ಕೂ ಇರಲಿ ಎಂದು ಹಲವು ಪ್ರಾಮಾಣಿಕ ಐಎಎಸ್ ಮತ್ತು ಐಪಿಎಸ್ ಅಧಿಕಾರಗಳನ್ನು ವಿಚಾರಿಸಿದಾಗ ಅವರೂ ಕೂಡ ಶಶಿಕಲಾಳ ಷಡ್ಯಂತ್ರದ ಯೋಜನೆಯ ಬಗ್ಗೆ ಹೇಳಿದರು.

ಇದನ್ನೆಲ್ಲ ಕೇಳಿ ಕೆಂಡಾಮಂಡಲವಾದ ಜಯಲಲಿತಾ ತನ್ನ ಆಪ್ತೆ ಶಶಿಕಲಾಳನ್ನು ತನ್ನ ಮನೆಯಿಂದ, ಮನಸ್ಸಿನಿಂದ, ಪಕ್ಷದಿಂದ ಒದ್ದೋಡಿಸಿದ್ದಾರೆ.

ಈ ಸುದ್ದಿಯನ್ನು ಕೇಳಿ ಎಐಎಡಿಎಂಕೆಯ ಸದಸ್ಯರು ಮಾತ್ರವಲ್ಲ, ತಮಿಳುನಾಡಿದ ಅಧಿಕಾರಿಗಳು, ಉದ್ಯಮಿಗಳು, ಸಾಮಾನ್ಯ ಜನರು ಕೂಡ 'ತೊಲಗಿತು ಪೀಡೆ' ಎಂದು ಸಂಭ್ರಮಿಸುತ್ತಿದ್ದಾರೆ.

ಇಲ್ಲಿಯ ತನಕ ಅಧಿಕಾರಕ್ಕಾಗಿ ಬ್ರಿಟಿಷರೊಂದಿಗೆ ಶಾಮೀಲಾಗಿ ಬೆಂಗಾಲದ ನವಾಬನಿಗೆ ಮೋಸ ಮಾಡಿದ್ದ ಮೀರ್ ಜಾಫರ್ ಮಿತ್ರ ದ್ರೋಹಕ್ಕೆ ಮತ್ತೊಂದು ಹೆಸರಾಗಿದ್ದ. ಈಗ ಮಿತ್ರ ದ್ರೋಹಕ್ಕೆ ಮೀರ್ ಜಾಫರ್‌ನ ಹೆಸರಿನ ಬದಲಾಗಿ ಶಶಿಕಲಾ ಎಂದರೆ ಸೂಕ್ತವಾಗಿರುತ್ತದಲ್ಲವೇ? ❖





ಉತ್ತರ ಕನ್ನಡದ ಆರು ಅಸೆಂಬ್ಲಿ ಕ್ಷೇತ್ರಗಳಲ್ಲಿ ಮೂರು ಘಟ್ಟದ ಕೆಳಗೆ (ಕರಾವಳಿ) ಇದ್ದರೆ, ಇನ್ನುಳಿದ ಮೂರು ಇರುವುದು ಘಟ್ಟದ ಮೇಲೆ (ಮಲೆನಾಡು-ಅರೆಮಲೆ ನಾಡು). ಜಿಲ್ಲೆಯ ರಾಜಕೀಯ ಮೇಲಾಟದಲ್ಲಿ ಕಾಂಗ್ರೆಸ್-ಬಿಜೆಪಿ ಪರಂಪರಾಗತ ಎದುರಾಳಿಗಳು. ಎಲ್ಲಾದರೂ ಜೆಡಿಎಸ್ ಇದ್ದರೆ, ಅದು ಅದರ ಸ್ಥಳೀಯ ಮಾಂಡಲೀಕರ ವೈಯಕ್ತಿಕ ಗಂಡಾಗುಂಡಿಯಿಂದಷ್ಟೇ. ಜಿಲ್ಲೆಯ ರಾಜಧಾನಿ ಕಾರವಾರ ವಿಧಾನಸಭಾ ಕ್ಷೇತ್ರವನ್ನೀಗ ಮಾನ-ಮಾರ್ಯದೆ-ಮನುಷ್ಯತ್ವ ಮೂರೂ ಬಿಟ್ಟು ಅಧಿಕಾರದ ಬೆನ್ನುಹತ್ತಿ ದೊಂಬರಾಟ ಮಾಡುತ್ತಿರುವ ದಗಲ್ಬಾಜಿ ಆನಂದ್ ಅಸ್ನೋಟಿಕರ್ ಆಳುತ್ತಿದ್ದಾನೆ.

ಉತ್ತರ ಕನ್ನಡ

ಟಿಕೆಟ್‌ಗಾಗಿ ತರಲೆ ತಂತ್ರ ಶುರು!








• ನಹುಷ


ಅಸೆಂಬ್ಲಿ ಎಲೆಕ್ಷನ್ ಎಂಬುದು ಅದ್ಯಾವಾಗಾದರೂ ಬಂದುಬಿಡಬಹುದೆಂಬ ಚಡಪಡಿಕೆ ಉತ್ತರ ಕನ್ನಡದ ಎಮ್ಮೆಲ್ಲೆಗಿರಿ ಹಪಾಹಪಿಯ ಗೊಡ್ಡು ಪುಢಾರಿಗಳಿಗೆ ಹಗಲಿರುಳು ಬಾಧಿಸಲಾರಂಭಿಸಿದೆ. ಆಳುವ ಬಿಜೆಪಿಯೊಳಗೆ ದಿನ-ದಿನವೂ ಜರುಗುತ್ತಿರುವ ಬುರ್ನಾಸ್ ಬಡಿದಾಟ, ಕೆಡಹುವ ಹಠದ ಯಡ್ಡಿಯ ಅಡ್ಡ ಅಧಿಕಾರದ ತಲುಬಿನ ಆರ್ತನಾದ ನಡುಗಾಲ ಚುನಾವಣೆಯ ಡೇಂಜರ್ ಸಂಕೇತದಂತೆ ಜಿಲ್ಲೆಯ ವಿಧಾನ ಸೌಧದ ರೇಸಿಗೆ ರೆಡಿಯಾಗಿರುವ ರಾಜಕಾರಣಿಗಳಿಗೆ ಗೋಚರಿಸಲಾರಂಭಿಸಿದೆ. ಹೀಗಾಗಿ ಅಷ್ಟೂ ಪಕ್ಷದಲ್ಲಿ ಟಿಕೆಟ್ ತಂತ್ರ-ತರಲೆ ತಂತಾನೆ ಶುರುವಿಟ್ಟುಕೊಂಡುಬಿಟ್ಟಿದೆ. ಈ ಟಿಕೆಟ್ ಟ್ಯಾಕ್ಟೀಸ್ ಜಿಲ್ಲೆಯ ರಾಜಕೀಯ ಪಡಸಾಲೆಯಲ್ಲಿ ಚಿತ್ರ-ವಿಚಿತ್ರ ರಂಗು-ಗುಂಗೇರಿಸಿಬಿಟ್ಟಿದೆ.



ದಿನಕರ ಶೆಟ್ಟಿ



ಉತ್ತರ ಕನ್ನಡದ ಆರು ಅಸೆಂಬ್ಲಿ ಕ್ಷೇತ್ರಗಳಲ್ಲಿ ಮೂರು ಘಟ್ಟದ ಕೆಳಗೆ (ಕರಾವಳಿ) ಇದ್ದರೆ, ಇನ್ನುಳಿದ ಮೂರು ಇರುವುದು ಘಟ್ಟದ ಮೇಲೆ (ಮಲೆನಾಡು-ಅರೆಮಲೆ ನಾಡು). ಜಿಲ್ಲೆಯ ರಾಜಕೀಯ ಮೇಲಾಟದಲ್ಲಿ ಕಾಂಗ್ರೆಸ್-ಬಿಜೆಪಿ ಪರಂಪರಾಗತ ಎದುರಾಳಿಗಳು. ಎಲ್ಲಾದರೂ ಜೆಡಿಎಸ್ ಇದ್ದರೆ, ಅದು ಅದರ ಸ್ಥಳೀಯ ಮಾಂಡಲೀಕರ ವೈಯಕ್ತಿಕ ಗಂಡಾಗುಂಡಿಯಿಂದಷ್ಟೇ. ಜಿಲ್ಲೆಯ ರಾಜಧಾನಿ ಕಾರವಾರ ವಿಧಾನಸಭಾ ಕ್ಷೇತ್ರವನ್ನೀಗ ಮಾನ-ಮಾರ್ಯದೆ-ಮನುಷ್ಯತ್ವ ಮೂರೂ ಬಿಟ್ಟು ಅಧಿಕಾರದ ಬೆನ್ನುಹತ್ತಿ ದೊಂಬರಾಟ ಮಾಡುತ್ತಿರುವ ದಗಲ್ಬಾಜಿ ಆನಂದ್ ಅಸ್ನೋಟಿಕರ್ ಆಳುತ್ತಿದ್ದಾನೆ. ಆಪರೇಷನ್ ಕ-ಮಲ ಮಾಡಿಸಿಕೊಂಡು ಕಾಂಗ್ರೆಸ್‌ನಿಂದ ಬಿಜೆಪಿಗೆ ನೆಗೆದು ಮಂತ್ರಿಯಾಗಿ, ಯಡ್ಡಿ ವಿರುದ್ಧ ಬಂಡೆದ್ದು ಶಾಸಕತ್ವದಿಂದಲೇ ಅನರ್ಹನಾಗಿ, ಆರೇಳು ತಿಂಗಳು ಅಂತರ ಪಿಶಾಚಿಯಂತಾಗಿ ಒದ್ದಾಡಿ "ಮೋಕ್ಷ" ಸಿಕ್ಕ ನಂತರ ಮತ್ತದೇ ಬಿಜೆಪಿ ಸೇರಿ, ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಿಗೆ ಕೊಪ್ಪರಿಗೆ ಕಪ್ಪು ಕಾಸು ಕೊಟ್ಟು ಮಂತ್ರಿಗಿರಿ ಖರೀದಿಸಿ ಕೊಳಕು ರಾಜಕೀಯ ನಡೆಸುವ ನಾಲಾಯಕ್ ಈ ಅಸ್ನೋಟಿಕರ್!





ಯಶೋಧರ ನಾಯ್ಕ


"ಇಲ್ಲಿರುವುದು ಸುಮ್ಮನೆ ಮಂತ್ರಿಗಿರಿಗಾಗಿ-ಎಲ್ಲಿರುವುದೋ ನನ್ನ ಮನೆ" ಎಂದು ಕಂಡಕಂಡವರಲ್ಲಿ ಅಲವತ್ತುಕೊಳ್ಳುತ್ತಿರುವ ಅಸ್ನೋಟಿಕರ್‌ನ ಒಂದು ಕಣ್ಣು ಕಾಂಗ್ರೆಸ್ ಮೇಲೆ, ಮತ್ತೊಂದು ಕಣ್ಣು ಜೆಡಿಎಸ್ ಮೇಲಿದೆ. ತೀರಾ ಮೊನ್ನೆ-ಮೊನ್ನೆ ಅಂಕೋಲಾದ ಮಂಜುಗುಣಿ ಶಾಲಾ ಕಾರ್ಯಕ್ರಮಕ್ಕೆ ಹೋಗಿದ್ದ ಈ ಮಂತ್ರಿ ಮಹಾಶಯ ಅಲ್ಲಿದ್ದ ಕಾಂಗ್ರೆಸ್‌ನ ಹಿರಿಯ ಸಜ್ಜನ ರಾಜಕಾರಣಿ-ಮಾಜಿ ಜಿಲ್ಲಾ ಪರಿಷತ್ ಅಧ್ಯಕ್ಷ ರಮಾನಂದ ನಾಯಕರ ಬಳಿಗ್ಹೋಗಿ. "......... ಸರ್, ಮೂರ್‍ನಾಲ್ಕು ತಿಂಗಳಲ್ಲಿ ಕಾಂಗ್ರೆಸ್‌ಗೆ ಬರ್‍ತೇನೆ... ಆಶೀರ್ವಾದ ಇರ್‍ಲಿ... ಸರ್....." ಎಂದು ಹೇಳಿದ್ದೀಗ ಟಾಕ್ ಆಫ್ ದಿ ಡಿಸ್ಟ್ರಿಕ್ಟ್ ಆಗಿ ಹೋಗಿದೆ. ಕಾರವಾರ-ಅಂಕೋಲಾದಲ್ಲಿ ಸ್ವಂತ ನೆಲೆ-ಬೆಲೆಯಿಲ್ಲದ ಬಿಜೆಪಿಯಿಂದ ಮುಂದಿನ ಬಾರಿ ಗೆಲ್ಲುವ ಧೈರ್ಯ ಈ ಪೋರನಿಗಿಲ್ಲ. ಕ್ಷೇತ್ರದ ಮೇಲೆ ಮೊದಲಿನ ಹಿಡಿತ ಕಳೆದುಕೊಂಡು ಜನರಿಂದ ಉಗುಳಿಸಿಕೊಳ್ಳುತ್ತಿರುವ ಅಸ್ನೋಟಿಕರ್‌ಗೆ ಕಾಂಗ್ರೆಸ್ಸೇ ಸೇಫ್ ಸ್ಟೇಷನ್ ಅನ್ನಿಸಿಬಿಟ್ಟಿದೆ.

ಕಾಂಗ್ರೆಸ್‌ನಿಂದ ತನಗೇ ಎಮ್ಮೆಲ್ಲೆ ಟಿಕೆಟ್ ಎಂದು ಭಾವಿಸಿರುವ ಆಕ್ರಮ ಅದಿರು ಉದ್ಯಮಿ ಸತೀಶ್ ಸೈಲ್ ಹಣ ಬಲದಿಂದ ಕ್ಷೇತ್ರ ಹದ ಮಾಡಿಕೊಳ್ಳುತ್ತಿದ್ದಾನೆ. ದೇಶಪಾಂಡೆಯನ್ನೇ ನಂಬಿ ಕೂತಿರುವ ಆತನಿಗೆ ಅಸ್ನೋಟಿಕರನ 'ಆಟ' ನಿದ್ದೆಗೆಡಿಸುತ್ತಿದೆ. ದೇಶಪಾಂಡೆಯ ಜೋಯಿಡಾ ಕ್ಷೇತ್ರದ ಸ್ವಜಾತಿ ಬಾಂದಿ ಓಟುಗಳ ಮೇಲೆ ಅಸ್ನೋಟಿಕರ್ ಪ್ರಭಾವ ಬೀರಬಲ್ಲ. ಈ ಅಡ್ನಾಡಿ ಅಸ್ನೋಟಿಕರ್‌ನಿಂದ ತಾನು ಬಚಾವಾಗುವುದಿದ್ದರೆ ಸೈಲನ ಬಲಿ ಪಡೆದು ಅಸ್ನೋಟಿಕರ್‌ನನ್ನು ಕಾಂಗ್ರೆಸ್‌ಗೆ ತರಲು ದೇಶಪಾಂಡೆ ಹೇಸಲಾರರು. ಇದು ಸೈಲನಿಗೂ ಗೊತ್ತು. ಹಾಗಾಗಿ ಆತ ಅಂಥ ಸಂದರ್ಭ ಬಂದರೆ ಬಿಜೆಪಿ ಹುರಿಯಾಳಾಗುವ ಸ್ಕೆಚ್ ಈಗಾಗಲೇ ಹೆಣೆದಿಟ್ಟಿದ್ದಾನೆ! ಆಗ ಆತನಿಗೆ ದೇಶಪಾಂಡೆ ವೈರಿಣಿ ಮ್ಯಾಗಿ ಬಣದ ಬಲವೂ ಸಿಗುತ್ತದೆ. ಕಾರವಾರದ ಕಾಂಗ್ರೆಸ್‌ಗೆ ಸೈಲ್ ಅಥವಾ ಅಸ್ನೋಟಿಕರ್ ಬಿಟ್ಟರೆ ಹೇಗೆ ಗತಿ ಇಲ್ಲವೋ ಹಾಗೆ ಬಿಜೆಪಿಗೂ ಇವರಿಬ್ಬರೇ ಆಶಾಕಿರಣ. ಇದು ಕಾರವಾರ-ಅಂಕೋಲೆಯ ದೌರ್ಭಾಗ್ಯ!

ಪಕ್ಕದ ಕುಮಟಾ ಜೆಡಿಎಸ್ ಶಾಸಕ ದಿನಕರ ಶೆಟ್ಟಿ ಎಂಬ ಟಿಂಬರ್ ಲಾಬಿಯ ಕಣ್ಮಣಿಯ ಹಾರುಹತ್ಯದಲ್ಲಿದೆ. ಅಮಾಯಕರಿಗೆ ಮಂಕು ಬೂದಿ ಎರಚಿ ವೋಟ್ ಬ್ಯಾಂಕ್ ರಾಜಕೀಯ ಮಾಡುವ ಕುಕಲೆ ಕರಗತ ಮಾಡಿಕೊಂಡಿರುವ ಶೆಟ್ಟಿ ಬಿಟ್ಟರೆ ಜೆಡಿಎಸ್‌ಗೆ ಇಲ್ಲಿ ಉಳಿಗಾಲವಿಲ್ಲ. ಆದರೆ ಶೆಟ್ಟಿಯ 'ಗರುಡ ಬಂಗಾಲಿ' ಭಂಡಾಟ ಈಗೀಗ ಕುಮಟಾ-ಹೊನ್ನಾವರದ ಜನರಿಗೆ ಅರ್ಥವಾಗುತ್ತಿರುವುದರಿಂದ ಆತನಿಗೆ ಮೊದಲಿನ ತಾಕತ್ತು ಇಲ್ಲದಾಗಿದೆ. ಹಾಗಾಗಿ ಆತ ಕಾಂಗ್ರೆಸ್ ಕಡೆ ಹಾರಲು ಸಮಯ ಸಾಧಿಸುತ್ತಿದ್ದಾನೆ. ದೇಶಪಾಂಡೆಯ ದಳದ ಕಾಲದ ಸೇನಾನಿ ಈತ. ಹೀಗಾಗಿ ಆ ಸಂಬಂಧ ಬಳಸಿಕೊಂಡು ಕಾಂಗ್ರೆಸ್ ಸೇರಲು ಆತ ರಹಸ್ಯ ಕಾರ್ಯಾಚರಣೆ ನಡೆಸುತ್ತಿದ್ದಾನೆ.


ಕಾಂಗ್ರೆಸ್ಸಿಗೂ ಇಲ್ಲಿ ಗಟ್ಟಿ ಹುರಿಯಾಳಿಲ್ಲ. ಡಜನ್‌ಗಟ್ಟಲೆ ಟಿಕೆಟ್ ಆಕಾಂಕ್ಷಿಗಳಿದ್ದರೂ ಯಾರಿಗೂ ಗೆಲ್ಲುವಷ್ಟು ಓಟು ಪಡೆವ ಸಾಮರ್ಥ್ಯವಿಲ್ಲ. ಹೊನ್ನಪ್ಪ ನಾಯಕ, ಗಾಯತ್ರಿ ಗೌಡ, ಯಶೋಧರ ನಾಯ್ಕ ಮುಂತಾದವರಿಗೆ ಸ್ವಜಾತಿ ಮತವೇ ಪಡೆಯುವ ಧೈರ್ಯವಿಲ್ಲ. ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯರ ಖಾಸಾ ಆದ್ಮಿ ತಾನೆಂದು ಪೋಸು ಕೊಡುತ್ತ ಯಶೋಧರ ನಾಯ್ಕ ಕ್ಷೇತ್ರದಲ್ಲಿ ಓಡಾಡುತ್ತಿದ್ದಾನೆ. ಟ್ರಾನ್ಸ್‌ಪೋರ್ಟ್ ಮತ್ತಿತರ ಕಪ್ಪುಬಿಳುಪಿನ ಉದ್ಯಮ ನಡೆಸುವ ಈತ ನೀರಂತೆ ಹಣ ಈಗಲೇ ಹರಿಸಲಾರಂಭಿಸಿದ್ದಾನೆ. ಕಾಂಗ್ರೆಸ್ ಕ್ಯಾಂಡಿಡೇಟೆಂದು ಸ್ವಯಂ ಘೋಷಿಸಿಕೊಂಡಿರುವ ಯಶೋಧರ ನಾಯ್ಕ ಎಂಬ ವಲಸಿಗನಿಗೆ ಸ್ಥಳೀಯ ದೇಶಪಾಂಡೆ ದಂಡು ಬತ್ತಿ ಇಡುತ್ತಿದೆ. ಮೊದ್ಮಣಿಯಂತಿದ್ದರೂ ಜನರ ನಡುವೆ ಓಡಾಡಿಕೊಂಡಿದ್ದ ಮಾಜಿ ಶಾಸಕ ಮೋಹನ ಶೆಟ್ಟಿ ಸತ್ತುಹೋಗಿದ್ದೇ ಕಾಂಗ್ರೆಸ್‌ಗೆ ಗಂಡಾಂತರಕಾರಿಯಾಗಿಬಿಟ್ಟಿದೆ.

ಅತ್ತ ಬಿಜೆಪಿಯಲ್ಲಿ ಶಶಿಭೂಷಣ ಹೆಗಡೆ, ವಿನೋದ್ ಪ್ರಭು ಮತ್ತು ಸೂರಜ್ ನಾಯ್ಕ ಎಂಬ ತ್ರಿವಳಿಗಳ ಮಧ್ಯ ಟಿಕೆಟ್ ತುರುಸು ಏರ್ಪಟ್ಟಿದೆ. ಕಳೆದ ಎಲೆಕ್ಷನ್‌ನಲ್ಲಿ ಬರೀ 500 ಮತದಿಂದ ಸೋತಿದ್ದ ಸಂಭಾವಿತ ಸುಶಿಕ್ಷಿತ ಹೈಗರ ಮಾಣಿ ಶಶಿಭೂಷಣ ಹೆಗಡೆಯೇ ಮುಂದಿನ ಕ್ಯಾಂಡಿಡೇಟೆಂಬ ಮಾತು ಬಿಜೆಪಿ ವಲಯದಲ್ಲಿದೆ. ಆದರೆ ಆರೆಸೆಸ್‌ನ ಡಾರ್ಕ್ ಹಾರ್ಸ್ ವಿನೋದ ಪ್ರಭು ಎಂಬ ಅನಾಹುತಕಾರಿ ಚಡ್ಡಿ ಚತುರ ಇದ್ದಾನೆ. ಶಶಿಭೂಷಣ ಹೆಗಡೆ ಕಂಡರೆ ಕ್ಷಣ-ಕ್ಷಣವೂ ಅವುಡುಗಚ್ಚುವ ಸಂಸದ ಅನಂತ್ಕಾಣಿಯ ಪರಮಾಪ್ತ ಚೇಲ ಈ ವಿನೋದ್ ಪ್ರಭು. ಸ್ವಂತ ಮತಗಟ್ಟೆಯಲ್ಲೇ ಬಿಜೆಪಿಗೆ ಓಟು ಹಾಕಿಸಲಾಗದ ಈತನಿಗೆ ಗೇರು ಅಭಿವೃದ್ಧಿ ನಿಗಮದ ಗೂಟದ ಕಾರು ಬೇರೆ ಅನಂತ್ಕಾಣಿ ಕಟಿಪಿಟಿ ಮಾಡಿ ಕೊಡಿಸಿದ್ದಾನೆ! ಈತ ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿದ್ದಾಗಲೇ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗಾದ ಚುನಾವಣೆಗೆ ನಿಂತು ಠೇವಣಿ ಕಳೆದುಕೊಂಡಿದ್ದ. ಆಳುವ ಬಿಜೆಪಿ ಜಿಲ್ಲಾಧ್ಯಕ್ಷತೆ-ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷತೆಯಿಂದ ಈತನ ಲಕ್ಷಾಂತರ ರೂಪಾಯಿ ಸಾಲ-ಬಡತನ ನೀಗಿತೇ ಹೊರತು ಬಿಜೆಪಿಗೆ ಪೈಸೆ ಪ್ರಯೋಜನವಾಗಲಿಲ್ಲ.



ಸಂಘ ಪರಿವಾರದ ಕೊಂಕಣಿ ಮತ್ತು ಹೈಗರು ಸೇರಿ ಪೆದ್ದು ಶೂದ್ರ ಸೂರಜ್ ನಾಯ್ಕ ಎಂಬಾತನ ಮೊಣಕೈಗೆ ತುಪ್ಪ ಸವರಿ ಅಖಾಡಕ್ಕೆ ಬಿಟ್ಟಿದ್ದಾರೆ. ಈತ ಜನಿವಾರಿಗಳ ನಂಬಿ ತಾನೇ ಬಿಜೆಪಿ ಕ್ಯಾಂಡಿಡೇಟೆಂಬ ಭ್ರಮೆ ಮೂಡಿಸಿಕೊಂಡಿದ್ದಾನೆ. ಬೆಂಗಳೂರಲ್ಲಿದ್ದ ಲ್ಯಾಂಡ್ ಮಾರಿ ಆ ಹಣವನ್ನು ಕ್ಷೇತ್ರದಲ್ಲಿ ಹರಿಸುತ್ತಿದ್ದಾನೆ. ಒಂದು ಕಾಲದಲ್ಲಿ ಈತನ ಅಪ್ಪ 'ಬಂ' ಹಿಂಬಾಲಕನಾಗಿ ತುಂಬಾ ಲಾಭ ಮಾಡಿಕೊಂಡಿದ್ದ. ಆತನ ಕ್ರಾಂತಿರಂಗದ ಕ್ಯಾಂಡಿಡೇಟೂ ಆಗಿದ್ದ ಈ ಮಾಜಿ ಅರಣ್ಯ ಅಧಿಕಾರಿ. ಈಗ 'ಬಂ'ಗೆ ಕೈಕೊಟ್ಟು ಬಿಜೆಪಿ ಸೇರಿ ಬ್ರಾಹ್ಮಣರ ದಾಳವಾಗುತ್ತಿದ್ದಾರೆ ಈ ಅಪ್ಪ-ಮಗ. ಶಶಿ ಮತ್ತು ಸೂರಜ್ ನಡುವೆ ಟಿಕೆಟ್ ಪೈಪೋಟಿ ಏರ್ಪಡಿಸಿ ವಿನೋದ್ ಪ್ರಭು ಎಂಬ ಕುಮಟೆಯ ರೈಲ್ ಹೋಟೆಲ್ ಸ್ವಾಗತಕಾರನನ್ನು ಕ್ಯಾಂಡಿಡೇಟ್ ಮಾಡಿಸುವ ತಂತ್ರಗಾರಿಕೆ ಸಂಘಪರಿವಾರದ್ದು. ತಾನು ಬಿಜೆಪಿ ಹುರಿಯಾಳಾದರೆ ಗೆಲ್ಲಲಾರೆನೆಂಬುದು ಗೊತ್ತಿರುವ ಪ್ರಭುಗಾದರೂ ಎಲೆಕ್ಷನ್ ಖರ್ಚಿಗೆ ಬರುವ ಪಾರ್ಟಿ ಫಂಡ್ ಮೇಲಾಸೆ ಅಷ್ಟೆ!







ಶಿವರಾಮ ಹೆಬ್ಬಾರ್

ಕರಾವಳಿಯ ಇನ್ನೊಂದು ಕ್ಷೇತ್ರ ಭಟ್ಕಳ. ಜಿಲ್ಲೆಯಲ್ಲಿ ಕಾಂಗ್ರೆಸ್ ಕೈಲಿರುವ ಏಕೈಕ ಕ್ಷೇತ್ರವಿದು. 'ಜೆಂಟಲ್ ಗಿರಾಕಿ' ಜೆ.ಡಿ. ನಾಯ್ಕ ಇಲ್ಲಿಯ ಶಾಸಕ. ಈತನಿಗೆ ಬಿ.ಪಿ. ಏರಿತೆಂದರೆ ಎದುರಿಗಿರುವಾತನಿಗೆ ಗೂಸಾ ಗ್ಯಾರಂಟಿ. ಅದು ಅಧಿಕಾರಿಯಾಗಿರಲಿ, ತಾಪಂ-ಜಿಪಂ ಸದಸ್ಯನೇ ಆಗಿರಲಿ, ಸಾಮಾನ್ಯ ಕಾರ್ಯಕರ್ತನಾಗಿರಲಿ, ಕೊನೆಗೆ ಅಮಾಯಕ ಜನಸಾಮಾನ್ಯನೇ ಆಗಿರಲಿ ಜೆ.ಡಿ. ನಾಯ್ಕ ಬಾರಿಸಿಬಿಡುತ್ತಾರೆ. ಅಥವಾ ಮೂರನೇ ದರ್ಜೆ ಭಾಷೆ ಬಳಸಿ ಬೈದು ತವದುತ್ತಾರೆ. ಆಕ್ಸಿಡೆಂಟಾದಾಗ ಆದ ಮೆದುಳು ಪೆಟ್ಟಿನಿಂದ ಹೀಗೆ ಹುಚ್ಚುಚ್ಚಾಗಿ ಆಡುತ್ತಾರೆ ಜೆಡಿ ಎಂದು ಹೇಳುವವರೂ ಇದ್ದಾರೆ. ಆದರೆ ನಗುನಗುತ್ತಿರುವ-ಅತೀ ವಿನಯ ಪ್ರದರ್ಶಿಸುವ ಜೆಡಿಯ ಒರಿಜನಲ್ ಸ್ವಭಾವವೇ ಪಿಕ್ರೇಸ್ ಎಂದು ಆತನನ್ನು ಲಾಗಾಯ್ತಿನಿಂದ ಹತ್ತಿರದಿಂದ ನೋಡಿದವರು ಹೇಳುತ್ತಾರೆ.

ಈಗ ಎಲೆಕ್ಷನ್ ಹತ್ತಿರ ಬಂದಿರುವುದರಿಂದ ಜೆಡಿ ಬದಲಾಗಿದ್ದಾರೆ. ಎಲ್ಲರ ಹೆಗಲ ಮೇಲೆ ಕೈಹಾಕಿ ಮಾತಾಡಿಸುತ್ತಾರೆ. ಭಟ್ಕಳದಲ್ಲಿ ನಿರ್ಣಾಯಕರಾದ ನವಾಯತ ಮುಸ್ಲಿಮರೊಂದಿಗಿದ್ದ ವೈಮನಸ್ಸು ಬಗೆಹರಿಸಿಕೊಂಡಿದ್ದಾರೆ. ಅಧಿಕಾರಿಗಳೊಂದಿಗೆ ಸೌಜನ್ಯದಿಂದ ವ್ಯವಹರಿಸುತ್ತಾರೆ; ಒಟ್ಟನಲ್ಲಿ ಬರಲಿರುವ ಎಲೆಕ್ಷನ್ ಇಫೆಕ್ಟ್ ಈಗ ಜೆಡಿ ಮೇಲಾಗಿದೆ. ಕಾಂಗ್ರೆಸ್ 'ಡಾನ್' ದೇಶಪಾಂಡೆಯ ಪರಮಾಪ್ತ ಶಿಷ್ಯನಾದ ಈತನನ್ನು ಕಂಡರೆ ಮ್ಯಾಗಿ ಬಣಕ್ಕಾಗುವುದಿಲ್ಲ. ಜೆಡಿಗೆ ಪಾರ್ಟಿಯ ಟಿಕೆಟ್‌ಗಾಗಿ ಅಂಥ ಪೈಪೋಟಿ ಯಾರಿಂದಲೂ ಇಲ್ಲ. ಜಿಪಂ ಮಾಜಿ ಅಧ್ಯಕ್ಷ ದಾಮೋದರ್ ಗರ್ಡೀಕರ್ ಯಾನೆ ದಾಮಣ್ಣ, ಜಿಪಂ ಸದಸ್ಯ ಮಂಕಾಳು ವೈದ್ಯ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾದರೂ ಗಾಡ್‌ಫಾದರ್ ಇಲ್ಲದವರು. ಜೆಡಿಗೆ ಪಕ್ಕದ ಉಡುಪಿ-ಮಂಗಳೂರು ಕಡೆಯ ಆಸ್ಕರ್ ಫರ್ನಾಂಡೀಸ್, ಜನಾರ್ದನ ಪೂಜಾರಿಗಳಂಥ ಘಟಾನುಘಟಿಗಳ ಕೃಪಾಶೀರ್ವಾದವೂ ಇದೆ.

ಇಲ್ಲೇ ಎಡವಟ್ಟಾಗಿರುವುದು. ಈತ ಮತ್ತೊಂದುಬಾರಿ ಗೆದ್ದುಬಿಟ್ಟರೆ ಮಂತ್ರಿಗಿರಿಗೆ ತನ್ನೊಂದಿಗೆ ಕಾಂಪೀಟ್ ಮಾಡುತ್ತಾನೆಂಬ ಭಯ ದೇಶಪಾಂಡೆಗಿದೆ. ಹಾಗಾಗಿ ಆತ ಒಳಗೊಳಗೆ ಇಂಡಿಪೆಂಡೆಂಟ್ ಜಿಪಂ ಸದಸ್ಯ ಮಾಜಿ ಕಾಂಗ್ರೆಸ್ಸಿಗ ಮಂಕಾಳು ವೈದ್ಯನೆಂಬ ಡೀಸೆಲ್ ಕಳ್ಳ-ಕಳ್ಳಭಟ್ಟಿ ವ್ಯಾಪಾರಿಯನ್ನು ಎತ್ತಿಕಟ್ಟುತ್ತಿದ್ದಾನೆ. ಈತ ಕಾಂಗ್ರೆಸ್ ಟಿಕೆಟ್ ಸಿಗದಿದ್ದರೆ "ಶ್ರೀರಾಮುಲು ಪಕ್ಷ"ದಿಂದಾದರೂ ಸ್ಪರ್ಧಿಸುವ ತವಕದಿಂದಿದ್ದಾನೆ. ಜಿಪಂ ಕ್ಷೇತ್ರವನ್ನು ಬರೋಬ್ಬರಿ 40 ಲಕ್ಷ ವ್ಯಯಿಸಿ ಗೆದ್ದಿರುವ ಈತ ಇದೇ ಅನುಪಾತದಲ್ಲಿ ಜೆಡಿಎಸ್‌ನವರು ಹಣ ಕೊಟ್ಟರೂ ಆ ಪಾರ್ಟಿಯ ಹುರಿಯಾಳಾಗುವ ಯೋಚನೆಯಲ್ಲಿದ್ದಾನೆ. ಕಂಡಕಂಡವರ ಮೇಲೆ ಗುದುಮುರಿಗೆ ನಡೆಸುವ ಜೆಡಿಗೆ ಟಿಕೆಟ್ ತಪ್ಪಿಸಿ ತನ್ನ ಪೂರ್ವಾಶ್ರಮದ ದಳವಾಯಿ ದಾಮೂಗೆ ಟಿಕೆಟ್ ಕೊಡಿಸಿದರೆ ಹೇಗೆಂಬ ಚಿಂತನ-ಮಂಥನ ದೇಶಪಾಂಡೆ ಮನಸ್ಸಿನಲ್ಲೇ ನಡೆಸಿದ್ದಾರೆ. ಸದ್ಯದ ಟಿಕೆಟ್ ಟ್ಯಾಕ್ಟೀಸ್ ನೋಡಿದರೆ ಕಾಂಗ್ರೆಸ್‌ನಲ್ಲಿ ಜೆಡಿಯೇ ಸುರಕ್ಷಿತವಾಗಿದ್ದಾರೆ.

ಬಿಜೆಪಿಯಲ್ಲಿ ಮಾಜಿ ಮಂತ್ರಿ-ಹಾಲಿ ಸಾಬೂನು-ಮಾರ್ಜಕ ಕಂಪನಿಯ ಚೇರ್ಮನ್ ಶಿವಾನಂದ ನಾಯ್ಕಗೆ ಟಿಕೆಟ್ ತಪ್ಪಿಸಲು ಬ್ರಾಹ್ಮಣ ಬಳಗ ಅರ್ಥಾತ್ ಸಂಘ ಪರಿವಾರ ಬಿರುಸಿನ ಪ್ರಯತ್ನ ನಡೆಸುತ್ತಿದೆ. ಈ ದೀವರ ಪುಢಾರಿ ಕಂಡರೆ ಆತನ ಮಾಜಿ ಗುರು ಸಂಸದ ಅನಂತ್ಕಾಣಿಗೆ ಆಗುವುದಿಲ್ಲ. ಕಳೆದ ಬಾರಿ ಈತನನ್ನು ಸೋಲಿಸಿದ್ದೇ ಅನಂತ್ಕಾಣಿ-ಕಾಗೇರಿಯ ಹಾರವರ ಗ್ಯಾಂಗ್. ಈತ ಗೆದ್ದು ಬಿಟ್ಟರೆ ಬ್ರಾಹ್ಮಣರಿಗೆ ಯಡ್ಡಿ ಮಂತ್ರಿಗಿರಿ ಕೊಡದ ಸದ್ರಿ ಶೂದ್ರನಿಗೆ ಮತ್ತೆ ಪಟ್ಟ ಕಟ್ಟುತ್ತಾರೆಂಬ ಭಯದಿಂದ ಇಡೀ ಬ್ರಾಹ್ಮಣ ಸಂಕುಲ-ಚೆಡ್ಡಿ ಬಳಗ ಒಂದಾಗಿ ಕಾಂಗ್ರೆಸ್‌ನ ಜೆಡಿ ನಾಯ್ಕರಿಗೆ ನೆರವಾಗಿತ್ತು.

ಬಿಜೆಪಿಯೊಳಗೆ ತನ್ನನ್ನು ಹಣಿಯಲು ನಡೆಯುತ್ತಿರುವ ಹುನ್ನಾರಕ್ಕೆ ಹೆದರಿರುವ ಶಿವಾನಂದ ನಾಯ್ಕ ಜೆಡಿಎಸ್‌ನಿಂದ ಕಣಕ್ಕಿಳಿಯುವ ಆಲೋಚನೆಯಲ್ಲಿದ್ದಾರೆ. ಹಾಗೊಮ್ಮೆ ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಜೆಡಿ ನಾಯ್ಕರ ಮೇಲೆ ಮುನಿಸಿಕೊಂಡಿರುವ ನವಾಯತ ಮುಸ್ಲಿಮರು ಬೆಂಬಲಿಸುವ ಭರವಸೆ ಆತನಿಗೆ ಕೊಟ್ಟಿದ್ದಾರಂತೆ. ಹಿಂದೂತ್ವದ ಅಮಲು ಕೊಂಚ ಇಳಿದಿರುವ ಶಿವಣ್ಣ ಸಾಬರ ಜೊತೆ ಓಡಾಡುತ್ತಿದ್ದಾರೆ. ಸಂಘಪರಿವಾರ ಪಕ್ಕಾ ಚೆಡ್ಡಿ ಕೊಂಕಣಿ ಸುರೇಂದ್ರ ಶಾನಭಾಗನನ್ನು ಕ್ಯಾಂಡಿಡೇಟ್

ುವ ಆಲೋಚನೆಯಲ್ಲಿದೆ. ಆದರೆ
ಂದು ದೀವರ ಮೀಸಲು
ಾಗಿರುವುದರಿಂದ ಆ
ಸುವರಿಗೇ ಟಿಕೆಟ್ ಕೊಡಬೇಕೆಂಬ
ೂ ಬಿಜೆಪಿಯಲ್ಲಿದೆ. ಕಾಂಗ್ರೆಸ್‌ನಿಂದ
್, ಅಲ್ಲಿಂದ ಬಿಜೆಪಿಗೆ ಬಂದು
ುವ ಔಟ್‌ಡೇಟೆಡ್ ಮಾಜಿ
ಯೊಬ್ಬನ ಬಗ್ಗೆ ಅನಂತ್ಮಾಣಿಗೆ
ುವಂತಿದೆ. ಆದರೆ
ಪ್ರಸಂಗಿಯೂ, ಜನ ಬಳಕೆಯಲ್ಲಿದ
ೂ ಆಗಿರುವ ಮಾಜಿ ಮಂತ್ರಿಗೆ
ದೀವರೇ ಕ್ಯಾಕರಿಸಿ ಉಗಿಯುತ್ತಾರೆ.
ಿಜೆಪಿಯಿಂದ ಕ್ಯಾಂಡಿಡೇಟಾದರೆ
ಯೂ ಸಿಗದೆಂಬುದು ಶಿವಣ್ಣನ
ವರ ಅಭಿಪ್ರಾಯ.


ತ್ತ ಜೆಡಿಎಸ್‌ನ ಕ್ಯಾಂಡಿಡೇಟಾಗೇ
ಕೆಂದು ಕಳೆದ ಬಾರಿ ಆ ಪಕ್ಷದ
ತಪ್ಪಿಸಿಕೊಂಡಿದ್ದ ನವಾಯತರ
ಕ-ಹಾಲಿ ನಗರಸಭೆ ಅಧ್ಯಕ್ಷ
ುತುಲ್ಲಾ ಶಾಬಂದ್ರಿ
ಗತಾಯ ಪ್ರಯತ್ನಿಸುತ್ತಿದ್ದಾರೆ.
ಮೇನಾದರೂ ಬಿಜೆಪಿ ಬಿಟ್ಟರೆ
ಬಿಜೆಪಿಯಲ್ಲಿ ಹಲ್ಲಿಲ್ಲದ
ದರೆ ಶಿವಾನಂದ ನಾಯ್ಕ ಖಂಡಿತ
್ ಹುರಿಯಾಳೇ. ಯಡ್ಡಿಯನ್ನು
ುವ ಶಿವಣ್ಣ ಗೊಂದಲದಲ್ಲಿದ್ದಾರೆ.
ತಶತ್ರುಗಳಾದ
--ಅನಂತ್ಮಾಣಿಗಳು ಶಿವಣ್ಣನನ್ನು
ಯಿಂದ ಎತ್ತಿ ಬೀಸಾಡಲು
ುಸಾಧಿಸುತ್ತಿದ್ದಾರೆ.

ಟ್ಟದ ಮೇಲಿನ
ಗಗೋಡ-ಯಲ್ಲಾಪುರ-ಬನವಾಸಿ
ಬಿಜೆಪಿ ಶಾಸಕ ವಿ.ಎಸ್.
್‌ಗೆ ಗೆದ್ದ ಮರು ಕ್ಷಣದಿಂದ
ರಂಭಿಸಿದ ಅದೇ ಪಾರ್ಟಿಯ
ಅನಂತ್ಮಾಣಿ ಯಾನೆ
ಕುಮಾರ್ ಹೆಗಡೆ ಇವತ್ತಿಗೂ
ಟೆನ್ನು ಬಿಟ್ಟಿಲ್ಲ, ಎಲ್ಲೆಲ್ಲಿ ಸಾಧ್ಯವೋ
ಪಾಟೀಲರ ಮೇಲೆ ತನ್ನ ಹಿಂದೂ
ಾ ವೇದಿಕೆಯ ಪುಂಡರನ್ನು ಛೂ
ಈತ ವಿಕೃತಾನಂದ
ವಿಸುತ್ತಿದ್ದಾನೆ. ಹಿಂದಿನ
್‌ನಲ್ಲಿ ಈತ ತನ್ನ ಚೇಲಾ
ಶ್ ಬಿಜಾಪುರ್ ಎಂಬಾತನಿಗೆ
ಕೊಡಿಸಲು ವಿಫಲಯತ್ನ
. ಈ ಬಾರಿಯಾದರೂ
ನಿಗೆ ಟಿಕೆಟ್ ತಪ್ಪಿಸಬೇಕೆಂಬ ಹಠ
ಣಿಯದು. ಶಾಸಕಗಿರಿಯಲ್ಲಿ
ಹಣ ಮಾಡಿಕೊಂಡಿರುವ
ುತ ಲಾಬಿಯ ಪಾಟೀಲ ಯಡ್ಡಿ
ುಡ್ಡಿ ಬಿಜೆಪಿಯಲ್ಲಿ ಕಿಮ್ಮತ್ತು
ಾಡರೆ ಪಾಟೀಲನಿಗೆ ಟಿಕೆಟ್
ಮ ಅನುಮಾನ. ಶಾಸಕನಾಗಿ ಕ್ಷೇತ್ರಕ್ಕೇನೂ
ಮಾಡದ ಪಾಟೀಲನ ಬಗ್ಗೆ ಕ್ಷೇತ್ರದಲ್ಲಿ ಒಳ್ಳೆಯ
, ಆತನ ಮಗನ ಬೇನಾಮಿ
ಕ್ಟರಿಕೆ-ಗೂಂಡಾಗಿರಿಗೆ ಕ್ಷೇತ್ರ ನಲುಗಿಹೋಗಿದೆ.

ಂಗ್ರೆಸ್‌ನಲ್ಲಿ ಜಿ.ಪಂ. ಮಾಜಿ ಉಪಾಧ್ಯಕ್ಷ
.ಪಾಟೀಲ, ಅಕ್ರಮ ಅದಿರು ಸಾಗಾಣಿಕೆ-ರಪ್ತುದಾರ
ು ಹೆಬ್ಬಾರ್ ಮತ್ತು ಪಕ್ಕದ ಕಲಘಟಗಿ ಶಾಸಕ
ಷ ಲಾಡ್ ಹೆಸರು ಕೇಳಿಬರುತ್ತಿದೆ. ಶಿವರಾಮ
ಮ್ಯಾಗಿ-ದೇಶಪಾಂಡೆ ಇಬ್ಬರ ಜತೆಗೂ ಹಣಾಧರಿತ
ಏರ್ಪಡಿಸಿಕೊಂಡು ಕಳೆದ ಬಾರಿ ಕಾಂಗ್ರೆಸ್ ಟಿಕೆಟ್
ಿ. ಆದರೆ ಜನರೊಂದಿಗೆ ನಿಷ್ಕಲ್ಮಶವಾಗಿ ಬೆರೆಯದ
ಹಣದ ಹೊಳೆ ಹರಿಸಿದರೂ ಜನರು ಆತನನ್ನು
ಈತ ಈಚೆಗಷ್ಟೇ ಮುಗಿದ ಜಿಲ್ಲಾಯುವ ಕಾಂಗ್ರೆಸ್
ಚುನಾವಣೆ ಸಂದರ್ಭದಲ್ಲಿ ಮ್ಯಾಗಿ ಮಗ ನಿವೇದಿತ್ ಆಳ್ವನ
ನಾಗರಾಜ್ ಮಡಿವಾಳ ಎಂಬಾತನಿಗೆ ಸಹಾಯ
. ಅಂದರೆ ದೇಶಪಾಂಡೆಯ ಗುಲಾಮ ಶಾಂತಾರಾಮ
ಭಾಮೈದ ರಾಮಕೃಷ್ಣ ಹೆಗಡೆಯ ಸುಪುತ್ರ ಶ್ರೀಧರ
ವಿರುದ್ಧ ಪ್ರಚಾರ ನಡೆಸಿದ್ದರು. ಈ ಯುದ್ಧದಲ್ಲಿ
ಡೆ ಹುರಿಯಾಳು ಶ್ರೀಧರ ಹೆಗಡೆ ಸೋತು ಮ್ಯಾಗಿ
ಟ್ ನಾಗರಾಜ ಮಡಿವಾಳ ಗೆದ್ದಿದ್ದರು.

ು ದೇಶಪಾಂಡೆ ಕಣ್ಣು ಕೆಂಪಗೆ ಮಾಡಿಸಿದೆ. ಹೀಗಾಗಿ
ಡೆ ಈ ಬಾರಿ ಶಿವರಾಮ ಹೆಬ್ಬಾರ್‌ಗೆ ಟಿಕೆಟ್ ತಪ್ಪಿಸಿ
ಬಾಲಿಕ ಇಬ್ಬರು ಹೆಂಡಿರ ಮುದ್ದಿನ ಗಂಡ
ಪಾಟೀಲಗೆ ಚಾನ್ಸ್ ಕೊಡಿಸಲು ರೆಡಿಯಾಗಿದ್ದಾರೆ.
ಪಕ್ಕಾ ಬ್ರಾಹ್ಮಣನಾದರೆ, ಪಾಟೀಲ್ ಕ್ಷೇತ್ರದಲ್ಲಿ
15 ಸಾವಿರದಷ್ಟಿರುವ ಮರಾಠ ಜಾತಿಯವರು.







ಚಿಡಿನಾಯ್ಕ



ಸುನೀಲ್ ಹೆಗಡೆ



ಮಂಕಾಳ



ಈ ಪಾಟೀಲನನ್ನು ಮುಂದಿಟ್ಟುಕೊಂಡಲ್ಲಿ ಅಭ್ಯರ್ಥಿಯಾಗಿಸಿದರೆ ತಮ್ಮ ಹಳಿಯಾಳದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಆತನ ಜಾತಿ (ಮರಾಠ) ಮತಗಳು ಸಿಗುತ್ತದೆಂಬ ದೂ(ದು)ರಾಲೋಚನೆ ದೇಶಪಾಂಡೆಯದು.

ಜೆಡಿಎಸ್‌ನಲ್ಲಿ ಅನಿಲ್‌ಕುಮಾರ್‌ಗೆ ಪೈಪೋಟಿ ಕೊಡುವವರೇ ಇಲ್ಲ, ಬೆಂಗಳೂರಲ್ಲಿ ತರಹೇವಾರಿ ಬಿಜಿನೆಸ್ ನಡೆಸುವ ಈ ಕಪ್ಪು ಹಣದ ಕುಳಕ್ಕೆ ಶಾಸಕನಾಗುವ ತಲುಬಿದೆಯೇ ಹೊರತು ಜನಪರ ಬದ್ಧತೆ-ರಾಜಕೀಯದ ಕನಿಷ್ಠ ಆಶಯ ಯಾವುದೂ ಗೊತ್ತಿಲ್ಲ. ಆತನ ಸ್ವಜಾತಿ (ಈಡಿಗ) ಓಟುಗಳೂ ಇಲ್ಲಿ ಹೆಚ್ಚಿಲ್ಲ, ಹಣ ಬಲವನ್ನೇ ನಂಬಿ ಈತ ಆರ್ಭಟಿಸುತ್ತಿದ್ದಾನೆ. ಈ ನಡುವೆ ಕಾಂಗ್ರೆಸ್‌ನಲ್ಲಿಯ ಹೆಬ್ಬಾರ್ v/s ಪಾಟೀಲ ಟಿಕೆಟ್ ವಾರ್‌ನಲ್ಲಿ ಸಂಧಾನದ ಅಭ್ಯರ್ಥಿಯಾಗಿ ಪಕ್ಕದ ಕಲಘಟಗಿ ಶಾಸಕ ಸಂತೋಷ ಲಾಡ್‌ನನ್ನು ಪ್ರೊಟೆಕ್ಟ್ ಮಾಡಲು ದೇಶಪಾಂಡೆ ಕಸರತ್ತು ನಡೆಸುತ್ತಿದ್ದಾರೆ. ಈ ಲಾಡ್‌ನೂ ಮರಾಠನಾಗಿರುವುದರಿಂದ ದೇಶಪಾಂಡೆಗೆ ಲಾಭವಾಗುತ್ತದೆ; ಶಿವರಾಮ ಹೆಬ್ಬಾರನನ್ನು ಸುಲಭವಾಗಿ ಥಂಡ್ ಮಾಡಬಹುದೆಂಬ ಲೆಕ್ಕಾಚಾರ.

ಶಿರಸಿ ಕ್ಷೇತ್ರ ಬಿಜೆಪಿಯಲ್ಲಿ ಮಂತ್ರಿ ಕಾಗೇರಿ ಮಾಣಿಯೇ ಸುಪ್ರೀಮೊ! ಈತನಿಗೆ ಟಿಕೆಟ್‌ಗಾಗಿ ಪೈಪೋಟಿ ನೀಡುವ ಛಾತಿವಂಥ ಚೆಡ್ಡಿ ಪಕ್ಷದಲ್ಲಾಗಲಿ, ಹೈಗರಲ್ಲಾಗಲಿ ಇಲ್ಲ. ಬಿಜೆಪಿ ಟಿಕೆಟ್ ಕಾಗೇರಿಗೆ ಕಟ್ಟಿಟ್ಟ ಬುತ್ತಿ! ಆದರೆ ಕಾಂಗ್ರೆಸ್‌ನಲ್ಲಿ ದೊಡ್ಡ ಜಗಳವೇ ನಡೆಯುತ್ತಿದೆ. 'ಬಂ' ಭಾಮೈದ ಭೀಮಣ್ಣ ನಾಯ್ಕನಿಗೆ ಟಿಕೆಟ್ ಕೊಡುವ ಆಸೆ ತೋರಿಸಿ ಆತ ಭಾವನ ಜತೆ ಜೆಡಿಎಸ್ ಸೇರದಂತೆ ದೇಶಪಾಂಡೆ ಹಿಡಿದಿಟ್ಟುಕೊಂಡಿದ್ದಾರೆ. ಇನ್ನೊಂದೆಡೆ ಆಜ್ಞಾನುಧಾರಿ ಸೇವಕ-ಮಾಜಿ ಡಿಸಿಸಿ ಅಧ್ಯಕ್ಷ ಶಾಂತಾರಾಮ ಹೆಗಡೆಗೂ ಟಿಕೆಟ್ ಕೊಡುವ ಭರವಸೆ ಕೊಟ್ಟು ಮ್ಯಾಗಿ ಕಡೆ ಪಾಲದಂತೆ ತಡೆದಿದ್ದಾರೆ. ಇವರಿಬ್ಬರ ನಡುವೆ ಕಳೆದ ಬಾರಿ ಸೋತ ಮ್ಯಾಗಿ ಶಿಷ್ಯ ರವೀಂದ್ರನಾಥ ನಾಯ್ಕ ಎಂಬ ಹಿಂದುಳಿದ ಹುಡುಗ ಟಿಕೆಟ್‌ಗಾಗಿ ಒದ್ದಾಡುತ್ತಿದ್ದಾರೆ. ಮ್ಯಾಗಿ ನಂಬಿದವರೆಲ್ಲ ಹಳ್ಳ ಹಿಡಿದಂತೆ ರವಿಯೂ ಕಾಂಗ್ರೆಸ್‌ನಲ್ಲಿ ಮೂಲೆಗುಂಪಾಗಿ ಹೋಗಿದ್ದಾರೆ.

'ದನ ಕಾಯೋರ್ನೆಲ್ಲ ರಾಜಕೀಯಕ್ಕೆ ತಂದು ತಪ್ಪು ಮಾಡ್ದೆ' ಎಂದು 'ಬಂ' ತನ್ನ ಭಾಮೈದ ಕೈಕೊಟ್ಟಾಗ ಅಲವತ್ತುಕೊಂಡಿದ್ದರು. ಈಗ ಭೀಮಣ್ಣ ದೇಶಪಾಂಡೆ ಎದೆ ಮೇಲೆ ಕುಂತು 'ಬಲಾಢ್ಯ ಭಾವನನ್ನೇ ಎದುರಾಕಿಕೊಂಡು ನಿಮ್ಮೊಂದಿಗಿದ್ದೇನೆ... ಟಿಕೆಟ್ ಕೊಡ್ಸಿ'ಎಂದು ಅಬ್ಬರಿಸುತ್ತಿದ್ದಾನೆ. ದೇಶಪಾಂಡೆಗೆ ಈ ಭೀಮಣ್ಣನಿಗಿಂತ ಶಾಂತಾರಾಮ ಹೆಗಡೆ ಬಗ್ಗೆಯೇ ಒಲವು ಹೆಚ್ಚು. ದೇಶಪಾಂಡೆ ಬಣದಲ್ಲೇ ಈಗ ಟಿಕೆಟ್‌ಗಾಗಿ ಭರ್ಜರಿ ಬಡಿದಾಟ ನಡೆಯುತ್ತಿದೆ. ರವಿ ಮ್ಯಾಗಿಯಮ್ಮನ ನಂಬಿ ಕೂತಿದ್ದಾರೆ. ಇಲ್ಲೂ ಜೆಡಿಎಸ್ ಇಲ್ಲ.

ತೀವ್ರ ಕುತೂಹಲದ ಕ್ಷೇತ್ರವೆಂದರೆ ದೇಶಪಾಂಡೆಯ ಹಳಿಯಾಳ-ಜೋಯಿಡಾ. ಇಲ್ಲೀಗ ಜೆಡಿಎಸ್‌ನ ಸುನೀಲ್ ಹೆಗಡೆ ಎಂಬ ಗಂಡಾಗುಂಡಿ ಪೋರ ಶಾಸಕನಾಗಿ ಕಾರುಬಾರು ನಡೆಸುತ್ತಿದ್ದಾನೆ. ದೇಶಪಾಂಡೆಯ 25 ವರ್ಷದ ದಾದಾಗಿರಿ ದರ್ಬಾರಿಗೆ ಪ್ರಥಮ ಫಲಾನುಭವಿಯೇ ಈ ಸುನೀಲ್ ಹೆಗಡೆಯ ಅಪ್ಪ ವಿ.ಡಿ. ಹೆಗಡೆ. ಈತನನ್ನು ದೇಶಪಾಂಡೆ ಒಮ್ಮೆ ಎಮ್ಮೆಲ್ಸಿಯೂ ಮಾಡಿಸಿದ್ದರು. ಆ ನಂತರ ಪಾಲಿಗಾಗಿ-ಪವರ್‌ಗಾಗಿ ಇವರಿಬ್ಬರಲ್ಲಿ ಕಿತ್ತಾಟ ಶುರುವಾಗಿತ್ತು, ಇದು ಕ್ಲೈಮ್ಯಾಕ್ಸ್ ತಲುಪಿದ್ದೇ ವಿ.ಡಿ.ಹೆಗಡೆ ಮಗ ಸುನಿಲ್ ಜೆಡಿಎಸ್ ಸೇರಿ ದೇಶಪಾಂಡೆ ಎದುರು ಎಲೆಕ್ಷನ್‌ಗೆ ಸ್ಪರ್ಧಿಸಿದಾಗ. ದೇಶಪಾಂಡೆಯ ಪಾಳೆಗಾರಿಕೆಯಿಂದ ಬೇಸತ್ತವರು ಬೇರೆ ಆಯ್ಕೆ ಇಲ್ಲದೆ ಅನಿವಾರ್ಯವಾಗಿ ಸುನೀಲನನ್ನು ಗೆಲ್ಲಿಸಿದ್ದರು. ದೇಶಪಾಂಡೆ ಯುಗದಲ್ಲಿ ಹೆಚ್ಚು ಹರಾಮಿ ಹಲ್ಕಟ್ ಕೆಲಸ ಮಾಡಿದ್ದೇ ಈ ಸುನಿಲ್ ಮತ್ತವನ ಅಪ್ಪನೆಂದು ಗೊತ್ತಿದ್ದೂ ಗೆಲ್ಲಿಸಿದ್ದರು. ಅವರಿಗೊಮ್ಮೆ ದೇಶಪಾಂಡೆ ತೊಲಗಿದರೆ ಸಾಕಾಗಿತ್ತು, ಮತ್ತೆ ಹಣಾಹಣಿಗೆ ಕಾಂಗ್ರೆಸ್‌ನ ದೇಶಪಾಂಡೆ- ಜೆಡಿಎಸ್‌ನ ಸುನಿಲ್ ಹೆಗಡೆ ರೆಡಿಯಾಗಿದ್ದಾರೆ. ಇವರುಗೆ ಅವರವರ ಪಕ್ಷದಲ್ಲಿ ಟಿಕೆಟ್ ಕಾಂಪಿಟೇಟರ್ ಇಲ್ಲ. ಇಲ್ಲಿ ಬಿಜೆಪಿ ಆಟಕ್ಕುಂಟು ಲೆಕ್ಕಕ್ಕೆ ಇಲ್ಲ...

ನೊಂದ ಹೆಣ್ಣಿನ ಬೆನ್ನಿಗಿರುವ ಎರಡು ಪತ್ರಿಕೆಗಳು

ಪುಸ್ತಕ ಪರಿಚಯ



ಚಂದ್ರಶೇಖರ್ ಐಜೂರ್

1985ರಲ್ಲಿ 'ಮಾನುಷಿ' ಎಂದು ಪ್ರಕಟಗೊಳ್ಳುತ್ತಿದ್ದ ಪತ್ರಿಕೆ ನಂತರ ಕೆಲಕಾಲ 'ಮಾನಸ' ಎಂಬ ಹೆಸರಿನಲ್ಲಿ ಬಂದು ಈಗ 'ನಮ್ಮ ಮಾನಸ' ಎಂಬ ಹೊಸ ರೂಪ, ಹೊಸ ದೃಷ್ಟಿಕೋನ ತೊಟ್ಟು ಪ್ರಕಟಗೊಳ್ಳುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಕನ್ನಡದ ಅನೇಕ ಲೇಖಕಿಯರು ಈಗ ಮಾನಸ ನಿರಂತರವಾಗಿ ಪ್ರಕಟಗೊಳ್ಳುವತ್ತ ಹೆಚ್ಚು ಆಸ್ಥೆ ವಹಿಸಿ ದುಡಿಯುತ್ತಿದ್ದಾರೆ. ಎಚ್.ಎಸ್.ರಾಜೇಶ್ವರಿಯವರ ಸಂಪಾದಕತ್ವದ ಬೆನ್ನಿಗೆ ಎಚ್.ಎಸ್.ಚಂಪಾವತಿ, ಎ.ಸವಿತಾ, ವೆಂ. ವನಜಾ, ಗೀತಾ, ಎಚ್.ಎಸ್.ಪುಷ್ಪಾ, ಇಳಾ ವಿಜಯಾ, ಬಿ.ಎನ್.ಸುಮಿತ್ರಾಬಾಯಿ, ತಾಜುಮಾ, ತಸ್ನೀಂ ತಾಜ್, ವೇದವಲ್ಲಿ ಜಿ.ವಿ., ವೈ.ಎನ್.ವತ್ಸಲಾ ಮೊದಲಾದವರಿದ್ದಾರೆ. ಇಳಾ ಪ್ರಕಾಶನದ ವಿಜಯಮ್ಮನವರು 'ಮಾನಸ' ಜೊತೆಗಿರುವುದು ಪತ್ರಿಕೆಗೊಂದು ದೊಡ್ಡ ಬಲ ಸಿಕ್ಕಂತಾಗಿದೆ.



ಎ.ಕೆ.ರಾಮಾನುಜನ್ ಅವರ ರಾಮಾಯಣ ಕುರಿತ ಕೃತಿಯೊಂದು ವಿವಾದಕ್ಕೀಡಾಗಿ ಕನ್ನಡ ಸಾಹಿತ್ಯಲೋಕದ ವೇದಿಕೆಗಳಲ್ಲಿ ನೇರಾನೇರ ವಾಗ್ವಾದಗಳು ನಡೆಯುತ್ತಿರುವ ಈ ಹೊತ್ತಲ್ಲಿ ಲೇಖಕಿ ಎಚ್.ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯೂ ಈಗ ವಿವಾದವನ್ನೇ ಉಂಡುಟ್ಟು ಉಸಿರಾಡುವವರ ಜಗಲಿ ಪಡಸಾಲೆಗಳಲ್ಲಿದೆ. ಇಡೀ 'ಮಾನಸ' ಬಳಗ ಎಚ್.ನಾಗವೇಣಿಯವರ ಬೆಂಬಲಕ್ಕಿದ್ದು ಈ ಕುರಿತು ಅವರ ಒಂದು ಲೇಖನ ಹಾಗೂ ನಾಡಿನ ಚಿಂತಕರ ಒಂದು ಪತ್ರವನ್ನು ಪ್ರಕಟಿಸಿದೆ. 'ತಾನು ಹೆರಲಿರುವ ಮಗು, ಮುಂದೊಂದು ದಿನ ಸಮಾಜ ದಲ್ಲಿ ವಿನಾಕಾರಣ ವಿವಾದಕ್ಕೆ ಒಳಗಾಗ ಬಹುದು ಎಂಬುದು ತಾಯಿಗೆ ಮೊದಲೇ ತಿಳಿದರೆ, ಆಕೆ ಆ ಮಗು ಈ ಜಗದೊಡಲಿಗೆ ಬರುವುದೇ ಬೇಡವೆಂದು ಬಯಸುತ್ತಾಳೋ ಏನೋ! ಇದೀಗ ನಾನಂತೂ ಆ ಸ್ಥಿತಿಯಲ್ಲಿರುವ ತಾಯಿ' ಎಂದು ಲೇಖಕಿ ನಾಗವೇಣಿಯವರು ತಮ್ಮ ನೋವನ್ನು ಇಲ್ಲಿ ತೋಡಿ ಕೊಂಡಿದ್ದಾರೆ. ಕನ್ನಡದ ಲೇಖಕರು ತೊಂಭತ್ತರಷ್ಟು ಲೇಖಕರ ಬೆಂಬಲ ನಾಗವೇಣಿಯವರ ಪರವಿದ್ದರೂ ಮಂಗಳೂರು ವಿಶ್ವವಿದ್ಯಾಲಯದ ಹೊರಗೆ ಒಳಗೆ ಕೊಬ್ಬಿರುವ ಕೋಮುಶಕ್ತಿಗಳು ಸೃಜನಶೀಲ ಕೃತಿಯೊಂದರ ಮೇಲೆ ಜಾತಿಕಾರಣದ ನೆಪದಲ್ಲಿ ಹಲ್ಲೆ ಮಾಡಲು ಮುಂದಾಗಿವೆ. '1920-1927ರ ಕಾಲಘಟ್ಟದ ಕಥಾವಿನ್ಯಾಸವಿರುವ ನನ್ನ ಕೃತಿಯಲ್ಲಿ ಅವಿದ್ಯಾವಂತ, ಶ್ರಮಿಕವರ್ಗ, ಕೆಳಸಮುದಾಯದ ಪಾತ್ರಗಳು ಆಡುವ ಮಾತು ಮತ್ತು ಪದಪ್ರಯೋಗಗಳು 'ಜಾತಿ ನಿಂದನೆ' ಎಂಬ ತಕ್ಕಡಿಯಲ್ಲಿಟ್ಟು ತೂಗುವುದು ಎಷ್ಟು ಸರಿ?' ಎನ್ನುವ ನಾಗವೇಣಿಯವರ ಪ್ರಶ್ನೆ ನಮ್ಮೆಲ್ಲರ ಪ್ರಶ್ನೆಯೂ ಹೌದು.

ಹೀಗೆ ಹೊಸಬಗೆಯಲ್ಲಿ ನವೀಕರಣಗೊಂಡಿರುವ 'ಮಾನಸ' ಕನ್ನಡದ ದಿಟ್ಟ ಲೇಖಕಿಯೊಬ್ಬರ ಬೆನ್ನಿಗಿದ್ದು ಸಂತೈಸುತ್ತಿದೆ. ಇದಿಷ್ಟೇ ಅಲ್ಲದೆ, 'ಮಾನಸ' ಪತ್ರಿಕೆಯನ್ನು ಇನ್ನೂ ಗಟ್ಟಿಯಾಗಿ ರೂಪಿಸಲು ಪ್ರತಿ ತಿಂಗಳ ಎರಡನೇ ಶನಿವಾರ ಸಂಜೆ 5.30ಕ್ಕೆ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರಲ್ಲಿ ಚರ್ಚೆ, ವಿಚಾರ ವಿನಿಮಯವನ್ನು ಇಟ್ಟುಕೊಂಡು ಮಾನಸ ವೇದಿಕೆ ಆಸಕ್ತರನ್ನೆಲ್ಲ ಒಂದೆಡೆ ಸೇರಿಸುತ್ತಿದೆ. ಮಹಿಳಾ ಧ್ವನಿಗಾಗಿ ಸಾರ್ವಜನಿಕ ಸ್ಥಳವನ್ನು ಉಪಯೋಗಿಸುವುದರ ಹಿಂದೆ ಸ್ತ್ರೀವಾದದ ಪರಿಕಲ್ಪನೆಯೂ ಇದೆ ಎಂದು ಬಲವಾಗಿ ನಂಬಿರುವ ಮಾನಸ ಬಳಗ ಈ ನಿಟ್ಟಿನಲ್ಲಿ ಎಲ್ಲ ಸ್ತ್ರೀವಾದಿ ಚಿಂತಕರನ್ನು ಒಂದೆಡೆ ಕಲೆಹಾಕುವ ದೊಡ್ಡ ಪ್ರಯತ್ನವನ್ನೇ ಮಾಡುತ್ತಿದೆ. 'ನಮ್ಮ ಮಾನಸ'ಕ್ಕೆ ಎಲ್ಲ ದಿಕ್ಕಿನ ಯಶಸ್ಸುಗಳು ಸಿಗಲಿ.

ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-18
ಬಿಡಿಪ್ರತಿ: ರೂ. 10, ವಾರ್ಷಿಕ: ರೂ. 100

'ಸ್ವಾಭಿಮಾನಿ ದನಿ' ಮಾಸಪತ್ರಿಕೆ ಪಿ.ಯಶೋದಾ ಅವರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದೆ. 'ಮಾನಸ' ಪತ್ರಿಕೆಯಂತೆ ದೊಡ್ಡಬಳಗ ಈ ಪತ್ರಿಕೆಗಿಲ್ಲ, ಕಳೆದ ಐದಾರು ತಿಂಗಳಿಂದ ಮಂಗಳೂರ ವಿಜಯ ಅವರ ಸಲಹೆಯೊಂದಿಗೆ ಪ್ರಕಟಗೊಳ್ಳುತ್ತಿರುವ 'ಸ್ವಾಭಿಮಾನಿ ದನಿ' ಬಹುಮುಖ್ಯವಾಗಿ ದಲಿತ ಸಂವೇದನೆಗೆ ಹೆಚ್ಚು ತೆತ್ತುಕೊಂಡಿದೆ. 'ಸಂವಾದ' ಪತ್ರಿಕೆಯ ಆಶಯಗಳನ್ನೇ ಇಟ್ಟುಕೊಂಡು ಹೊರಬರುತ್ತಿರುವ ಪತ್ರಿಕೆಯಂತೆ ಕಾಣುವ 'ಸ್ವಾಭಿಮಾನಿ ದನಿ' ತನ್ನದೇ ಆದ ಒಳನೋಟ, ಸೂಕ್ಷ್ಮತೆಗಳನ್ನು ಗಂಭೀರವಾಗಿ ರೂಢಿಸಿಕೊಳ್ಳಬೇಕಿದೆ. ಈ ಸಂಚಿಕೆಯಲ್ಲಿ ಪ್ರಕಟಗೊಂಡಿರುವ ಅಜಿತ್‌ಕುಮಾರ್ ಮತ್ತು ಇತರರ ವಿರುದ್ಧ ತಮಿಳುನಾಡು ಸರ್ಕಾರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪುಟಗಳ ಕನ್ನಡಾನುವಾದ ಸಂಗ್ರಹಯೋಗ್ಯವಾಗಿದೆ. 'ಸಾಯಿಬಾಬಾ ಎಷ್ಟು ದೇವ? ಎಷ್ಟು ಮಾನವ?' ಲೇಖನ ಕೂಡ ವಿಶಿಷ್ಟವಾಗಿದೆ.

ಅವಮಾನಿತ ಹೆಣ್ಣಿನ ನೋವನ್ನು ಹೆಣ್ಣು ಮಾತ್ರ ಅರ್ಥಮಾಡಿಕೊಳ್ಳಬಲ್ಲಳು. ಆಳದಲ್ಲಿ ದಲಿತ ಸಂವೇದನೆಯಿಂದಲೇ ರೂಪುಗೊಳ್ಳುತ್ತಿರುವ 'ಸ್ವಾಭಿಮಾನಿ ದನಿ' ಎಲ್ಲ ಅಸಹಾಯಕ ಹೆಣ್ಣುಮಕ್ಕಳ ದನಿಯನ್ನು ಒಳಗೊಳ್ಳಬೇಕಿದೆ. ಅದು ಈ ಪತ್ರಿಕೆಗೆ ಅಷ್ಟು ಕಷ್ಟವಾಗಲಾರದು.



ಸ್ವಾಭಿಮಾನಿ ದನಿ
ನಂ.2, 1ನೇ ಮಹಡಿ, ಪಿಎಲ್‌ಡಿ ಬ್ಯಾಂಕ್ ಎದುರು, ಕೋರ್ಟ್ ರಸ್ತೆ,
ಆನೇಕಲ್-562 106, ಬೆಂಗಳೂರು ನಗರ ಜಿಲ್ಲೆ,
ಬಿಡಿಪ್ರತಿ: ರೂ. 10, ವಾರ್ಷಿಕ: ರೂ.120

ಇದೆಂಥ ಮಾತಿನ ವರಸೆ

> "ಅಡಿಗರಿಗೂ ನನಗೂ ಇರುವುದು ಒಬ್ಬ ಕನ್ನಡದ ಕವಿ ಮತ್ತು ಓದುಗನಿಗಿರುವ ಸಂಬಂಧ ಮಾತ್ರ. ನಾನು ಅಡಿಗರ ಕಾವ್ಯವನ್ನು ಓದಿದ್ದು, ಅರ್ಥೈಸಿಕೊಂಡದ್ದು ಏಕಾಂತದ ಓದುಗನಾಗಿಯೇ ಹೊರತು ಯಾವ ಸಹೃದಯ ಶಿಬಿರಗಳಲ್ಲೂ ನಾನು ಇದುವರೆವಿಗೂ ಭಾಗವಹಿಸಿಲ್ಲ. ಅಡಿಗರ ದೇಹವನ್ನು ನಾನು ಜೀವನದಲ್ಲಿ ಒಂದು ಸಾರಿಯೂ ಕಂಡಿಲ್ಲ. ನನ್ನ ಮಟ್ಟಿಗಂತೂ ಎಡಪಂಥೀಯ ಚಳವಳಿಗಳಲ್ಲಿ ಭಾಗವಹಿಸುವುದು ಹಾಗೂ ಅಡಿಗರ ಕಾವ್ಯದ ಜೊತೆಗಿನ ಅನುಸಂಧಾನ ಒಟ್ಟೊಟ್ಟಿಗೆ ನಡೆಯುತ್ತ ಬಂದಿದೆ. • ಕೆ.ಫಣಿರಾಜ್"

'ಮಾತು ಮಾತಿಗೂ ನೀನು ನಿಂದೇನು ಮಹಾ ಎನ್ನುತ್ತೀಯ
ಅಯ್ಯ, ಇದೆಂಥ ಮಾತಿನ ವರಸೆ ಎಂದು ತಿಳಿಸುತ್ತೀಯ

ನರ ನಾಡಿಗಳಲ್ಲಿ ಹರಿಯುತ್ತಿರುವುದರ ಬಗ್ಗೆ ಅಂಥ ಖಯಾಲಿ ಇಲ್ಲ ನಮಗೆ
ಕಣ್ಣಿಂದ ತೊಟ್ಟಿಕ್ಕದ್ದು ರಕ್ತ ಹೇಗಾದೀತು

ಮಾತಿನಲ್ಲಿ ಹುರುಪು ಉಳಿದಿಲ್ಲ, ಮಸಲ ಹುರುಪಿದ್ದರೂ
'ಇದೇ ಮಾತಿನ ಆಶಯ'ವೆಂದು ಯಾವ ವಿಶ್ವಾಸದಲ್ಲಿ ಹೇಳಲಾದೀತು.'


-ಮಿರ್ಜಾ ಅಸಾದುಲ್ಲಾ ಗಾಲೀಬ್


ಒಕ್ಕೊಂದ ಅವರು ನನ್ನ ಪ್ರತಿಕ್ರಿಯೆಯನ್ನು ಬಣ್ಣಿಸಲು ಬಳಸಿರುವ 'ದುರಹಂಕಾರಿ, ಉದ್ಧಟ, ವಿಕೃತ, ಆಕ್ರಮಣಶೀಲ' ಎಂಬಿತ್ಯಾದಿ ವಿಶೇಷಣಗಳ ಬಗ್ಗೆ ನಾನು ಯಾವ ಸಮಜಾಯಿಷಿಯನ್ನು ಕೊಡಲಾರೆ. ಅದು ಅವರ ಅಭಿಪ್ರಾಯ. ಹಾಗೆಯೇ ನನ್ನ ಮತ್ತು ಜಿ.ರಾಜಶೇಖರರ ವೈಚಾರಿಕ ಆರೋಗ್ಯ ಹದಗೆಟ್ಟದ್ದು, ನಾವು ಪಥಭ್ರಷ್ಟರಾಗಿದ್ದೇವೆ ಎಂಬ ಒಕ್ಕೊಂದ ಹಾಗು ನಮ್ಮ ವಿಶ್ವಾಸಿಗಳಾದ 'ಹಲವು ಹಿರಿಯರು' (ಇವರು ಯಾರೋ? ನಾನಂತೂ ಅರಿಯೆ) ಮರುಕದ ಬಗ್ಗೆಯೂ ನನಗೆ ಏನೂ ಹೇಳುವುದಕ್ಕಿಲ್ಲ- ಅದು ಕೂಡ ಅವರ ಅಭಿಪ್ರಾಯ. ನಮ್ಮ ಹದಗೆಟ್ಟ ಆರೋಗ್ಯದ ಸುಧಾರಣೆಗಾಗಿ, ನಾವು 'ಅಲ್ಪಸಂಖ್ಯಾತರ ಸಂಹಾರ, ಶೂದ್ರರ ವಧೆ, ದಲಿತರ ದಮನ, ಹೆಣ್ಣುಮಕ್ಕಳ ಮಾನಮುಕ್ಕು' ಮುಂತಾದ ಕೃತ್ಯಗಳ ಸಮರ್ಥಕರು ಎಂದು ಜರಿಯುವ 'ಸಂಸ್ಕೃತಿ ಅಧ್ಯಯನ'ದ ಮದ್ದನ್ನು ಒಕ್ಕೊಂದ ನೀಡುತ್ತಿರುವುದಕ್ಕೆ ನಮ್ಮ ವಿಶ್ವಾಸಿಗಳಾದ 'ಹಿರಿಯರು' ತಲೆದೂಗಿ ಬೆನ್ನುತಟ್ಟುತ್ತಿದ್ದರೆ - ಅದು ಅವರವರ ವಿವೇಕ-ವಿವೇಚನೆಗೆ ಬಿಟ್ಟದ್ದು; ವಿಷಾದ-ನೋವುಗಳನ್ನು ಹೀಗೂ ವ್ಯಕ್ತಪಡಿಸಬಹುದು ಎಂಬ ಸಂಗತಿ ನನಗೆ ತಿಳಿದಿರಲಿಲ್ಲ. ಆದರೆ ಒಕ್ಕೊಂದ ನನ್ನ ಮೇಲೆ ಮಾಡಿರುವ ಎರಡು ಆರೋಪಗಳನ್ನು ಪ್ರಶ್ನಿಸುವ ಅವಶ್ಯಕತೆ ಇದೆ:

(1) ಒಕ್ಕೊಂದ ನನ್ನ ಪ್ರತಿಕ್ರಿಯೆಯಲ್ಲಿ 'ಚಿಂತನೆಗಳ ಕತ್ತು ಹಿಚುಕುವ ಗುಣವಿದೆ' ಎಂಬ ಆರೋಪ ಮಾಡಿದ್ದಾರೆ. ಇಂಥ ಆರೋಪವನ್ನು ಯಾರ ಮೇಲಾದರೂ ಹೊರಿಸುವ ಮುನ್ನ, ಒಂದು ಅರೆಕ್ಷಣವಾದರೂ ಯಾವ ಕೃತ್ಯಗಳು ಈ ಆರೋಪಕ್ಕೆ ಅರ್ಹ ಎಂದು ಒಕ್ಕೊಂದ ಯೋಚಿಸಿದಂತಿಲ್ಲ. ಪತ್ರಿಕೆಯಲ್ಲಿ ಮೂರು ಕಂತುಗಳಲ್ಲಿ ಒಕ್ಕೊಂದ ತಮ್ಮ ನಿಲುವನ್ನು ಮಂಡಿಸಿದ್ದಾರೆ. ನಾನಾಗಲಿ, ರಾಜಶೇಖರರಾಗಲೀ, ಒಕ್ಕೊಂದ ಅವರ ವಿಚಾರ ಮಂಡನೆಯ ಹಕ್ಕನ್ನೂ, ಪ್ರಕಟಿಸುವ ಸಂಪಾದಕರ ಸ್ವಾತಂತ್ರ್ಯವನ್ನೂ, ಓದುವ/ಓದದೇ ಇರುವ ಓದುಗರ ಸ್ವಾತಂತ್ರ್ಯವನ್ನು ಆಕ್ಷೇಪಿಸಿದ್ದಿಲ್ಲ. ಒಕ್ಕೊಂದ ಅವರ ವಿಮರ್ಶೆ ನನಗೆ ಸಮ್ಮತವಾಗಲಿಲ್ಲವಾಗಿ ಭಿನ್ನಮತ ಪ್ರಕಟಿಸಲು ಪ್ರತಿಕ್ರಿಯೆ ಬರೆಯಬೇಕಾಯಿತು. ಅದು ಒಕ್ಕೊಂದ ಅವರಿಗೆ ಪಥ್ಯವಾಗದೇ ಇರಬಹುದು, ವಿಕೃತ ಎನ್ನಿಸಿರಬಹುದು. ಆದರೆ 'ಚಿಂತನೆಯ ಕತ್ತು ಹಿಸುಕುವ ಗುಣ' ಹೇಗಾಗುತ್ತದೆ? ತಮಗೆ 'ಜನವಿರೋಧಿ' ಎಂದು ಕಂಡದ್ದನ್ನು ಮುಟ್ಟುಗೋಲು ಹಾಕುವಂತೆ ಒತ್ತಾಯಿಸುವುದು 'ಅಧಿಕಾರ ಪ್ರತಿರೋಧ' ಎಂಬುದು ಒಕ್ಕೊಂದರ ಮಾದರಿ. ನಾನು ಅಂತಹ ಯಾವ ಮಾದರಿಯನ್ನೂ ಪ್ರತಿಪಾದಿಸಿಲ್ಲ. ಒಕ್ಕೊಂದ ಬರೆದ ಪತ್ರಿಕೆಯಲ್ಲಿಯೇ, ಸಂಪಾದಕರು ಅವಕಾಶ ಮಾಡಿಕೊಟ್ಟಷ್ಟರ ಮಟ್ಟಿಗೆ ನಾನು ನನ್ನ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದೇನೆ. ಒಕ್ಕೊಂದ ಅವರಿಗೆ ಲಭ್ಯವಿಲ್ಲದ ಯಾವ ಹೆಚ್ಚಿನ ಅಧಿಕಾರ ನನಗಿದೆ? ಒಕ್ಕೊಂದ ತಮ್ಮ ಮೂಗಿನ ನೇರಕ್ಕೆ ಒಂದು ಕಾಲ್ಪನಿಕ ಸಾಮ್ರಾಜ್ಯ ಕಟ್ಟಿ, ತಾವೇ ನನಗೆ ಅದರ 'ದಂಡನಾಯಕ'ನ ಪಟ್ಟ ಕಟ್ಟಿದಾಕ್ಷಣ ನನಗೆ ಅಂಥ ಅಧಿಕಾರ ದಕ್ಕಿಬಿಟ್ಟು ನಾನು ಒಕ್ಕೊಂದರ 'ಚಿಂತನೆಯ ಕತ್ತು ಹಿಸುಕು'ತ್ತೇನೆಯೋ? ಇಂತಹ ವಾಗ್ವಾದಗಳನ್ನೆಲ್ಲ ನಾನು ಒಬ್ಬಂಟಿಯಾಗಿಯೇ ಮಾಡುವುದು, ಹಾಗೆಯೇ ಮಾಡಬೇಕು ಎನ್ನುವುದು ನನ್ನ ಬಲವಾದ ನಂಬಿಕೆ. ಹೀಗಾಗಿ ನಾನು ಒಕ್ಕೊಂದರ ಈ ಆರೋಪವನ್ನು ನಾನು ಸ್ಪಷ್ಟವಾಗಿ ನಿರಾಕರಿಸುತ್ತೇನೆ-ಅಷ್ಟೇ ನನಗಿರುವ ಅಧಿಕಾರ-ಅದಕ್ಕಿಂತ ಹೆಚ್ಚಿನ ಯಾವ ಅಧಿಕಾರದಲ್ಲೂ ನನಗೆ ನಂಬಿಕೆ ಇಲ್ಲ.


(2) ನಾನು 'ಅಡಿಗರು, ದೇಶಕಾಲ, ನೀನಾಸಂ...ಮೊದಲಾದ ಒಂದು ಸಾಂಸ್ಕೃತಿಕ ವಲಯದೊಂದಿಗಿನ ವ್ಯಕ್ತಿಗತ ಸಂಬಂಧ, ಒಡನಾಟ, ಬದ್ಧತೆಗಳ ದಾಕ್ಷಿಣ್ಯಕ್ಕೆ' ಕಟ್ಟುಬಿದ್ದು ತಮ್ಮ ಬರಹಕ್ಕೆ ಪ್ರತಿಕ್ರಿಯಿಸುತ್ತಿದ್ದೇನೆ ಎಂದು ಒಕ್ಕೊಂದ ಆರೋಪಿಸುತ್ತಾರೆ. ಇದು ಅವಾಸ್ತವಿಕವಾದ ಹಾಗು ಸತ್ಯಕ್ಕೆ ದೂರವಾದ ಆರೋಪ. ಸಂಬಂಧದ ವಿಷಯಕ್ಕೆ ಬಂದರೆ, ಅಡಿಗರಿಗೂ ನನಗೂ ಇರುವುದು ಒಬ್ಬ ಕನ್ನಡದ ಕವಿ ಮತ್ತು ಓದುಗನಿಗಿರುವ ಸಂಬಂಧ ಮಾತ್ರ. ನಾನು ಅಡಿಗರ ಕಾವ್ಯವನ್ನು ಓದಿದ್ದು, ಅರ್ಥೈಸಿಕೊಂಡದ್ದು ಏಕಾಂತದ ಓದುಗನಾಗಿಯೇ ಹೊರತು ಯಾವ ಸಹೃದಯ ಶಿಬಿರಗಳಲ್ಲೂ ನಾನು ಇದುವರೆವಿಗೂ ಭಾಗವಹಿಸಿಲ್ಲ. ಅಡಿಗರ ದೇಹವನ್ನು ನಾನು ಜೀವನದಲ್ಲಿ ಒಂದು ಸಾರಿಯೂ ಕಂಡಿಲ್ಲ. ನನ್ನ ಮಟ್ಟಿಗಂತೂ ಎಡಪಂಥೀಯ ಚಳವಳಿಗಳಲ್ಲಿ ಭಾಗವಹಿಸುವುದು ಹಾಗೂ ಅಡಿಗರ ಕಾವ್ಯದ ಜೊತೆಗಿನ ಅನುಸಂಧಾನ ಒಟ್ಟೊಟ್ಟಿಗೆ ನಡೆಯುತ್ತ ಬಂದಿದೆ. ಇನ್ನು 'ದೇಶಕಾಲ'ದ ವಿಷಯಕ್ಕೆ ಬಂದರೆ, ಅದರ ಕೊನೆಯ ಸಂಚಿಕೆಯವರೆಗೂ ನಾನು ಆ ಪತ್ರಿಕೆಯ ಚಂದಾದಾರನಾಗಿರಲಿಲ್ಲ, ಉಡುಪಿಯ ಒಂದು ಅಂಗಡಿಯಲ್ಲಿ ಪ್ರತಿಗಳು ಸಿಗುತ್ತಿದ್ದರಿಂದ, ಬಿಡಿಪ್ರತಿಯನ್ನು ಕೊಂಡು ಓದುವ ಸ್ವಾತಂತ್ರ್ಯ ನನಗಿತ್ತು. ಇನ್ನುಳಿದಂತೆ ಒಬ್ಬ ಓದುಗನಿಗೆ, ಒಬ್ಬ ಬರಹಗಾರನಿಗೆ ಒಂದು ಪತ್ರಿಕೆಯ ಜೊತೆಗಿರುವ ಸಾಧಾರಣ ಸಂಬಂಧಕ್ಕಿಂತ ಹೆಚ್ಚಿನ ಸಂಬಂಧವೇನೂ 'ದೇಶಕಾಲ'ದ ಜೊತೆ ನನಗಿರಲಿಲ್ಲ, ಪ್ರಸ್ತುತ ಪತ್ರಿಕೆಗೆ ಸಂಪಾದಕರನ್ನು ಹೊರತುಪಡಿಸಿದ, ಸಲಹಾ ಸಮಿತಿ ಇತ್ತೋ, ಅದರಲ್ಲಿ ಯಾರಿದ್ದರು ಎಂಬಿತ್ಯಾದಿ ವಿಷಯಗಳು ನನಗೆ ತಿಳಿದಿಲ್ಲ, ಆ ಪತ್ರಿಕೆಯ ಸಂಪಾದಕರಾಗಿದ್ದ ವಿವೇಕ ಶಾನುಭಾಗರು ನನಗೆ ವ್ಯಕ್ತಿಗತವಾಗಿ ಪರಿಚಿತರಾದದ್ದೂ ಆ ಪತ್ರಿಕೆ ಶುರುವಾದ ಮೇಲೆ, ಆ ಸ್ನೇಹವೂ ಕನ್ನಡದ ಒಬ್ಬ ಗದ್ಯಬರಹಗಾರ ಹಾಗು ಪತ್ರಿಕೆಯ ಸಂಪಾದಕನ ಜೊತೆ ಒಬ್ಬ ಸ್ವತಂತ್ರ ಓದುಗ-ಬರಹಗಾರನಿಗಿರುವ ಸ್ನೇಹ ಮಾತ್ರ. ಈ ಸ್ನೇಹದ ನೆಪದಲ್ಲಿ ಅವರು ಯಾವ ಬದ್ಧತೆಯ ಒತ್ತಡವನ್ನೂ ನನ್ನ ಮೇಲೆ ತಂದದ್ದಿಲ್ಲ, ನೀನಾಸಂ ರಂಗ ಶಿಕ್ಷಣ ಶಾಲೆ ಹಾಗೂ ಅಕ್ಷರ ಪ್ರಕಾಶನದ ಜೊತೆಗಿನ ನನ್ನ ಸಂಬಂಧ ಕೂಡ ಕನ್ನಡದ ಯಾವುದೇ ಒಬ್ಬ ಸ್ವತಂತ್ರ ಬರಹಗಾರ, ರಂಗಾಸಕ್ತನಿಗಿರುವ ಸಂಬಂಧ ಮಾತ್ರ. ಅದಕ್ಕಿಂತ ಹೆಚ್ಚಿನ ಸ್ಥಾನಮಾನವನ್ನು ಈ ಸಂಸ್ಥೆಗಳಲ್ಲಿ ನಾನು ಬಯಸಿಯೂ ಇಲ್ಲ, ಹೆಚ್ಚಿನ ಬದ್ಧತೆಯನ್ನು ಈ ಸಂಸ್ಥೆಗಳು ನನ್ನ ಮೇಲೆ ಹೇರಿಯೂ ಇಲ್ಲ, ನೀನಾಸಂನವರು ತಾವು ಆಯೋಜಿಸುವ ಶಿಬಿರದಲ್ಲಿ ಮಾತನಾಡಲು ನನ್ನನ್ನು ಆಹ್ವಾನಿಸಿದ್ದು ಎರಡೇ ಸಾರಿ; ವಿಷಯಗಳೂ ನಾನು ಅಧ್ಯಯನ

ಅಡಿಗರ ಕೋಮುವಾದಿ ಕವನ ಪ್ರತಿಕ್ರಿಯೆ






ನಡೆಸುತ್ತಿರುವ 'ಹಿಂದೂತ್ವ ರಾಜಕೀಯ'ದ ಕುರಿತಾದುವು. ಎರಡು ಸಾರಿಯೂ ಆ ಸಂಸ್ಥೆ ನಾನು ಏನು ಮಾತನಾಡಬೇಕು-ಏನು ಮಾತನಾಡದು ಎಂಬುದರ ಬಗ್ಗೆ ಕಟ್ಟುಹಾಕಿದ್ದಿಲ್ಲ, ನನ್ನ ವಿಚಾರಗಳನ್ನು ನನಗೆ ಸಾಧ್ಯವಿರುವ ನಿರ್ಭೀತೆಯಲ್ಲಿ ನಾನು ಮಾತನಾಡಿ ಬಂದಿದ್ದೇನೆ- ಆ ಮಾತುಗಳು ನೀನಾಸಂನ ವಾರ್ತಾಪತ್ರಿಕೆ 'ಮಾತುಕತೆ'ಯಲ್ಲಿ ಲೇಖನದ ರೂಪದಲ್ಲಿ ಪ್ರಕಟವಾಗಿ, ಓದುಗರಿಗೆ ಬಹಿರಂಗವಾಗಿ ಲಭ್ಯವಿವೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ, ಈಗ ಸಂಸ್ಥೆಗಳ ಮುಖ್ಯಸ್ಥರಾಗಿರುವ ಕೆ.ವಿ.ಅಕ್ಷರ ಅವರ ರಂಗಕ್ರಿಯಾಶೀಲತೆಯ ಬಗ್ಗೆ ನನಗೆ ವೈಯಕ್ತಿಕವಾಗಿ ಮೆಚ್ಚುಗೆ ಇದೆ; ಅವರ ವೈಚಾರಿಕ ನಿಲುವುಗಳ ಜೊತೆ ನನಗೆ ತೀವ್ರ ಭಿನ್ನಮತಗಳಿವೆ; ಈ ವೈಚಾರಿಕ ಭಿನ್ನಮತಗಳನ್ನು ನಾನು ಮತ್ತು ಅಕ್ಷರ ಬಹಿರಂಗ ವಾಗ್ವಾದಗಳಲ್ಲಿಯೇ ಪ್ರಕಟಿಸಿದ್ದೇವೆ. ಅಕ್ಷರ ತಮ್ಮ ಪ್ರಕಾಶನದ 'ಮೊದಲ ಓದು' ಮಾಲಿಕೆಗಾಗಿ 'ಬಿ.ಆರ್.ಅಂಬೇಡ್ಕರರ ಬರಹಗಳು' ಪುಸ್ತಕವನ್ನು ಸಂಪಾದಿಸಿ-ಅನುವಾದಿಸಿ ಕೊಡಬಹುದೇ ಎಂದು ಕೇಳಿದಾಗ ನಾನು ಸ್ವ-ಇಚ್ಛೆಯಿಂದ ಆ ಕೆಲಸ ಮಾಡಿಕೊಟ್ಟಿದ್ದೇನೆ. ಹೀಗೆ ಒಕ್ಕೊಂದ ಹೆಸರಿಸಿರುವ ವ್ಯಕ್ತಿ ಹಾಗು ಸಂಸ್ಥೆಗಳ ಜೊತೆ ನನ್ನ ನಂಟು ಯಾವ ಬದ್ಧತೆಯನ್ನು ಬೇಡದ, ಸ್ವಯಂತಂತ್ರ-ಸ್ವತಂತ್ರ ಸಂಪರ್ಕ. ಹೀಗಿರುವಾಗ ಯಾವ ದಾಕ್ಷಿಣ್ಯಕ್ಕಾದರೂ ನಾನು ಏಕೆ ಕಟ್ಟುಬೀಳಬೇಕು? ಈ ಸಂಸ್ಥೆಗಳೊಟ್ಟಿಗಿನ ಸಂಪರ್ಕ ನಾನು ಎಡಪಂಥೀಯ ಚಳವಳಿಗಳಲ್ಲಿ ಸಕ್ರಿಯನಾಗಿರುವಾಗಲೇ ಇರುವಂಥದ್ದು. ಹಾಗೆ ನೋಡಿದರೆ, ಎಡಪಂಥೀಯ ಸಂಘಟನೆಗಳಿಗೆ ನಾನು ಸ್ವಇಚ್ಛೆಯಿಂದಲೇ ಬದ್ಧನಾಗಿದ್ದೇನೆ. ಚಳವಳಿಗಳ ಒಳಗಿನ ಭಿನ್ನಮತವನ್ನು ಚಳವಳಿಗಳನ್ನು ಉಳಿಸಿ ಬೆಳೆಸುವ ಬದ್ಧತೆಯಿಂದಲೇ ಆದಷ್ಟು ಸಾರ್ವಜನಿಕಗೊಳಿಸದೆ ನುಂಗಿಕೊಳ್ಳುವ ದಾಕ್ಷಿಣ್ಯಕ್ಕೆ ಕರ್ನಾಟಕದ ಎಲ್ಲ ಸಾಮಾನ್ಯ ಚಳವಳಿಗಾರರ ಹಾಗೆ ನಾನು ಕಟ್ಟುಬಿದ್ದಿದ್ದೇನೆ. ಈ ದಾಕ್ಷಿಣ್ಯ ಚಳವಳಿಗೆ ಮಾರಕವೇ ಹೊರತು ಪೂರಕವಲ್ಲ ಎನ್ನುವ ಸ್ಥಿತಿ ಬಂದಾಗ, ದಾಕ್ಷಿಣ್ಯ ಮುರಿದು ಮಾತನಾಡಿ, ದಶಕಗಳ ಕಾಲ ಚಳವಳಿಯಲ್ಲಿದ್ದವರು ಅನ್ನಿಸಿಕೊಳ್ಳಬಾರದ ಮಾತುಗಳನ್ನೆಲ್ಲ ಅನ್ನಿಸಿಕೊಂಡು ಕ್ರಿಯಾಶೀಲವಾಗಿರುವ ಎಡಪಂಥೀಯ ಚಳವಳಿಗಳ ಜೊತೆ ಸಕ್ರಿಯ ಸಂಗವನ್ನು ಮುಂದುವರೆಸಿಕೊಂಡು ಬಂದಿದ್ದೇನೆ. ಇದರ ಬಗ್ಗೆ ನನಗೆ ಯಾವ ಪಶ್ಚಾತಾಪವೂ ಇಲ್ಲ.



ಇದೆಂಥ ಕಷ್ಟ ನೋಡಿ, ಈ ರೀತಿಯಲ್ಲಿ ವೈಯಕ್ತಿಕ ವಿವರಗಳನ್ನು ವೈಚಾರಿಕ ವಾಗ್ವಾದದಲ್ಲಿ ತರುವುದು ನನಗೆ ಚೂರೂ ಇಷ್ಟವಿಲ್ಲ, ಇಲ್ಲದ ಪುತಾತ್ಮಭಾವಗಳು ನಮ್ಮ ಮಾತುಗಳಲ್ಲಿ ಇಣುಕಲು ಶುರುಮಾಡುತ್ತವೆ. ಆದರೆ ಒಕ್ಕೊಂದ ವ್ಯಕ್ತಿಚಾರಿತ್ರ್ಯದ ವಿಷಯಗಳನ್ನು ವಾಗ್ವಾದಕ್ಕೆ ಎಳೆದು ತಂದು, ಇಲ್ಲದ ವೈಯಕ್ತಿಕ ಸಂಬಂಧ, ಬದ್ಧತೆ, ದಾಕ್ಷಿಣ್ಯಗಳ ಆರೋಪಗಳನ್ನು ನನ್ನ ಮೇಲೆ ಹೊರಿಸುವಾಗ ಓದುಗರ ಗಮನಕ್ಕೆ ಈ ವಿವರಗಳನ್ನು ತರಬೇಕಾದ್ದು ಅನಿವಾರ್ಯವಾಯಿತು-ಇದಕ್ಕೆ ಓದುಗರ ಕ್ಷಮೆ ಇರಲಿ. ಇಂಥ ಆರೋಪಗಳನ್ನು ಮಾಡುವಾಗ ಬರಹಗಾರ ವ್ಯಕ್ತಿಯೊಬ್ಬನ ಬದುಕಿನ ವಿವರಗಳ ವಾಸ್ತವಿಕತೆಯನ್ನು ಅರಿತುಕೊಳ್ಳಬೇಕಾಗುತ್ತದೆ - ಒಕ್ಕೊಂದ ಅವರಿಗೆ ಅಂತಹ ತಾಳ್ಮೆ ಇದ್ದಂತಿಲ್ಲ, ನನ್ನನ್ನು ಆಮೂಲಾಗ್ರವಾಗಿ ಬಲ್ಲೆನೆಂಬ ದಾರ್ಷ್ಟ್ಯದಲ್ಲಿ ಒಕ್ಕೊಂದ ಸರಾಗವಾಗಿ ಆರೋಪಮಾಡುತ್ತಾರೆ. ಮನುಷ್ಯರ ಬದುಕಿನ ಹಲವು ಸಾಧ್ಯತೆಗಳನ್ನು ಅಲ್ಲಗಳೆಯುವುದು, ತಮ್ಮ ಮೂಗಿನ ನೇರಕ್ಕೆ ಅಳತೆ ಮಾಡಿದ್ದಷ್ಟೇ ನಿಮ್ಮ ಬದುಕು ಎಂದು ತಾಕೀತು ಮಾಡುವುದು -'ರಷ್ಯನ್ ವಾಸ್ತವಾದಾಚೆ ಅಜೆಟ್ ಪ್ರಾಪ್ ಪಡೆದುಕೊಳ್ಳುವ ಅರ್ಥಸೂಕ್ಷ್ಮ' ಇದೇನಾ? ಇದರಲ್ಲಿ ನನ್ನ ಜೊತೆ 'ಕಳ್ಳುಬಳ್ಳಿಯ ಸಂಬಂಧವಿರುವ ಹಿರಿಯರು, ಗೆಳೆಯರು' ಎಂದು ಒಕ್ಕೊಂದ ವಿವರಿಸುವ ಮಂದಿಯ ಕೊಡುಗೆ ಏನೋ ನಾನರಿಯೆ. ಈ ಆರೋಪ ನಿರಾಧಾರವಾದದ್ದು. 'ದೇಶಕಾಲ' ಪತ್ರಿಕೆಯನ್ನಾಗಲಿ, ನೀನಾಸಂನಂತಹ ಸಂಸ್ಥೆಯನ್ನಾಗಲೀ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂತಂತ್ರ ಸ್ವತಂತ್ರ ಸಂಸ್ಥೆಗಳು ಎಂದೇ ನಾನು ನೋಡುವುದು. ಇಂತಹ ಸನ್ನಿವೇಶದಲ್ಲಿ, ಈ ಬಗೆಯ ಸಂಸ್ಥೆಗಳ ಶಕ್ತಿ-ಮಿತಿಗಳನ್ನು ಹೇಗೆ ಅರಿಯಬೇಕು ಎಂಬುದನ್ನು ನಾನು ಕಲಿತಿರುವುದು ಎಡಪಂಥೀಯರಾದ 'ಸಮಾಜ-ಸಂಸ್ಕೃತಿ ಚಿಂತಕರ' ವಿದ್ವತ್ ಪರಂಪರೆಯಿಂದ - ಆ ಚಿಂತಕರು ಯಾರು ಎನ್ನುವುದನ್ನು ರಾಜಶೇಖರ ತಮ್ಮ ಮೊದಲ ಪ್ರತಿಕ್ರಿಯೆಯಲ್ಲಿಯೇ ಪಟ್ಟಿ ಮಾಡಿದ್ದಾರೆ. ಈ ಕಲಿಕೆಯಿಂದಲೇ ನಾನು ಸ್ವಯಂಪ್ರೇರಣೆಯಿಂದ, ಒಬ್ಬಂಟಿಯಾಗಿ ಒಕ್ಕೊಂದ ಪಟ್ಟಿಮಾಡಿರುವ ಚರ್ಚೆಗಳಲ್ಲಿ ತೊಡಗಿ ಕೊಂಡದ್ದು- ಇದಕ್ಕೆ ಯಾವ ಒಕ್ಕೊಂದ ಕಲ್ಪಿತ ಸಾಂಸ್ಕೃತಿಕ ವಲಯದ ಕುಮ್ಮಕ್ಕು, ದಾಕ್ಷಿಣ್ಯ ಪರತೆಗಳು ನನ್ನನ್ನು ಪ್ರಚೋದಿಸಿಲ್ಲ, ಕೋಮು ವಾದಿ ರಾಜಕೀಯದ ವಿಷಯದಲ್ಲಿ ನನ್ನನ್ನು ನಿಷ್ಠುರ ವಾಗಿರುವಂತೆ ಪ್ರೇರಿಪಿಸುವ ಕಲಿಕೆಯ ಮೇಲೆ, ಎಡಪಂಥೀಯ ಗೆಳೆಯರ ವೈಚಾರಿಕ ವಿಧಾನಕ್ಕೆ ನಿಷ್ಠುರವಾಗಿ ಭಿನ್ನಮತ ವ್ಯಕ್ತಪಡಿಸಿದಾಕ್ಷಣ, ಇಲ್ಲದ 'ದಾಕ್ಷಿಣ್ಯಪರತೆ'ಯ ಆರೋಪ ಹೊರಿಸಿದರೆ ನಾನು ಅಷ್ಟೇ ನಿಷ್ಠುರವಾಗಿ ಅದನ್ನು ನಿರಾಕರಿಸುತ್ತೇನೆ. ಎಡಪಂಥೀಯ ಚಿಂತಕರ ಪರಂಪರೆಯಿಂದ ಪಡೆದ ಅರಿವಿನಿಂದಲೇ ಒಬ್ಬಂಟಿಯಾಗಿ, ನನಗೆ ಗೊತ್ತಿರುವ ಭಾಷೆಯ ಶಕ್ತಿಯಲ್ಲಿ ನಂಬಿಕೆ ಇಟ್ಟುಕೊಂಡು ಇನ್ನು ಮುಂದೆಯೂ ನಾನು ವಾದ ಮಾಡುವವನು; ಗುಂಪುಗಾರಿಕೆ, ಸರ್ಟಿಫಿಕೇಟುಗಳ ಕಾಳಜಿ ನನಗಿಲ್ಲ, ಇಂತಹ ಅನಾರ್ಕಿಸ್ಟ್ 'ದುರಂಹಕಾರ, ಉದ್ಧಟತನ' ವೈಚಾರಿಕ ಆರೋಗ್ಯಕ್ಕೆ, ಉಪಯುಕ್ತವಾದದ್ದು.



ಒಂದು ಗಲಭೆಯ ಸುತ್ತ...

ಕತೆ

• ಡಾ. ಅಶೋಕ್. ಕೆ. ಆರ್
ಸುಳ್ಯ



ಬೆಳಗ್ಗೆ ಬಸ್ಸಿನಲ್ಲಿ

ರಫೀಕ್. ಬಾ ಇಲ್ಲಿ, ಇಲ್ಲೇ ಸೀಟು ಖಾಲಿ ಇದೆ". ...ಅವಳೆಡೆಗೆ ನೋಡಿದ. ಹಿಂದಿರುಗಿ ತನ್ನ ಗೆಳೆಯರಾದ ...ಜು, ರಷೀದ್ ಕುಳಿತಿದ್ದೆಡೆಗೆ ನೋಡಿದ. ಅವರೆಲ್ಲ ...ಪಿ ನಗಲಾರಂಭಿಸಿದ್ದರು.

...ಯೋಚಿಸುತ್ತಿದ್ದೀಯೋ? ಬಾ ಬೇಗ ಏನೋ ...ಕು" ಅವಳು ಮತ್ತೆ ಕೂಗಿದಳು. ನಿಂತಲ್ಲಿಂದ ...ಆ ಅತ್ತಿತ್ತ ಕದಲದೆ ಅವಳೆಡೆಗೆ ನೋಡುತ್ತಾ "ಇಲ್ಲ ...ೀದಿ. ಸಾನಿಲ್ಲೇ ಎಲ್ಲಾದರೂ ...ತೀನಿ" ಎಂದು ಹೇಳಿ ತಲೆತಗ್ಗಿಸಿದ.

...ಕೋ? ಏನಾಯ್ತು? ಅಮ್ಮ ನಿನಗೂ ...ಟ್ಟು ಕಳುಹಿಸಿದ್ದಾರೆ. ಬಾ."

...ದ ತಲೆಯನ್ನು ಮೇಲೆತ್ತದೆ "ಇಲ್ಲ ...ನಲ್ಲಿ ಬಂದು ಕೂತರೆ ಇವರೆಲ್ಲ ...ಹೆಣ್ಮುಕ್ಕ ಹೆಣ್ಮುಕ್ಕ ಅಂತಾರೆ. ...ತಗೋತೀನಿ ಬಿಡು."

...ಮತ್ತವಳ ಪಕ್ಕದಲ್ಲಿ ಕುಳಿತಿದ್ದ ಆವಳ ...ೀರು ದನಿಯಲ್ಲಿ ನಕ್ಕರು. "ಈಗ ...ತರಗತಿಗೆ ಬಂದಿದ್ದೀರ. ದೊಡ್ಡ ...ಆಡ್ತೀರಲ್ಲ. ರಫೀಕ್, ಬಾರೋ ಇಲ್ಲಿ. ...ಾ ರೇಗಿಸ್ತಾನೋ ನಾನೂ ನೋಡ್ತೀನಿ" ...ೋರು ಮಾಡಿದಳು. ರಫೀಕ್ ಮತ್ತೆ ...ರೆಡೆಗೆ ನೋಡಿದ. ನಗು ...ಾಗಿತ್ತು, ಮಾಯವಾಗಿರಲಿಲ್ಲ. ...ಪ್ಪ ರೇಗಿಸಬೇಡ್ರೋ' ಎಂದು ...ಬೇಡುತ್ತ ರಶ್ಮಿಯ ಪಕ್ಕ ಬಂದು ...ಾನು ಸರಿಯಾಗಿ ಮೀಸೆ ಮೂಡಿಲ್ಲ ...ಗೆ, ಪಿಯುಸಿ ಓದ್ತಿರೋ ನನ್ನನ್ನೇ ...ತ?!"

...ಪ್ರಶ್ನೆಗೆ ಉತ್ತರವೀಯದೆ ಆಕೆಯಿತ್ತ ...ನ್ನ ತಿನ್ನತೊಡಗಿದ. ಬಸ್ಸು ...ು.

...ಅದೇ ಸಂಜೆ ಅದೇ ಬಸ್ಸು

...ೀ. ಕಿಟಕಿ ಪಕ್ಕ ಬ್ಯಾಗ್ ಇಟ್ಟಿದ್ದೆ. ರೀಸಸ್ಸಿಗೆ ಹೋಗಿ ...ರಲ್ಲಿ ಕೂತುಬಿಟ್ಟಿದ್ದೀರಲ್ಲ. ನನ್ನ ಜಾಗ ಬಿಡ್ರೋ" ...ದ ರಫೀಕ್. ಅವನ ಬ್ಯಾಗನ್ನು ಅವನಿಗೆ ...ಸುತ್ತ "ಏನ್ ಸೀಟ್ ರಿಸರ್ವ್ ಮಾಡ್ಸಿದ್ಯಾ? ...ೋಗು. ಬೇರೆಯಲ್ಲಾದರೂ ಕೂತ್ಕೋ ಹೋಗು" ...ಇಷ್ಟು ಹೇಳಿ ಗಣೇಶನೆಡೆಗೆ ನೋಡಿ ...ುಕಿಸಿದ. ಗಣೇಶ ಚುಡಾಯಿಸುವ ದನಿಯಲ್ಲಿ ...ಪ್ಪ. ನಿನ್ನ ರಶ್ಮಿ ದೀದಿ ಎಲ್ಲಾದರೂ ಸೀಟು ...ತ್ತಾಳೆ" ಎಂದು ಹೇಳುತ್ತಿದ್ದಂತೆ ರಫೀಕನಿಗೆ ...ರಿ ಗಣೇಶನ ಕೊರಳಪಟ್ಟಿ ಹಿಡಿದೆಳೆದ. ಶರ್ಟಿನ ...ಗುಂಡಿ ಕಿತ್ತು ಬಂತು.

...ಜೊತೇನೇ ಪಂಗಾ ತಗೊತೀಯೇನೋ" ಎಂದು ...ತ್ತ ಗಣೇಶನ ಅಕ್ಕಪಕ್ಕ ಕುಳಿತಿದ್ದ ರಾಜು ಮತ್ತು ...ೀಲೆದ್ದು ಮೂವರು ರಫೀಕನ ಎದೆ ಮೇಲೆ ಕೈಹಾಕಿ ...ನ ನೂಕಿದರು. ನಾಲ್ಕು ಹೆಜ್ಜೆ ಹಿಂದೆ ಹೋದ ...ಯತಪ್ಪಿ ಬೀಳುವಷ್ಟರಲ್ಲಿ ಕಂಡಕ್ಟರ್ ಅವನನ್ನು ...ೀಲೆತ್ತಿದ. "ಲೋ ನಿಮಗೆಲ್ಲ ತಿಂದಿದ್ದು ಹೆಚ್ಚಾಯ್ತ? ...ಕಿತ್ತಾಡ್ತೀರಾ? ಎಲ್ಲರನ್ನೂ ಹೊರಗೆ ಅಟ್ಟಬಿಡ್ತೀನಿ ...ಎಂದು ಗದರಿಸಿದ. ಅಲ್ಲೇ ಇದ್ದ ಒಂದು ಖಾಲಿ ...ರಫೀಕನಿಗೆ ಕೂರುವಂತೆ ಸೂಚಿಸಿ ರಾಜುವಿನೆಡೆಗೆ ...ಕಂಡಕ್ಟರ್ "ಯಾಕೋ ರಾಜು, ಈ ಪುಂಡ ...ನ ಜೊತೆ ಸೇರಿ ನೀನೂ ಹಾಳಾಗ್ ಬೇಕು ...ೂ ಹೇಗೆ? ನಿಮ್ಮಪ್ಪನಿಗೆ ಹೇಳ್ಬೇಕಾ?" ಎಂದು ...ಹೇ ಹೇ. ಸುಮ್ಮನೆ ತಮಾಷೆಗೆ ಆಟಾಡ್ತಿದ್ದೋ ...ಮನೇಗೆಲ್ಲ ಹೇಳ್ಬೇಡಿ" ಹಲ್ಲುಕಿರಿಯುತ್ತ ಹೇಳಿ ...ೆ.

...ರಾತ್ರಿ ಎರಡು ಅಂಗಡಿಗಳ ಬಳಿ

...ಯ ಗೊತ್ತಾಯ್ತ ರಮೇಶ? ಇವತ್ತು ಸಂಜೆ ಬಸ್ಸಿನಲ್ಲಿ ...ಹುಡುಗ ನಮ್ಮ ಇಬ್ಬರು ಹುಡುಗರಿಗೆ ಶರ್ಟೆಲ್ಲ ಹರಿದು ರಕ್ತ ಸುರಿಯುವಂತೆ ಹೊಡೆದನಂತೆ?"

"ಹೌದಾ?! ಇವರದ್ಯಾಕೋ ಅತಿಯಾಯ್ತು ನೋಡು. ಏನಕ್ಕಂತೆ?"

"ಲವ್ ಜಿಹಾದೂ. ಆ ಸಾಬೀ ನಮ್ಮ ಹುಡುಗಿಯೊಬ್ಬಳ ಬಳಿಯೇ ಕುಳಿತುಕೊಳ್ಳುತ್ತಿದ್ದನಂತೆ. ಇವರು ಯಾಕೆ ಅಂಥ ಕೇಳಿದ್ದಾರೆ. ಅಷ್ಟಕ್ಕೇ..."

"ಒಂದು ಮೀಟಿಂಗ್ ಸೇರಿಸು. ಏನಾದ್ರೂ ಮಾಡಬೇಕು ಇದರ ಬಗ್ಗೆ."

****

"ವಿಷಯ ಗೊತ್ತಾಯ್ತ ಹಮೀದ್ ಭಾಯ್?"

"ಏನು ಅಲಿ?"

"ಇವತ್ತು ಸಂಜೆ ಬಸ್ಸಿನಲ್ಲಿ ನಮ್ಮ ಹುಡುಗನೊಬ್ಬನಿಗೆ ಇಬ್ಬರು ಹಿಂದೂ ಹುಡುಗರು ರಕ್ತ ಕಾರುವಂತೆ ಹೊಡೆದರಂತೆ."

"ಹೌದಾ?! ಇವರದ್ಯಾಕೋ ಅತಿಯಾಯ್ತು ನೋಡು. ಒಂದು ಮೀಟಿಂಗ್ ಸೇರಿಸು. ಏನಾದ್ರೂ ಮಾಡಬೇಕು ಇದರ ಬಗ್ಗೆ."

****

ಹೈವೇಯಲ್ಲಿನ ಒಂದು ಹೋಟೆಲಿನಲ್ಲಿ

"ನಿಮ್ಮನ್ನು ಅಲ್ಲಿ ನೋಡಿದ್ದೀನಿ. ಅಲ್ಲೇ ಇದ್ರಲ್ವಾ ನೀವಿಬ್ಬರೂ?" ಕಾಫಿ ಹೀರುತ್ತ ಕುಳಿತಿದ್ದ ಪ್ರಭಾ ಮತ್ತು ಉಮಾರ ಬಳಿ ಬಂದು ಖಾಲಿಯಿದ್ದ ಅವರೆದುರಿಗಿನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಕೇಳಿದ ಅನ್ಸಾರಿ. ಅವನೊಟ್ಟಿಗೆ ಬಂದ ನದೀಮ ಅವನ ಪಕ್ಕದಲ್ಲಿ ಆಸೀನನಾದ.

"ಹೌದು. ಅಲ್ಲೇ ಇದ್ವಿ. ಒಂದು ವಾರವಾಯ್ತು ಬಂದು. ನಿಮ್ಮನ್ನೂ ನೋಡಿದ್ದೀನಿ."

"ನಾವೂ ಹೊರಗೆ ಬಂದು ಒಂದು ವಾರವಾಯ್ತಷ್ಟೇ!"

"ಯಾವ ಕೇಸು?"

"ಅದೂ ಅದೂ..."

"ಪರವಾಗಿಲ್ಲ ಹೇಳಿ."

"ಖೋಟಾನೋಟು! ನಿಮ್ಮದು?"

"ಖೋಟಾನೋಟಾ?! ನಮ್ಮದು ಅಷ್ಟೆಲ್ಲ ದೊಡ್ಡ ಕೇಸಲ್ಲಪ್ಪ, ಚಿಕ್ಕ ಪುಟ್ಟ ಒಡವೆ ಕದಿಯಬೇಕಾದರೆ ಸಿಕ್ಕಿಹಾಕಿಕೊಂಡಿದ್ದೆವು ಅಷ್ಟೇ!"

ಅದೂ ಇದೂ ಹರಟುತ್ತಾ ಹದಿನೈದು ನಿಮಿಷ ಕಳೆದರು. ನದೀಮ ಅನ್ಸಾರಿಯ ಕಿವಿಯಲ್ಲೇನೋ ಉಸುರಿದ. ಅನ್ಸಾರಿ ಸರಿಯೆಂಬಂತೆ ತಲೆಯಾಡಿಸುತ್ತ "ನಿಮ್ಮದೇನೂ ಅಭ್ಯಂತರವಿಲ್ಲದಿದ್ದರೆ ನಮ್ಮ ಜೊತೆ ಬನ್ನಿ. ಮೈಸೂರಿಗೆ ಹೋಗೋಣ. ಒಂದು ಚಿಕ್ಕ ಬ್ಯುಸಿನೆಸ್ಸು. ನಿಮಗೂ ಕಮಿಷನ್ ಸಿಗುತ್ತೆ. ಜೊತೆಯಲ್ಲಿಬ್ಬರು ಹುಡುಗೀರಿದ್ರೆ ಅನುಮಾನ ಪಡೋರು ಕಡಿಮೆ."

ಪ್ರಭಾ, ಉಮಾ ತಮ್ಮತಮ್ಮಲ್ಲೇ ಚರ್ಚಿಸಿ ಐದು ನಿಮಿಷದ ನಂತರ ಕಾಫಿಯ ದುಡ್ಡು ಕೊಟ್ಟು ನದೀಮ ತಂದಿದ್ದ ಕಾರಿನಲ್ಲಿ ಮೈಸೂರಿನ ಕಡೆಗೆ ಹೊರಟರು. ಅದೇ ಸಮಯಕ್ಕೆ ಹೋಟೆಲಿನ ಫೋನ್ ರಿಂಗಣಿಸಿತು.

"ಹಲೋ."

"ಹಲೋ, ನಾನು ರಮೇಶ."

"ರಮೇಶಣ್ಣ!! ನಾನೇ ಈಗ ನಿಮಗೆ ಫೋನ್ ಮಾಡುವವನಿದ್ದೆ ನೋಡಿ. ಒಂದು ಮುಖ್ಯವಾದ ವಿಷಯ. ಈಗ ಅರ್ಧ ಘಂಟೆಗೆ ಮೊದಲು ನಮ್ಮ ಇಬ್ಬರು ಹುಡುಗೀರು ಬಂದು ಕಾಫಿ ಕುಡಿಯುತ್ತಿದ್ದರು. ಅವರು ಬಂದ ಐದು ನಿಮಿಷಕ್ಕೆ ಅವರು ಇಬ್ಬರು ಬಂದರು. ಬೇರೆ ಬೇರೇನೆ ಕುಳಿತಿದ್ದರು. ಅವರಿಬ್ಬರೂ ನಂತರ ನಮ್ಮವರ ಬಳಿಗೆ ಬಂದು ಏನೋ ಗುಸುಗುಸು ಮಾತನಾಡಿ ತಮ್ಮ ಜೊತೇಲೇ ಕರೆದುಕೊಂಡು ಹೋಗಿಬಿಡೋದಾ?!! ನಾನಿವತ್ತು ಒಬ್ಬನೇ ಬೇರೆ ಇದ್ದೆ. ಇಲ್ಲಾಂದ್ರೆ ಇಲ್ಲೇ ಹಿಡಿದುಹಾಕಿಬಿಡ್ತಿದ್ದೆ."

"ಇರಲಿ ಇರಲಿ. ಯಾವ ಕಡೆ ಹೊರಟರು?"

"ಮೈಸೂರಿನ ಕಡೆಗೆ. ಇನ್ನರ್ಧ ಗಂಟೇಲಿ ನಿಮ್ಮ ಊರಿನ ಬಳಿ ಬರ್ತಾರೆ."

"ಯಾವ ಗಾಡಿ?"

"ಮಾರುತಿ ಆಮ್ನಿ, ಬಿಳಿ ಬಣ್ಣದ ಗಾಡಿ. ಕೇರಳ ರಿಜಿಸ್ಟ್ರೇಶನ್ನು."

"ನಾವು ವಿಚಾರಿಸ್ತೀವಿ ಬಿಡು. ನಿನಗೆ ನಂತರ ಫೋನ್ ಮಾಡ್ತೀನಿ. ನಾಳೆ ಮೀಟಿಂಗಿದೆ."

****

ಅದೇ ರಾತ್ರಿ ಪೊಲೀಸ್ ಠಾಣೆಯಲ್ಲಿ

ಒಳಗೇನು ನಡೀತು, ಹೊರಗೇನು ನಡೀತು ಅನ್ನೋದು ಸರಿಯಾಗಿ ಯಾರಿಗೂ ತಿಳಿದಿಲ್ಲ, ಬಹುಶಃ ಪೊಲೀಸರಿಗೂ!!

"ಅವರೆಲ್ಲ ಕಳ್ಳರು. ನಾವು ನೋಡ್ಕೋತೀವಿ ಬಿಡಿ" ಅಂತ ಪೊಲೀಸರು; "ಇಲ್ಲ, ಇದು ಮತ್ತೊಂದು ಲವ್ ಜಿಹಾದ್ ಕೇಸು. ಬಸ್ಸಿನಲ್ಲಿ ಕಾಲೇಜು ಹುಡುಗರು ಲವ್ ಜಿಹಾದ್ ಮಾಡಿದ್ರೆ ಇಲ್ಲಿ ಇವರು. ನಮ್ಮ ಹುಡುಗರಿಗೆ ಅವರ ಬಸ್ಸಿನಲ್ಲಿ ರಕ್ತ ಬರೋ ರೀತಿ ಹೊಡೆದರೂ ನಾವು ಸುಮ್ಮನಿರಬೇಕಾ?" ಅಂತ ಸಂಘದವರು.

ಮಾತಿಗೆ ಮಾತು ಬೆಳೀತು. ಯಾರಲ್ಲೂ ತಾಳ್ಮೆಯಿರಲಿಲ್ಲ. ಮೈಸೂರಿನಲ್ಲಿ ಕೈಸೇರುತ್ತಿದ್ದ ಹಣವನ್ನು ನೆನೆಯುತ್ತಾ ನಾಲ್ವರು ಕಳ್ಳರು ಠಾಣೆಯೊಳಗೆ ಸೊಳ್ಳೆ ಹೊಡೆಯುತ್ತಿದ್ದರು.

ಮಾತು ಮಾತಲ್ಲೇ ಉಳಿಯಲಿಲ್ಲ.

ಯಾರೋ ಠಾಣೆಯೆಡೆಗೆ ಕಲ್ಲೆಸೆದರು. ಮತ್ಯಾರೋ ಚಪ್ಪಲಿ ತೂರಿದರು. ಮರುಕ್ಷಣ ಎತ್ತನೋಡಿದರತ್ತ ಪೊಲೀಸರ ಲಾಠಿ ರೊಯ್ಯನೆ ಬೀಸಲಾರಂಭಿಸಿತು.

ನಗರ ಉದ್ವಿಗ್ನ; ನಿಷೇಧಾಜ್ಞೆ ಜಾರಿ.

****

ಕೊನೆಗೆ

ಪ್ರತಿಭಟನಾ ಸಭೆ. ಒಂದೆರಡು ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಬಲವಂತವಾಗಿ ಕರೆತಂದು ಕೂರಿಸಿದ ಪರಿಣಾಮ ಸಭೆ 'ಬೃಹತ್ತಾಗಿತ್ತು'. ಪೊಲೀಸರಿಗೆ, ಅವರಿಗೆ, ಇವರಿಗೆ ಎಲ್ಲರಿಗೂ ಉಗಿದು ಉಪ್ಪಿನಕಾಯಿ ಹಾಕಿ ಕೊನೆಯಲ್ಲಿ ಬಾಯಿಗೆ ಕಪ್ಪು ಬಟ್ಟೆ ಸುತ್ತಿಕೊಂಡು ಮುಖ್ಯರಸ್ತೆಯಲ್ಲಿ ಮೆರವಣಿಗೆ ಹೊರಟರು. ಅಂದು ಶುಕ್ರವಾರವಾದ್ದರಿಂದ ಮೆರವಣಿಗೆ ಮಸೀದಿಯ ಕಡೆಗೇ ಹೆಜ್ಜೆ ಹಾಕಿದ್ದು ಕೇವಲ ಆಕಸ್ಮಿಕವಷ್ಟೆ! ಹೆಚ್ಚು ಅರ್ಥ ಕಲ್ಪಿಸುವ ಬುದ್ಧಿಜೀವಿಗಳ ಬುದ್ಧಿ ನಮಗೆ ಖಂಡಿತ ಬೇಡ.

****

ಬಸ್ಸಿನಲ್ಲಿ

"ನೋಡೋ ರಫೀಕ್. ಇವತ್ತು ನಮ್ಮಣ್ಣನ ಮೊಬೈಲ್ ತಂದಿದ್ದೀನಿ. ಟಚ್ ಸ್ಕ್ರೀನ್ನೂ" ಗಣೇಶ ಜೇಬಿನಿಂದ ಮೊಬೈಲಿನ ಚೂರೇ ಚೂರು ದರ್ಶನ ಮಾಡಿಸಿ ಒಳಗೆ ಸೇರಿಸಿದ. ರಫೀಕನ ಕಣ್ಣಲ್ಲಿ ಆಸೆ ನೀರೂರಿತು. "ಲೋ ನಿಮ್ಮಣ್ಣನಿಗೆ ಗೊತ್ತಾದರೆ?"

"ಅಣ್ಣನಿಗೆ ಜ್ವರ ಬಂದು ಮಲಗಿದ್ದ. ಎತ್ತುಕೊಂಡು ಬಂದ್ಬಿಟ್ಟೆ. ಗೊತ್ತಾದ ಮೇಲೆ ನೋಡಿಕೊಂಡರಾಯಿತು ಬಿಡು."

"ತೋರಿಸೋ ಮೊಬೈಲ್ನಾ..."

"ಹೋಗಲೇ! ನಿನ್ನೆ ನನಗೆ ಹೊಡೆಯಕ್ಕೆ ಬಂದೆ. ಮೊಬೈಲೂ ತೋರಿಸಲ್ಲ ಏನೂ ತೋರಿಸಲ್ಲ."

"ಲೋ ಗಣೇಶಾ! ಇಷ್ಟೆಯೇನೋ ಫ್ರೆಂಡ್‌ಶಿಪ್ಪೂ? ನಿನ್ನ ಶರ್ಟಿನ ಗುಂಡಿ ನಾನೇ ಹೊಲೆದುಕೊಡ್ತೀನಿ. ಪ್ಲೀಸ್ ತೋರಿಸೋ."

ಗಣೇಶ ಕಣ್ಣುಮುಚ್ಚಿ ಗಹನವಾಗಿ ಯೋಚಿಸಿ ಕಣ್ತೆರೆದು "ಸರಿ. ತೋರಿಸ್ತೀನಿ. ನಮ್ಮ ಮನೆಯವರಿಗೆ ಹೇಳಬಾರದು ನೀನು." ರಫೀಕ್ ತಲೆಯಾಡಿಸಿದ. ಮೊಬೈಲನ್ನು ಕೈಯಲ್ಲಿ ಹಿಡಿದು "ಯಾವ ಗೇಮಿದೆಯೋ ಇದರಲ್ಲಿ?" ಎಂದು ಕೇಳಿದ.

"ಕಾರ್ ರೇಸಿದೆ. ಬೊಂಬಾಟಾಗಿದೆ. ಆಡ್ತಿಯಾ?"

"ಹ್ಞೂ ಹ್ಞೂ" ಕಣ್ಣರಳಿಸಿದ.

"ಒಂದೇ ಒಂದು ಸಲ. ಜಾಸ್ತಿ ಕೇಳಬಾರದು."

"ಸರಿ ಕಣೋ. ಒಂದೇ ಸಲ. ವಾಪಸ್ಸು ಕೊಟ್ಟಿಡ್ತೀನಿ." ರಫೀಕ ಕಾರ್ ರೇಸನ್ನು ಶುರುಮಾಡುತ್ತಿದ್ದಂತೆ ಚಲಿಸುತ್ತಿದ್ದ ಬಸ್ಸು ಮೆರವಣಿಗೆಯ ಕಾರಣದಿಂದ ಸ್ತಬ್ಧವಾಯಿತು. ಕತ್ತು ಮೇಲೆತ್ತಿ ನೋಡುತ್ತಾ "ಏನಾಯ್ತೋ ಗಣೇಶಾ? ಬಸ್ಯಾಕೆ ನಿಂತೋಯ್ತು?"

"ಏನೋ ಗೊತ್ತಿಲ್ಲಪ್ಪ! ಜನ ಅಷ್ಟೊಂದು ಇರೋದು ನೋಡಿದ್ರೆ ಏನೋ ಸ್ಟ್ರೈಕಿರಬೇಕು. ಲೇ ಲೇ ಕಾರು ಎತ್ತೆತ್ತಲೋ ಹೋಗ್ತಿದೆ. ಸರಿಯಾಗಿ ನೋಡ್ಕೊಂಡು ಆಡು. ಇಲ್ಲಾಂದ್ರೆ ವಾಪಸ್ಸು ಕೊಡು." ಮೊಬೈಲಿನ ಕಡೆಗೆ ನೋಡುತ್ತಾ ರೇಗಿದ ಗಣೇಶ....

❖

...ಯುಗಳು

• ಡಾ.ಪಿ.ರವೀಂದ್ರನಾಥ್
ಮೈಸೂರು

ಸಾಂಚೀ ಸ್ತೂಪ
...ರೂಪ ಭೂತಕಾಲ ಸಂಧಿಸುತ್ತದೆ
ಕಡುಗೆಂಪು ಪಲಾಶ್‌ಹೂಗಳ ವರ್ತಮಾನ
[ಪಲಾಶ್-ಫಾರೆಸ್ಟ್ ಫ್ಲೈಮ್ (ಮುತ್ತುಗ)ಹೂ,
ಸಾಂಚೀಸ್ತೂಪದ ಸುತ್ತಲೂ ಇವೆ]

ಬಿಳಿ ಬೆರಳುಗಳ ಮಧ್ಯೆ
ಕಪ್ಪು ಇರುವೆ
ಸಾಯುವುದೇ? ಬದುಕುವುದೇ?
****
ಮೊರದಲ್ಲಿಟ್ಟು ತೂರುತ್ತಿದ್ದಾಳೆ
ಮಾತು
ಹಾರಿಹೋಗುತ್ತಿವೆ
****
ಈ ಬಿದಿರ ಮೆಳೆಯಲ್ಲಿ
ಬಿದಿರಾಗಬೇಕು
ಕೊಳಲಾಗುವ ಮೊದಲು
(ಝೆನ್ ಕಥೆ ಸ್ಫೂರ್ತಿ)
****




ಪುಟ್ಟ ಹೂಗಳು ಅರಳಿವೆ
ಸಾವಿನಂತೆಯೇ ಖಚಿತ
ಈ ಬದುಕು
****
ಎಲೆ ಉದುರಿ ಚಿಟ್ಟೆ ಹಾರಿ
ನೋಟ ಚದುರುತ್ತದೆ
ವಿಶ್ವದ ಉಗಮ ಹೀಗೆ...
****
ಒಂದು ಖುಷಿಯ ವಿಷಯ
ನಾನು ಮತ್ತೊಮ್ಮೆ ನೋಡಿದೆ
ಬೆಳಗಿನ ಸೂರ್ಯ
****



ಇದ್ದಿಲು
ಅವಳ ಕಣ್ಣೀರಿನಲ್ಲಿ ಅದ್ದಿ ತೆಗೆದ
ನಕ್ಷತ್ರ
****
ಹರಡಿಕೊಂಡ ಹೂವುಗಳು
ಅಂತ್ಯ ಕಂಡವೆ?
ಮೂಲೆಯಲ್ಲಿ
****
ನೆನಪಿನಲ್ಲುಳಿಯಿತು
ನೆಲಕ್ಕೆ ಬಿದ್ದ
ಕೊನೆಯ ಸೇಬಿನ ಚೂರು
****

ಸುತ್ತಿಕೊಳ್ಳುತ್ತಿದೆ ಬಳ್ಳಿ
ನಿರ್ಜೀವ ಕಂಬದಲ್ಲಿ
ಸಂಚರಿಸುತ್ತದೆ ಜೀವ
****
ಮಿತ್ರನ ಜೊತೆ
ತತ್ವಶಾಸ್ತ್ರ
ಚಿಟ್ಟೆ ಹಾರುತ್ತಿದೆ.



ಮಾಲತಿಯ ಲವ್ ಸ್ಟೋರಿ

ನನ್ನ ಪ್ರಮುಖ ಗ್ರಾಹಕರಲ್ಲಿ ಒಡೆಯರ್ ಫ್ಯಾಮಿಲಿಯವರೂ ಇದ್ದರು. ತುಂಬಾ ಜನರಿದ್ದ ಫ್ಯಾಮಿಲಿ ಅವರದ್ದಾಗಿದ್ದರಿಂದ ಆ ಫ್ಯಾಮಿಲಿಯವರು ಬಂದಾಗಲೆಲ್ಲ 20ರಿಂದ 30 ಸೀರೆಗಳನ್ನು ಒಮ್ಮೆಗೆ ಖರೀದಿಸುತ್ತಿದ್ದರು. ಆದ್ದರಿಂದ ಒಡೆಯರ್ ಫ್ಯಾಮಿಲಿಯ ಲಕ್ಷ್ಮಿದೇವಮ್ಮ ಎಂಬುವವರು ಬಂದಾಗಲೆಲ್ಲ ನನಗೆ ಒಳ್ಳೆಯ ವ್ಯಾಪಾರವಾಗುತ್ತಿತ್ತು.

ಒಮ್ಮೆ ಲಕ್ಷ್ಮಿದೇವಮ್ಮನವರು ನನ್ನ ಅಂಗಡಿಗೆ ಬಂದವರೇ "ನಿಮ್ಮ ಯಜಮಾನರಿಗೆ ಬರೀ ಒಡೆಯರುಗಳಿಗೆ ಬಯ್ಯುವುದೇ ಕೆಲಸಾನ?" ಎಂದು ಕೇಳಿದರು. ಅದಕ್ಕೆ ನಾನು "ಸೀರೆಗಳ ಬಗ್ಗೆ ನನ್ನನ್ನು ಏನು ಬೇಕಾದರೂ ಕೇಳಿ, ಹೇಳುತ್ತೇನೆ. ಆದರೆ ಪೇಪರ್ ಬಗ್ಗೆ ಕೇಳಬೇಕಿದ್ದರೆ ನನ್ನ ಜೊತೆ ಬನ್ನಿ, ಅವರ ಆಫೀಸ್‌ಗೆ ಕರೆದುಕೊಂಡು ಹೋಗುತ್ತೇನೆ. ಅವರೊಂದಿಗೆ ನೀವೇ ಮಾತಾಡಿ" ಎಂದೆ. ಆಗ ಅವರು ನಕ್ಕು ಸುಮ್ಮನಾದರು.

ಲಕ್ಷ್ಮಿದೇವಮ್ಮನವರು ತಮ್ಮ ಮನೆಯ ಫಂಕ್ಷನ್‌ಗಳಿಗೆ ನನ್ನನ್ನು ಆಹ್ವಾನಿಸುತ್ತಿದ್ದರು. ಆದರೆ ನಾನು ಒಮ್ಮೆಯೂ ಅಂತಹ ಕಾರ್ಯಕ್ರಮಗಳಿಗೆ ಹೋಗಿರಲಿಲ್ಲ. ಒಂದು ದಿನ ಲಕ್ಷ್ಮಿದೇವಮ್ಮನವರು "ನೀವು ಈ ಸಾರಿ ನಮ್ಮ ಫಂಕ್ಷನ್‌ಗೆ ಬರದಿದ್ದರೆ ನಿಮ್ಮಿಂದ ಸೀರೆ ಖರೀದಿಸಲು ನಾನು ಇನ್ನು ಮುಂದೆ ನಿಮ್ಮ ಅಂಗಡಿಗೆ ಬರುವುದಿಲ್ಲ" ಎಂದರು. ಅಂಥ ಗ್ರಾಹಕರನ್ನು ಕಳೆದುಕೊಳ್ಳುವುದು ವ್ಯಾಪಾರದಲ್ಲಿರುವವರಿಗೆ ಸಾಧ್ಯವಿಲ್ಲ. ಸರಿ ಎಂದು ನಾನು ಅವರ ಮನೆಯ ಫಂಕ್ಷನ್‌ಗೆ ಹೋದೆ. ಅದು ಮದುವೆಯ ರಿಸೆಪ್ಷನ್. ಅಲ್ಲಿದ್ದ ಒಬ್ಬೊಬ್ಬರ ಮೈ ಮೇಲೂ ಚಿನ್ನದ ಗಣಿಯೇ ಇದೆಯೇನೋ ಎನ್ನುವಂತಿತ್ತು. ಆ ಡಾಬು, ವಂಕಿ, ಸರಗಳು ಕಣ್ಣು ಕುಕ್ಕುತ್ತಿದ್ದವು.

ಊಟಕ್ಕೆ ಕೂತಾಗ ಅತಿಥಿಗಳು ಯಾವ ಡ್ರಿಂಕ್ಸ್ ಕುಡಿಯುತ್ತಾರೋ ಅದಕ್ಕೆ ತಕ್ಕಂತಹ ಗ್ಲಾಸ್‌ಗಳನ್ನು ಅತಿಥಿಗಳ ಮುಂದೆ ಟೇಬಲ್ ಮೇಲೆ ಇಡಲಾರಂಭಿಸಿದರು. ನನಗೆ ಈ ವಿಷಯ ಹೊಸದು. ನಾನು ಜ್ಯೂಸ್ ಮಾತ್ರ ತೆಗೆದುಕೊಂಡೆ. ಆದರೆ ಅತಿಥಿಗಳಲ್ಲಿ ಬಹಳಷ್ಟು ಜನ ಡ್ರಿಂಕ್ಸ್ ತೆಗೆದುಕೊಳ್ಳುತ್ತಿದ್ದರು. ಅತಿಥಿಗಳು ಊಟ ಮಾಡುತ್ತಿದ್ದಾಗ ಒಡೆಯರ್ ಫ್ಯಾಮಿಲಿಯವರು ಪ್ರತಿಯೊಬ್ಬರ ಬೇಕುಬೇಡಗಳನ್ನು ವಿಚಾರಿಸಿಕೊಳ್ಳುತ್ತಿದ್ದರು. ಅಷ್ಟೊಂದು ಜನರಿದ್ದರೂ ಅಲ್ಲಿ ಸ್ವಲ್ಪವೂ ಗಲಾಟೆ ಇರಲಿಲ್ಲ. ಅತಿಥಿಗಳನ್ನು ನೋಡಿಕೊಳ್ಳುವ ರೀತಿಯನ್ನು ಅವರಿಂದ ಕಲಿಯಬೇಕು ಎಂದುಕೊಂಡೆ.

ಒಮ್ಮೆ ನನ್ನ ಅಂಗಡಿ ಓನರ್ ಆರಾಧ್ಯ ಅವರ ಬಗ್ಗೆ ಲಂಕೇಶ್ ಪತ್ರಿಕೆಯಲ್ಲಿ ವರದಿಯೊಂದು ಪ್ರಕಟಗೊಂಡಿತ್ತು. ಅವತ್ತು ನನ್ನ ಅಂಗಡಿಗೆ ಬಂದ ಆರಾಧ್ಯರು ನನ್ನ ಮುಂದೆ ಕೂತು "ನೋಡಿ, ನಿಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ, ಹಾಗೆ ಬರೆದಿದ್ದಾರೆ" ಅಂತ ಕೊರೆಯಲಾರಂಭಿಸಿದರು. ಎಷ್ಟು ಹೊತ್ತಾದರೂ ಅವರು ಏಳುತ್ತಲೇ ಇಲ್ಲ. ನನಗೋ ಪ್ರಾಣಸಂಕಟವಾಗುತ್ತಿತ್ತು. ಇನ್ನೂ ಅದೆಷ್ಟೋ ಜನ "ಇದು ಲಂಕೇಶ್ ಅವರ ಅಂಗಡಿ ಅಲ್ವಾ? ಅವರೆಲ್ಲಿದ್ದಾರೆ?" ಎಂದು ಕೇಳಿಕೊಂಡು ಬರುತ್ತಿದ್ದರು.

ಒಂದು ಸಾರಿ ಕನ್ನಡ ರಾಜ್ಯೋತ್ಸವಕ್ಕೆ ಹಣ ಕೇಳಿಕೊಂಡು ಸುಮಾರು 20 ಜನರಿದ್ದ ಗುಂಪೊಂದು ನನ್ನ ಅಂಗಡಿಗೆ ಬಂತು. ನಾನು ನೂರು ರೂಪಾಯಿ ಕೊಡಲು ಮುಂದಾದೆ. ಅದಕ್ಕೆ ಅವರು "ಏನು? ಬರೀ ನೂರು ರೂಪಾಯಿ?" ಎಂದು ಗಲಾಟೆ ಶುರು ಮಾಡಿದರು. "ನಾನು ಇಷ್ಟೇ ಕೊಡುವುದು. ಬೇಕಾದರೆ ತೆಗೆದುಕೊಳ್ಳಿ ಇಲ್ಲವಾದರೆ ಆಚೆ ಹೋಗಿ. ಗಲಾಟೆ ಮಾಡಿದರೆ ಹಣ ಕೊಡುವುದಿಲ್ಲ" ಎಂದೆ. ಆ ಗುಂಪಿನಲ್ಲಿದ್ದ ಒಬ್ಬ "ಅಂಗಡಿಯ ಗಾಜು ಚೆನ್ನಾಗಿದೆ. ಕಲ್ಲು ತಗೊಂಡು ಹೊಡೆದರೆ ಗೊತ್ತಾಗುತ್ತೆ" ಎಂದ. ಅದೇ ಹೊತ್ತಿಗೆ ನನ್ನ ತಮ್ಮ ಶಿವಕುಮಾರ್ ಬ್ಯಾಂಕ್‌ನಿಂದ ಬಂದ. ಗುಂಪಿನ ಮಾತು ಕೇಳಿಸಿಕೊಂಡ ಶಿವು "ಹೊಡಿತೀರಾ? ಹೊಡಿಯಿರಿ. ನಾನು ಪೊಲೀಸ್ ಕಂಪ್ಲೇಂಟ್ ಕೊಡಲ್ಲ, ನಿಮ್ಮನ್ನು ಏನೂ ಕೇಳುವುದಿಲ್ಲ, ಹೊಡೆದು ನಿಮ್ಮ ಪಾಡಿಗೆ ನೀವು ಹೋಗಬಹುದು" ಅಂತ ಅವರ ಕೈಗೆ ಕಲ್ಲು ಕೊಟ್ಟ. ಆ ಹುಡುಗರು ತಬ್ಬಿಬ್ಬಾದರು. ಪ್ರಾಯಶಃ ಅಜಾನುಬಾಹುವಾದ ನನ್ನ ತಮ್ಮನನ್ನು ನೋಡಿ ಅವರಿಗೆ ಹೆದರಿಕೆ ಆಗಿತ್ತು.

ನನ್ನ ಅಂಗಡಿ ಪಕ್ಕದಲ್ಲೇ ದಿನಕರ ಹೊಸ ಅಂಗಡಿ ತೆರೆದ. ಯಾರೋ ಮಿನಿಸ್ಟರ್ ಒಬ್ಬರ ಪಿ.ಎ. ಅವನ ಅಂಗಡಿಯಲ್ಲಿ ಬಂಡವಾಳ ಹೂಡಿದ್ದರಂತೆ. ನನ್ನ ಅಂಗಡಿಗೆ ಬಂದ ಗ್ರಾಹಕರನ್ನೆಲ್ಲ ದಿನಕರ ಆಚೆನೇ ನಿಲ್ಲಿಸಿ, ಅವರನ್ನು ಮಾತನಾಡಿಸಿ ತನ್ನ ಅಂಗಡಿಗೆ ಕರೆದುಕೊಂಡು ಹೋಗುತ್ತಿದ್ದ. ಅಷ್ಟೇ ಅಲ್ಲ, ತನ್ನ ಅಂಗಡಿಗೆ ಬಂದವರಿಗೆ ಫ್ರೆಶ್ ಜ್ಯೂಸ್ ಕೊಡಿಸುತ್ತಿದ್ದ. ಇದೆಲ್ಲದರಿಂದಾಗಿ ಒಂದೆರಡು ತಿಂಗಳು ನನ್ನ ಅಂಗಡಿಯಲ್ಲಿ ವ್ಯಾಪಾರ ಡಲ್ ಆಯಿತು. ಆದರೆ ಆ ನಂತರ ಯಥಾಪ್ರಕಾರ ನನ್ನ ಗ್ರಾಹಕರು ನನ್ನ ಅಂಗಡಿಗೆ ವಾಪಸ್ ಬಂದರು.

ಒಮ್ಮೆ ನನ್ನ ಅಂಗಡಿಯ ಶಟ್ಟರ್ ಮುಂದೆ ಯಾರೋ ಉಚ್ಚೆ ಮಾಡಿ ಹೋಗಿದ್ದರು. ಇನ್ನೊಮ್ಮೆ ನಿಂಬೆಹಣ್ಣು ಮತ್ತು ಕುಂಕುಮ ಇಟ್ಟಿದ್ದರು. ನನಗಿಂತ ಮುಂಚೆ ಅಂಗಡಿಯ ಮುಂದೆ ಹಾಜರಾಗಿದ್ದ ಅಂಗಡಿ ಹುಡುಗಿಯರು ಅದನ್ನು ಸುಮ್ಮನೆ ನೋಡುತ್ತಾ ನಿಂತಿದ್ದರು. ನಾನು ಹೋದವಳೇ ನಿಂಬೆಹಣ್ಣನ್ನು ನನ್ನ ಕೈಯಿಂದ ಎತ್ತಿ ಆಚೆ ಬಿಸಾಡಿದೆ, ಅಂಗಡಿ ಬಾಗಿಲನ್ನು ತೆರೆದು ಒಳಗೆ ಹೋದೆ. ಮಾಟಮಂತ್ರ ಮಾಡಿದ್ದ ಆ ನಿಂಬೆಹಣ್ಣನ್ನು ನಾನು ಮುಟ್ಟಿದ್ದಕ್ಕೆ ನನಗೆ ಏನಾದರೂ ಆದರೆ! ಎಂದು ನನ್ನ ಹುಡುಗಿಯರಿಗೆ ಭಯ. ಅದನ್ನು ನೋಡಿ "ನನಗೆ ಏನಾದರೂ ಆಗುವುದಿದ್ದರೆ ಅದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಒಳ್ಳೆಯದಾಗಲಿ, ಕೆಟ್ಟದಾಗಲಿ ಅದೆಲ್ಲ ಇಂತಹ ಮಾಟಮಂತ್ರದಿಂದ ಆಗುವುದಿಲ್ಲ ಎಂದು ನಂಬಿರುವವಳು ನಾನು" ಎಂದು ಅವರಿಗೆ ಹೇಳಿದೆ.


ಒಮ್ಮೆ ಸೀರೆ ಖರೀದಿಸಲು ಚಿಕ್ಕಪೇಟೆಗೆ ಹೋಗಿದ್ದಾಗ ಅಂಗಡಿ ತೆಗೆಯುವ ಹೊತ್ತಿಗೆ ವಾಪಸ್ ಬರಲು ಆಟೋಗೆ ಕಾಯುತ್ತಿದ್ದೆ. ಅವಿನ್ಯೂ ರೋಡ್‌ನಲ್ಲಿ ಆಟೋ ಸಿಗುವುದೇ ಕಷ್ಟ. ಅಂತಹದ್ದರಲ್ಲಿ ಒಬ್ಬ ಮನುಷ್ಯ ನನ್ನನ್ನು ನೂಕಿ ನಾನು ಹಿಡಿದಿದ್ದ ಆಟೋ ಹತ್ತಿದ. ನಾನು ಅವನೊಂದಿಗೆ ಜಗಳ ತೆಗೆದೆ. ಆಗ ಆ ಮನುಷ್ಯ "ಏನಮ್ಮ, ಹೆಣ್ಣಾಗಿ ಹೀಗೆ ಜಗಳ ಆಡುತ್ತೀಯಾ?" ಅಂದ. "ಗಂಡಾದ ನೀನು ನನ್ನನ್ನು ನೂಕಿ ಆಟೋ ಹತ್ತಿದ್ದಕ್ಕೆ ನಿನಗೆ ನಾಚಿಕೆ ಆಗಬೇಕು" ಎಂದೆ. ನಾನು ಹಟ ಬಿಡದೆ ಅವನನ್ನು ಆಟೋದಿಂದ ಇಳಿಸಿ ಅಂಗಡಿಗೆ ಬಂದೆ.

ಇದು ಹೀಗೇ ಮುಂದುವರೆದರೆ ಸಾಧ್ಯವಾಗುವುದಿಲ್ಲ ಎಂದುಕೊಂಡು ಒಂದು ಸ್ಕೂಟರ್ ಖರೀದಿಸಿದೆ. ಆಗ ಈಗಿನಂತೆ ಲೈಟ್‌ವೇಯ್ಟ್ ಸ್ಕೂಟರ್‌ಗಳು ಇರಲಿಲ್ಲ. ಬಜಾಜ್ ಕಂಪನಿ ತಯಾರಿಸುತ್ತಿದ್ದ ಪ್ರಿಯಾ ಸ್ಕೂಟರ್‌ಗೆ ಗೇರುಗಳಿದ್ದವು ಮತ್ತು ಸ್ಕೂಟರ್ ತುಂಬಾ ಭಾರವಾಗಿತ್ತು. ಹೇಗಿದ್ದರೂ ಚಿಕ್ಕವಳಾಗಿದ್ದಾಗ ಸೈಕಲ್ ಕಲಿತಿದ್ದರಿಂದ ಕೆಲವೇ ದಿನಗಳಲ್ಲಿ ಸ್ಕೂಟರ್ ಓಡಿಸುವುದನ್ನು ರೂಢಿಮಾಡಿಕೊಂಡೆ.

ನಾನು ಅಂಗಡಿಗೆ ಸ್ಕೂಟರ್‌ನಲ್ಲಿ ಬರುತ್ತಿರುವುದನ್ನು ನೋಡಿದ ಗೌರಿಯ ಸ್ನೇಹಿತನೊಬ್ಬ "ದಾರಕ್ಕೆ ಭಾರ ಇರುವ ಹೆಂಗಸು ಸ್ಕೂಟರ್ ಓಡಿಸುತ್ತಿರುವುದನ್ನು ನಾನು ಇದೇ ಫಸ್ಟ್ ಟೈಮ್ ನೋಡುತ್ತಿರುವುದು" ಎಂದನಂತೆ. (ದಾರ ಅಂದರೆ ಬ್ರಾಹ್ಮಣರ ಜನಿವಾರ. ದಾರಕ್ಕೆ ಭಾರ ಅಂದರೆ ಲಿಂಗಾಯತರು). ಹೌದು, ಬೆಂಗಳೂರಿನಲ್ಲಿ ಸ್ಕೂಟರ್ ಡ್ರೈವ್ ಮಾಡಿದ ಪ್ರಥಮ ಮಹಿಳೆ ನಾನು. (ಆಗ ಉತ್ತರ ಭಾರತದಿಂದ ಬಂದಿದ್ದ ಮೆಡಿಕಲ್ ಸ್ಟೂಡೆಂಟ್ ಒಬ್ಬಾಕೆ ಮೋಟರ್‌ಬೈಕ್ ಓಡಿಸುತ್ತಿದ್ದಳು).


ನನ್ನ ಅಂಗಡಿಯ ಲೆಕ್ಕ ಬರೆಯಲಿಕ್ಕೆ ಲಕ್ಷ್ಮೀಶ ಎಂಬುವವರನ್ನು ನೇಮಿಸಿದ್ದೆ. ಆದರೆ ಆಗ ಆತ ಲಾ ಕಾಲೇಜಿನಲ್ಲಿ ಸಂಜೆ ಓದುತ್ತಿದ್ದರಿಂದ ಅಂಗಡಿಗೆ ಸರಿಯಾಗಿ ಬರುತ್ತಿರಲಿಲ್ಲ. ನಾನು ಬೈದರೆ ಬೈಸಿಕೊಳ್ಳುತ್ತಿದ್ದ. ಒಮ್ಮೆ "ನನಗೆ ಲೆಕ್ಕ ಬರೆಯಲು ಹೇಳಿಕೊಡು. ನಾನೇ ಬರೆಯುತ್ತೇನೆ" ಎಂದೆ. ಆ ಯುವಕ ಲೆಕ್ಕ ಬರೆಯುವುದನ್ನು ನನಗೆ ಹೇಳಿಕೊಟ್ಟ. ಅಂದಿನಿಂದ ನಾನೇ ಅಂಗಡಿಯ ಲೆಕ್ಕ ಬರೆಯಲಾರಂಭಿಸಿದೆ.

ಸಿಟಿಓ ಆಫೀಸ್‌ಗೆ ನಾನೇ ಹೋಗುತ್ತಿದ್ದೆ. ಆ ಕಚೇರಿಯಲ್ಲಿದ್ದ ಎಲ್ಲರೂ ನಾನು ಲಂಕೇಶ್ ಅವರ ಹೆಂಡತಿ ಎಂದು ನನ್ನನ್ನು ತುಂಬಾ ಕಾಳಜಿಯಿಂದ ಮಾತಾಡಿಸುತ್ತಿದ್ದರು. ನನ್ನಿಂದ ಲಂಚ ಕೇಳಲು ಹೆದರುತ್ತಿದ್ದರು. ಆದರೂ ಒಬ್ಬ ನನ್ನಿಂದ ಲಂಚ ಕೇಳಿದ. ನಾನು ತೆರಿಗೆ ಸರಿಯಾಗಿ ಕಟ್ಟಿರಲಿಲ್ಲ ಎಂಬ ಕಾರಣಕ್ಕಲ್ಲ, ಬದಲಾಗಿ ನಾನು 'ಸಿಲ್ಕ್ ಟ್ಯಾಕ್ಸ್' ಜಾಸ್ತಿ ಕಟ್ಟಿದ್ದೆ. ಆ ಹಣವನ್ನು ವಾಪಸ್ ನನಗೆ ಕೊಡಲು ಆತ ತುಂಬಾ ಸತಾಯಿಸಿ ಕೊನೆಗೂ ನನ್ನಿಂದ ಹಣ ಪಡೆದು ನನಗೆ ಬರಬೇಕಿದ್ದ ಹಣದ ಚೆಕ್ ಕೊಟ್ಟ. ನಾನು ಈ ವಿಷಯ ಲಂಕೇಶರಿಗೆ ಹೇಳಲಿಲ್ಲ.




ಮಾಲತಿ ಮತ್ತು ಬಾಬು


ಶ್ರೀ ಸರಸ್ವತಿ ವಿದ್ಯಾಮಂದಿರ ಶಾಲೆಯ ಹೆಡ್‌ಮೇಡಂ ಆಗಿದ್ದ ಜಯ ಮತ್ತು ಅವರ ತಂಗಿ ಸತ್ಯ ನನ್ನ ಅಂಗಡಿಯ ಗ್ರಾಹಕರಾಗಿದ್ದರಲ್ಲದೆ ನನ್ನ ಸ್ನೇಹಿತರೂ ಆಗಿದ್ದರು. ಒಮ್ಮೆ ಅವರೊಂದಿಗೆ ಸಿಂಗಾಪೂರ್‌ಗೆ ಹೊರಟೆ. ನಾನು ಅದೇ ಮೊದಲ ಬಾರಿಗೆ ವಿಮಾನದಲ್ಲಿ, ಅದರಲ್ಲೂ ವಿದೇಶಕ್ಕೆ ಹೋದದ್ದು. ವಿಚಿತ್ರವೆಂದರೆ ನಮ್ಮ ಮೂವರು ಮಕ್ಕಳು ಮತ್ತು ನಾನು ಹಲವಾರು ಬಾರಿ ವಿದೇಶಗಳಿಗೆ ಹೋಗಿದ್ದರೂ ನಮ್ಮ ಮನೆಯಲ್ಲಿ ಎಂದೂ ಬೇರೆ ದೇಶಕ್ಕೆ ಹೋಗದೇ ಇದ್ದವರೆಂದರೆ ಲಂಕೇಶರು ಮಾತ್ರ. ಆದರೆ ಅವರಿಗೆ ನಮ್ಮೆಲ್ಲರಿಗಿಂತ ವಿದೇಶಗಳ ಬಗ್ಗೆ ಹೆಚ್ಚು ಅರಿವು ಮತ್ತು ಜ್ಞಾನ ಇತ್ತು.



ವಿಮಾನವನ್ನು ಏರುವ ಮುನ್ನ ವಿಮಾನದಿಂದ ಕೆಳಗೆ ನೋಡಿದರೆ ಹೇಗೆ ಕಾಣುತ್ತೆ, ವಿಮಾನದಲ್ಲಿ ಹಾರುವ ಅನುಭವ ಹೇಗಿರುತ್ತೆ ಎಂದೆಲ್ಲ ತುಂಬಾ ಕುತೂಹಲವಿತ್ತು. ವಿಮಾನಯಾನವು ಥ್ರಿಲ್ಲಿಂಗ್ ಆಗಿತ್ತು. ಆದರೆ ಆನಂತರ ಟ್ರೈನ್ ಪ್ರಯಾಣವೇ ಅದಕ್ಕಿಂತ ಚೆಂದ ಅನ್ನಿಸಿತು. ಯಾಕೆಂದರೆ ಟ್ರೈನ್‌ನಿಂದ ಹೊರಗಿರುವ ಗಿಡ, ಮರ, ಭೂಮಿ, ನದಿ, ತಣ್ಣನೆ ಗಾಳಿ ಎಲ್ಲ ಕಾಣಿಸುತ್ತದೆ. ವಿಮಾನದಲ್ಲಿ ಆ ಸುಖ ಇಲ್ಲ.

ಸಿಂಗಾಪೂರ್, ಬ್ಯಾಂಕಾಂಕ್, ಥೈಲ್ಯಾಂಡ್, ಹಾಂಗ್‌ಕಾಂಗ್ ಎಲ್ಲಾ ಸುತ್ತಾಡಿದೆವು. ಎಲ್ಲ ಜಾಗಗಳು ನನಗೆ ಹೊಸದಾಗಿದ್ದು ನನಗೆ ಚೆನ್ನಾಗಿ ಕಂಡವು. ಟೂರ್ ಮಾಡುತ್ತಲೇ ನನ್ನ ಮಕ್ಕಳಿಗೆ ಬಟ್ಟೆಗಳನ್ನು ಮತ್ತು ನನ್ನ ಮನೆಯವರಿಗೆ (ಬಹಳ ಹಿಂದೆ ಇತರೆ ಮಹಿಳೆಯರಂತೆ ನಾನೂ ಲಂಕೇಶರನ್ನು "ನಮ್ಮ ಯಜಮಾನರು" ಎಂದು ಕರೆಯುತ್ತಿದ್ದೆ. ಆದರೆ ಒಮ್ಮೆ ಗೌರಿ "ನೀನು ನಾಯಿನಾ, ಅಪ್ಪ ನಿನ್ನ ಯಜಮಾನ ಅನ್ನೋದಕ್ಕೆ" ಎಂದು ಕೇಳಿದಳು. ಅವತ್ತಿನಿಂದ ನಾನು ಲಂಕೇಶರನ್ನು "ನಮ್ಮ ಮನೆಯವರು" ಎಂದು ಕರೆಯಲಾರಂಭಿಸಿದೆ) ಶಿವಾಸ್ ರೀಗಲ್ ವಿಸ್ಕಿ ಮತ್ತು ಕನ್ನಡಕದ ಫ್ರೇಮ್ ತಂದೆ. ನನಗೆ ಮತ್ತು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಹುಡುಗಿಯರಿಗೆ ಸೀರೆಗಳನ್ನು ಖರೀದಿಸಿದೆ.





ಬಹಳ ವರ್ಷ ನನ್ನ ಅಂಗಡಿಯಲ್ಲಿ ಕೆಲಸ ಮಾಡಿದ ಹುಡುಗಿಯರನ್ನು ನಾನು ನನ್ನ ಮಕ್ಕಳಂತೆ ಕಾಣುತ್ತಿದ್ದೆ. ಅವರೂ ನನ್ನನ್ನು ಈಗಲೂ ಅಮ್ಮ ಎಂದೇ ಕರೆಯುತ್ತಾರೆ. ಅವರ ಹೆಸರು ಭಾರತಿ, ಮಾಧವಿ, ಮಾಲತಿ, ಸಾವಿತ್ರಿ ಮತ್ತು ಗೀತಾ. ಇವರಲ್ಲಿ ಇಬ್ಬರು ಲವ್ ಮ್ಯಾರೇಜ್ ಮಾಡಿಕೊಂಡರು.

ಒಬ್ಬಳ ಮದುವೆ ಕತೆಯಂತೂ ತುಂಬಾ ಮಜವಾಗಿದೆ. ಅವಳ ಹೆಸರು ಮಾಲತಿ. ಒಕ್ಕಲಿಗರ ಹುಡುಗಿ. ಆಕೆ ಅಂಗಡಿ[ge] ಬರುವಾಗ ಮತ್ತು ಹೋಗುವಾಗ ಒಬ್ಬ ಹುಡುಗ[ನ] ಪರಿಚಯವಾಗಿ ಅವರಿಬ್ಬರ ನಡುವೆ ಲವ್ ಶುರುವಾಯಿತು. ಅವನ ಹೆಸರು ಲೋಕೇಶ್ ಬಾಬು. ನಾಯ್ಡು ಸಮುದಾಯದವನು.

ಇವರಿಬ್ಬರ ಲವ್ ಬಗ್ಗೆ ಮನೆಯವರಿಗೆ ಗೊತ್ತಾದಾ[ಗ] ಹುಡುಗನ ಮನೆಯವರು ಗಲಾಟೆ ಮಾಡಿದರು. ಯಾವುದೇ ಕಾರಣಕ್ಕೂ ಬೇರೆ ಜಾತಿಯ ಹುಡುಗಿಯನ್ನು ತಮ್ಮ ಸೊಸೆಯಾಗಿ ಒಪ್ಪುವುದಿ[ಲ್ಲ] ಎಂದು ಹಠ ಹಿಡಿದರು. ಇದರಿಂದ ನಿರಾಶಳಾ[ದ] ಮಾಲತಿ ಪ್ರತಿದಿನ ಅಂಗಡಿಗೆ ಬಂದು ಕಣ್ಣೀರಿಡು[ತ್ತಿದ್ದಳು]. ಅಷ್ಟೇ ಅಲ್ಲ, "ನಾನು ಸತ್ತು ಹೋಗು[ತ್ತೇನೆ]" ಎಂದೆಲ್ಲಾ ಹೇಳಲಾರಂಭಿಸಿದಳು.

ಆಕಸ್ಮಾತ್ ಆಕೆ ಹಾಗೆ ಮಾಡಿಕೊಂಡರೆ ಗ[ತಿ] ಏನು ಎಂದು ಯೋಚಿಸಿದೆ. ಆಗ ಆ ಹುಡುಗನನ್ನು ಕರೆಸಿ ಆತನೊಂದಿಗೆ ಮಾತನಾಡಿದೆ. ಅವನು "ನಾನೇನು ಮಾಡಲಿ, ನಮ್ಮ ಮನೆಯವ[ರು] ಒಪ್ಪುತ್ತಿಲ್ಲ" ಅಂತ ಗೋಳಾಡಿದ. "ನನ್ನ ಅಪ್ಪ ಅಮ್ಮ ಒಪ್ಪಲಿಲ್ಲ ಅಂತ ಹುಡುಗಿ ಆತ್ಮಹತ್ಯೆ[ಗೆ] ಪ್ರಯತ್ನಿಸಿದ್ದಾಳೆ ಎಂದರೆ ಒಪ್ಪುತ್ತಾರೆ" ಎಂದ.

ಆಗ ನನಗೊಂದು ಯೋಚನೆ ಹೊಳೆಯಿತು. ನಾನು ಮಾಲತಿಗೆ "ಇದೊಂದು ಪ್ರಯತ್ನ ಮಾಡೋಣ. ಆಕಸ್ಮಾತ್ ಆಗಲೂ ಅವನ ಅಪ್ಪ ಅಮ್ಮ ಒಪ್ಪಲಿಲ್ಲ ಅಂದರೆ ನೀನು ಇನ್ನು ಮುಂದೆ ಆ ಹುಡುಗನ ಹೆಸರೆತ್ತಬಾರದು, ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದೆಲ್ಲ ಮಾತನಾಡಬಾರದು" ಎಂದೆ. ಆಕೆ ಅದಕ್ಕೆ ಒಪ್ಪಿದಳು.

ನನಗೆ ಪರಿಚಯವಿದ್ದ ಡಾ. ಪೂರ್ಣಿಮಾ (ಜಿ.ಎಸ್. ಶಿವರುದ್ರಪ್ಪನವರ ಸೊಸೆ) ಅವರಿಗೆ ಮಾಲತಿಯ ಕತೆಯನ್ನೆ[ಲ್ಲ] ವಿವರಿಸಿ "ಸ್ವಲ್ಪ ಹೆಲ್ಪ್ ಮಾಡಿ" ಎಂದು ಕೇಳಿಕೊಂಡೆ. ಅದಕ್ಕೆ ಅವರು ಒಪ್ಪಿಕೊಂಡರು. ಒಂದುದಿನ ಮಾಲತಿ ತನ್ನ ಅಪ್ಪ ಅಮ್ಮನಿ[ಗೆ] "ಇವತ್ತು ಇಂದಿರಾ ಅಮ್ಮನ ಮನೆಯಲ್ಲಿ ಇರುತ್ತೇನೆ" ಎಂದು ಹೇಳಿ ಅಂಗಡಿ ಮುಚ್ಚಿದ ಮೇಲೆ ನನ್ನ ಜೊತೆ ನಮ್ಮ ಮನೆಗೆ ಬಂದಳು.

ರಾತ್ರಿ ಊಟವಾದ ಮೇಲೆ ಆಕೆ[ಗೆ] ಒಂದೆರಡು ನಿದ್ರೆ ಮಾತ್ರೆ ಕೊಟ್ಟು ಮೊದಲೆ[ೇ] ಡಾ. ಪೂರ್ಣಿಮಾ ಅವರು ಸೂಚಿಸಿದ್ದ ನರ್ಸಿಂಗ್ ಹೋಂಗೆ ಆಕೆಯನ್ನು ಕರೆದುಕೊಂಡು ಹೋದೆ. ನರ್ಸಿಂಗ್ ಹೋಂನಲ್ಲಿದ್ದ ಸಿಸ್ಟರ್‌ಗೆ "ಡಾ.ಪೂರ್ಣಿಮಾ ಅವರು ಹೇಳಿದ್ದಾರೆ. ಈಕೆಯನ್ನು ಅಡ್ಮಿಟ್ ಮಾಡಿಕೊಳ್ಳಿ" ಎಂದೆ. ಮಾಲತಿಯನ್ನು ಆಸ್ಪತ್ರೆಗೆ ಸೇರಿಸಿದ್ದಾಯಿತು. ಡಾ. ಪೂರ್ಣಿಮಾ ಅವರು ಸಿಸ್ಟರ್‌ಗೆ ಫೋನ್ ಮಾಡಿ "ಹುಡುಗಿಗೆ ಗ್ಲುಕೋಸ್ ಹಾಕಿರಿ. ನಾನು ಬೆಳಗ್ಗೆ ಬರುತ್ತೇನೆ" ಎಂದರು.

ಪಾಪ, ಆ ಸಿಸ್ಟರ್‌ಗೆ ಏನಾಗುತ್ತಿದೆ ಎಂದು ಅರ್ಥವೇ ಆಗಲಿಲ್ಲ. ಆದರೂ ಮಾಲತಿಗೆ ಗ್ಲುಕೋಸ್ ಬಾಟಲ್ ಅನ್ನು ಹಾಕಿದರು. ನಾನು ಮಾಲತಿಯ ಅಮ್ಮನಿಗೂ, ಹುಡುಗನಿಗೂ ಫೋನ್ ಮಾಡಿ ವಿಷಯ ತಿಳಿಸಿದೆ. ಮಾಲತಿಯ ಅಪ್ಪ ಮತ್ತು ಅಮ್ಮ ಅಳುತ್ತಾ, ಗೋಳಾಡುತ್ತಾ ನರ್ಸಿಂಗ್ ಹೋಂಗೆ ಬಂದರು. "ಯಾಕೆ ಹೀಗೆ ಮಾಡಿಕೊಂಡಳು? ನಿಮ್ಮ ಹೆಸ[ರಿ]ಗೂ ಮಸಿ ಬಳಿಯುತ್ತಿದ್ದಾಳೆ. ನಿಮ್ಮ ಮನೆಗೆ ಬಂದು ಹೀ[ಗೆ] ಮಾಡಿ ನಿಮಗೂ ಕೆಟ್ಟ ಹೆಸರು ತಂದಳು" ಎಂದು ಅವರಿಬ್ಬರೂ ಅಳುತ್ತಿದ್ದರು. ನಾನು ಅವರಿಬ್ಬರಿಗೆ ಮೋ[ಸ] ಮಾಡುತ್ತಿದ್ದೇನೆ ಅಂತ ನನ್ನೊಳಗೇ ಬೇಜಾರಾಯಿತು. ಆದರೂ ಬೇರೆ ದಾರಿ ಇರಲಿಲ್ಲ.

ಹುಡುಗ, ಆತನ ಅಮ್ಮ ಮತ್ತು ಹಲವು ಸಂಬಂಧಿಕರು ನರ್ಸಿಂಗ್ ಹೋಂಗೆ ಬಂದರು. ಹುಡುಗನ ಅಮ್ಮನಂತೂ ನಾನು ಅವರ ಕೈಗೆ ಸಿಕ್ಕರೆ ನನ್ನನ್ನು ಅಲ್ಲೇ ಸಿಗಿದು ಹಾಕು[ವ]ವರಂತೆ ನನ್ನನ್ನು ನೋಡುತ್ತಿದ್ದರು. ಹುಡುಗ ತನ್ನ ಅಮ್ಮನ ವಿರುದ್ಧ ಕೂಗಾಡಿದ. "ಹುಡುಗಿ ಏನಾದರು ಸತ್ತು ಹೋದರೆ ನಾವು ಜೈಲಿಗೆ ಹೋಗಬೇಕಾಗುತ್ತೆ" ಅಂತ ತನ್ನ ಅಮ್ಮನಿ[ಗೆ] ಹೇಳಿದ.

ಹುಡುಗನ ಮನೆಯವರು ಒಪ್ಪಿಕೊಂಡರು. ಅವರಿಬ್ಬರ ಮದುವೆ ತಿರುಪತಿಯಲ್ಲಿ ನಡೆಯಿತು. ಒಂದು ವರ್ಷದ ನಂತರ ಅವರಿಬ್ಬರ ಮನೆಯವರಿಗೂ ನಾವೆಲ್ಲ ಜೊತೆಗೂಡಿ ಆಡಿದ ನಾಟಕದ ಬಗ್ಗೆ ತಿಳಿಯಿತು.

ಈಗ ಮಾಲತಿ ಮತ್ತು ಬಾಬು ಮಗನಿಗೆ 18 ವರ್ಷ ವಯಸ್ಸು. ಅತ್ತೆ, ಮಾವ, ಗಂಡ, ಸೊಸೆ ಎಲ್ಲರೂ ಸಂತೋಷವಾಗಿದ್ದಾರೆ. ಮೂರು ಅಂತಸ್ತಿನ ಮನೆ ಕಟ್ಟಿಸಿದ್ದಾರೆ. ಮಾಲತಿ ಪ್ಲೇ ಹೋಂ ನಡೆಸುತ್ತಿದ್ದಾಳೆ. ಮದುವೆ ಆಗುವಾಗ ಬಿಕಾಂ ಓದಿದ್ದ ಬಾಬು ಆನಂತರ ಎಂಬಿಎ ಮಾಡಿ ಈಗ ಪಿಎಚ್‌ಡಿ ಮಾಡುತ್ತಿದ್ದಾನೆ. ಜೊತೆ ಜೊತೆಗೆ ಕೈತುಂಬ ಸಂಬಳವನ್ನೂ ಪಡೆಯುತ್ತಿದ್ದಾನೆ.

(ಮುಂದುವರೆಯುವುದು)

ಡೂರಪ್ಪ ಕೇಳದ್ರಲ್ಲೂ ನ್ಯಾಯ ಅದೆ ದ್ವಡಪ್ಪ!

ತವಾದ ಕೊರೆ ಬಿಸಿಲಿಗೆ ಎಲ್ಲರೂ ಹೋಟೆಲಿನ ಕುಂತಿದ್ದರು. ಸೀರ ಬೀಡಿ ಎಳೆದು, ಬಾಯಿತುಂಬ ತುಂಬಕೊಂಡು, ಸ್ಪರ್ಧೆ ಊದುವವನಂತೆ ಕೆನ್ನೆ ಮುಕೊಂಡು ಮೂಗಿನಿಂದ ಹೊಗೆ ಬಿಟ್ಟು, ಕಾಂಗ್ರೆಸ್ಸು ಹಾಳು ಬಿದ್ದೋಯ್ತಾ ಅದಂತಲ್ಲ ನಿಜನೇಸ್ಲ ಎಂದ.

ಕಟ್ಟೆಪುರಾಣ

▸ಬಿ. ಚಂದ್ರೇಗೌಡ

ಜಮಾನಿಲ್ಲದ ಮನೆ ಹಾಳಾಗದಿಲವೇನೊ?"

ಜಮಾನ್ತಿ ಅವುಳಲ್ಲ, ಅವುಳೇನು ಮಾಡ್ತ ಅವುಳೆ?" ವುಳು ದೇಶ ನೋಡಿಕತ್ತಳೆ. ಕರ್ನಾಟಕದ ಸುದ್ದಿ ಏ ಅವುಗಳಿಗೇನಾಗಬೇಕು."

ಗರೆ ಕಾಂಗ್ರೆಸ್ಸಿಗೆ ಭಾಳ ಕಷ್ಟ ಇಲ್ಲಿ."

ಷ್ಟವೇಯ. ಲೀಡ್ರುಗಳ್ಯಲ್ಲ ಜಾತಿ ಜನಾಂಗದ ವುರೆ. ಲಿಂಗಾಯಿತ್ರ ಎಡೂರಪ್ಪನ ಹಿಂದೋದ್ರು. ಬಂಗಾರಿ ಹಿಂದವರೆ. ಒಕ್ಕಲಿಗರು ದ್ಯಾವೇಗೌಡನ ವುರೆ. ಇನ್ನ ಶ್ರೀರಾಮುಲು ಒಂದು ಪಾರ್ಟಿ ಶ್ರಿ ನಾಯಕರ್‍ಯಲ್ಲ ಅವುನಿಂದೆ ಹೊಯ್ತರೆ. ಶ್ವರನಿಂದೆ ಹರಿಜನರೋಯ್ತರೆ. ಕುರುಬರ್‍ಯಲ್ಲ ಯ್ಯನೆ ನಮ್ಮ ಲೀಡ್ರು ಅಂತ ಕುಂತವುರೆ. ಹಿಂಗಾದ್ರೆ ಉಳಿಯದೋಗ್ಲಿ ಯಾವ ಪಾರ್ಟಿಗೂ ಮೆಜಾರಿಟಿ."

ರುಬ್ರು ಈಸ್ಸುರಪ್ಪನ ಹಿಂದಿಲವೇನ್ಲ?" ಎಂದ ವ.

ಲ್ಲ ಕಣ ಮಾವ, ಯಾವ್ರೊ ಒಂದಿಷ್ಟು ಪುರೋಹಿತರ ಕರ ತರ ಇರೋವು ಅವುನಿಂದವೆ. ಅಷ್ಟಕೂ, ನ ಕತೆನೂ ಮುಗಿತಾ ಅದೆ."

ನ್ಯಾಕ್ ಮುಗಿತಾ ಅದೆ?"

ವುನು ಎಡೂರಪ್ಪನ್ನ ಎದರಾಯ್ಕಂಡವುನೆ. ಅದ್ಕೆ ಬುರೋ ಯಲಕ್ಷನ್ನಲ್ಲಿ ಯಡೂರಪ್ಪನ ಕಡಿಯೋರು ನ್ನ ತಗದು ಯಸಿತರಂತೆ."

ಮೊಂದು ವಳ್ಳೆ ಕ್ಯಲಸ ಬುಡತ್ತಗೆ" ಎಂದ ಸೀರ.

ನ್ಯಾಕಲಾ ಅಂಗಂತೀ?"

ತ್ತಿನ್ನೇನ್ಲ, ಬಾಯಿಬುಟ್ರೆ ಕೈ ಕಡಿರಿ, ಕಾಲು ಕಡಿರಿ, ಸೀಳಿ ಅಂತಾನಲ್ಲಾ, ಅವುನೇನು ರೌಡಿನೊ, ಣೆನೊ ಅಂತ."

"ಶಿವಮೊಗ್ಗದಲ್ಲಿ ಯಾರೂ ಅಂಗೆ ಮಾತಾಡದಿಲ್ಲ ಕಣೊ. ಇವನು ಬಳ್ಳಾರಿ ಜಾಲಿ ಗಿರಾಕಿ. ಅದ್ಕೆ ಅಂತ ಮಾತು ಬತ್ತವೆ."

"ಏನೆ ಆಗ್ಲಿ ರಾಜಕಾರಣದಲ್ಲಿದ್ದೋರ ಬಾಯಿಲಿ ವಳ್ಳೆ ಮಾತು ಬರಬೇಕು" ಎಂದ ಕಾಳ ಮಾವ.

"ಯಸ್ಸೆಂ ಕೃಷ್ಣ ಎಸ್ಟು ನಯಸ್ಸಾಗಿ ಮಾತಾಡೋನಲವೆ" ಎಂದಳು ಜುಮ್ಮಿ.

"ಆ ತರ ನಯಸ್ಸಾಗಿ ಮಾತಾಡೋನ ಮ್ಯಾಲೂ ಗಣಿಕೇಸು ಬಿದ್ದದೆ ಕಣೇ. ಅವುನಮ್ಯಾಲಷ್ಟೇ ಅಲ್ಲ, ಕುಮಾರಸ್ವಾಮಿ, ದರಮುಸಿಂಗನ ಮ್ಯಾಲೂ ಬಿದ್ದವೆ."

"ಅಂಗರಿವುರು ಎಡೂರಪ್ಪನಂಗೆ ಆನ್ನು."

"ಊ. ಎಡೂರಪ್ಪ ಬಯಲಲ್ಲಿ ತಿಂದ. ಇವುರು ಮರೆಲಿ ತಿಂದವುರೆ. ಅದ ಯಾವನೊ ಕಂಡಿಡದು ದೂರು ಕೊಟ್ಟಿದ್ದ. ಅದೇನಾಯ್ತೋ ಏನೊ ಕೊರ್ಟು ಅವುರ ಸದ್ದಿಕೆ ತನಿಕೆ ಮಾಡಬ್ಯಾಡಿ ಅಂತ ತಡೆ ಕೊಟ್ಟದೆ."

"ಈ ಕೋರ್ಟುಗಳು ಸರಿಲ್ಲ ಕಂಡ್ರ. ಆ ಎಡೂರಪ್ಪನ್ನ ಹಿಡುದು ವಳಿಕಾಕತ್ತವೆ. ಕಿಸ್ನ ಕುಮಾರ, ಧರಮುಸಿಂಗನ್ನ ತನಿಕೆ ಮಾಡಬ್ಯಾಡಿ ಅಂತದೆ. ಹಿಂಗಾದ್ರುಂಗೇ?" ಎಂದ ಸೀರ.

"ಎಡೂರಪ್ಪ ಕೇಳ್ತಾಯಿರದು ಅದೇ ಪಾಯಿಂಟು ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಾವ ಪಾಯಿಂಟಪ್ಪ ಅವುನು ಕೇಳ್ತಾಯಿರದೂ?"

"ಅದೆ, ಗಣಿಗಾರಿಕೆ ಸುರುಮಾಡಿಸಿದೋನು ಕೃಷ್ಣ. ಅವುನು ಡಿ.ಕೆ.ಶಿವಕುಮಾರ ಸೇರಿ ದುಡ್ಡು ಹೊಡದವುರೆ. ಆ ಶಿವಕುಮಾರನಂತೂ ಬೆಂಗಳೂರು ಕಾಲಿ ಜಾಗ ಒಂದನೂ ಬುಡದಂಗೆ ತಗಂಡವುನಂತೆ. ಇನ್ನ ಧರಮುಸಿಂಗನಂತೂ ನೋಡಕ್ಕಂಗಿದ್ರೂ ಹುಟ್ಟು ಕಳ್ಳನಂತೆ. ಅವುನಿಂದ ಸರಕಾರಕೆ ಕೋಟ್ಯಾಂತ್ರಪಾಯಿ ಲಾಸಗಿದ್ದತಂತೆ. ಇನ್ನ ಕುಮಾರಸ್ವಾಮಿ ರೆಸಾರ್ಟು ರಾಜಕಾರಣ ನ್ಯಡದಿರದೇ ಗಣಿ ಲೂಟಿ ಹಣದಿಂದ. ಆ ಪೈಕಿ ಇನ್ನೂ ನೂರೈವತ್ತು ಕೋಟಿ ರೂಪಾಯಿ ಬಾಕಿ ಬರಬೇಕಂತೆ."

"ಅದ್ಯಾರು ಬಾಕಿ ನಿಲ್ಲಿಸಿಗಂಡಿದ್ದರಪ್ಪಾ?"


"ಇನ್ಯಾರು, ಜನಾರ್ದನರೆಡ್ಡಿ ಚಿಗಪ್ಪಾ. ಈ ತರ ಮಾಜಿ ಮುಖ್ಯ ಮಂತ್ರಿಗಳ್ಯಲ್ಲ ಗಣಿ ಹಗರಣದಲ್ಲಿ ಸಿಗಾಯ್ಕಂಡು ನರಳ್ತಾಯಿರುವಾಗ ನಾನು ಮಾತ್ರ ಜೈಲಿಗೋಗಿ ಬಂದೆ. ಜೈಲಿಗೋಗಿ ಬರದೇನೂ ಅವುಮಾನಲ್ಲ ಅಂತ ಗಾಂಧಿಮಾತ್ಮನೇ ಬೇಕಾದಷ್ಟು ಸಾರ್ತಿ ಜೈಲಿಗೋಗಿ ಬಂದ್ರು. ನೆಹರು ಹತ್ತಾರು ವರ್ಷ ಇದ್ರು. ನಾನೆಲ್ಲೊ ಒಂದೇ ಒಂದು ತಿಂಗಳು ಇದ್ದು ಬಂದಿದ್ದು ಯಾವ ಲ್ಯಕ್ಕ ಅಂತ ಕುಂತವುನೆ ಎಡೂರಪ್ಪ."

"ಎಡೂರಪ್ಪನಿಗ್ಯಾವ ಮಾನ ಮರಿಯಾದಿ ಇದ್ದತ್ಲ" ಎಂದ ಕಾಳಮಾವ.

"ಇಲ್ಲಿ ಮಾನ ಮರಿಯಾದಿ ಪ್ರಶ್ನೆನೆ ಅವುನು ತಗದಿಲ್ಲ ದೊಡಪ್ಪ, ನನ್ನ ತಿರಗ ಮುಖ್ಯ ಮಂತ್ರಿ ಮಾಡಿ, ಯಾಕ್ ಮಾಡದಿಲ್ಲ ಅಂತ ಕುಂತವುನೆ."

"ಯಾರು ಮಾಡಬೇಕಂತೇ?"

" ಹೈ ಕಮಾಂಡಿನೋರು ಮಾಡಬೇಕಂತೆ. ಅದ್ಕೆ ಹೋಗಿ 'ನೀವು ಮಾಡ್ತಿರೊ ನಾನೇ ಆಗ್ಲೊ' ಅಂದನಂತೆ. ಅವುರು ಏನ್ನೂ ಹೇಳಲಿಲವಂತೆ. ವಾಪಸು ಬಂದು ಶೋಭಾ ಕರಂದ್ಲಾಜೆ ಜೊತೆಲಿ ಹೋಮಾ ಮಾಡ್ತ ಕುಂತವುನೆ."



"ಎಡೂರಪ್ಪ ಹೋಮ ಮಾಡ್ತನೆ ಅಂದ್ರೆ ಲಿಂಗಾಯತ ಜಾತಿಗೇ ಅವುಮಾನ ಕಣೊ ವಾಟಿಸ್ಸೆ" ಎಂದ ಉಗ್ರಿ.

"ಅವುರ ಜಾತಿಲಿ ಓಮ ಮಾಡಂಗಿಲವೊ?" ಎಂದಳು ಜುಮ್ಮಿ.

"ಇಲ್ಲ ಕಣೇ. ಹೋಮ ಮಾಡೋರ್‍ಯಲ್ಲ ಬ್ರಾಂಬ್ರು ಜಾತಿಯೋರು. ಲಿಂಗಾಯತ್ರು ಯಾವ ಕಾರಣಕೂ ಮಾಡದಿಲ್ಲ. ಅಂಗೇನಾದ್ರು ಮಾಡಿದ್ರೆ ಅವುರು ಲಿಂಗಾಯಿತ್ರಲ್ಲ ಅಂತ."

"ಎಡೂರಪ್ಪ ಲಿಂಗಾಯಿತಾಗಿದ್ರೆ ಹಣೆಗೆ ವಿಭೂತಿ ವಡಕತಿದ್ದ. ಆದ್ರಿವುನು ಕುಂಕುಮ ಹಚಗಂಡು ಹೋಮ ಮಾಡ್ತ ಕುಂತವುನೆ."

"ಹೋಮ ಮಾಡಿದ್ರೆ ತಿರಗ ಮುಖ್ಯಮಂತ್ರಿಯಾಯ್ತಿ ಅಂತ ಯಾವನೊ ಪುರೋಹಿತ ಹೇಳಿಬುಟ್ಟವುನೆ. ಅದ್ಕೆ ಮಾಡುಸ್ತ ಯಿರಬೇಕಲವೆ" ಎಂದ ಉಗ್ರಿ.

"ಊಕಣೊ ಉಗ್ರಿ. ಹೈಕಮಾಂಡನ ವಾಮಾಚಾರದಿಂದ ಬಗ್ಗಸಕ್ಕೆ ವಂಟವುನೆ. ಅದೂ ಶೋಭನ್ನ ಕರಕಂಡೋಗಿ ಕುಂದ್ರಿಸಿಗಂಡನಲ್ಲ ಹೇಳು."

"ಅವುನಿಗೆದ್ದಿಯಿಲ್ಲ, ಅವುಳಿಗೆ ಗಂಡಿಲ್ಲ, ಸರಿಯಾಯ್ತು ಬುಡ್ಲ" ಎಂದು ಜುಮ್ಮಿ ನಗಾಡಿದಳು.

"ಎಡೂರಪ್ಪ ಇರೊವಷ್ಟು ದಿನ, ಸೋಬನ ಜ್ವತೆ ಸುಖವಾಗಿರದು ಬುಟ್ಟು ಅದ್ಯಾಕ್ ತಿರಗ ಮುಖ್ಯಮಂತ್ರಿಯಾಯ್ತಿನಿ ಅಂತ ಹಟ ಮಾಡ್ತನ್ಲ?" ಎಂದ ಸೀರ.

"ಅವುನು ಹಟ ಹಿಡದಿರದ್ರಲ್ಲು ನ್ಯಾಯ ಅದೆ ಚಿಗಪ್ಪ, ಇವತ್ತು ಏನು ಸದಾನಂದ ಅನ್ನೊ ವಜ್ರದಂತಿ ಅಧಿಕಾರ ಅನುಭವುಸ್ತ ಅವುನೊ, ಅದ ಕೊಟ್ಟರೋನು ಎಡೂರಪ್ಪ, ಅಷ್ಟೇ ಅಲ್ಲ, ಸರಕಾರ ಅಧಿಕಾರಕ್ಕೆ ತಂದೋನು ನಾನೆ, ನಾನು ತಂದ ಸರಕಾರನ ನಾನು ನ್ಯಡಸಬೇಕೆ ವರತೂ ಬ್ಯಾರೆಯೋರಲ್ಲ ಅಂತನೆ."

"ಸರಿ ಕಂಡ್ಲ, ಬ್ಯಾರೋರು ನ್ಯಡಸಂಗೆ ಮಾಡಿಕಂಡೋನು ಇವುನೆ ಅಲವೆ? ಅಂತ ಕ್ಯಲಸ ಯಾಕೆ ಮಣ್ಣು ತಿನ್ನಕ್ಕೆ ಮಾಡಿಕಂಡ?"

"ಯಾರು ಮಾಡುಬಾರದ್ದ ಮಾಡಿಲ್ಲಾ. ಯಲ್ಲಾ ಮಾಡ್ಯವುರೆ. ಅದ್ಕೆ ನಾನು ತಿರಗ ಮುಖ್ಯ ಮಂತ್ರಿಯಾಯ್ತಿನಿ ಅಂತ ಕುಂತವುನೆ."

"ಅವುನಾದರೆಷ್ಟು, ಬುಟ್ರರೆಸ್ಟು. ಮದ್ದು ವಲಯ ಕೂದು ಮ್ಯದೆ ಹಾಕಿ ಬಡ್ಡೆತ್ತವ. ಅವುನಿಗೇನೊ ತಲಿಕೆಟ್ಟದೆ ಅಂತ ನೀವು ಅವುನಂಗೆ ಮಾತಾಡಬ್ಯಾಡಿ" ಎಂದ ಕಾಳಮಾವ.

"ಇನ್ನಮ್ಯಾಲೆ ವಲ ಕುಯ್ಯದು ಸುಲಭ ದೊಡಪ್ಪ."

"ಅದ್ಯಂಗೆ ಸುಲಭಾ?"


"ಮುನಿಸಿಪಾಲಿಟಿಗಳಲ್ಲಿ ಕಸ ಹುಲ್ಲು ಕತ್ರಸಕ್ಕೆ ಒಂದು ಮಿಷನ್ ತಂದವುರೆ. ಅಂತೆದ ತಂದು ರಾಗಿ ಪೈರು ಬಡ್ಡಿಗೆ ಹಿಡುದು ಸುಚ್ಚಾಕಿದ್ರೆ ಸಾಕು, ಯಲ್ಲ ಉತ್ರಿಸಿಗಂಡು ಬೀಳ್ತವೆ. ಆಗ ಹರಿಕಟ್ಟಿದರಾಯ್ತು. ಸ್ಕೂಲುಡುಗುರಿಗೆ ಸೈಕಲ್ ಕೊಟ್ಟಂಗೆ ನಮಿಗೂ ಆ ಮಿಷನ್ ಕೊಟ್ರೆ ರೈತರ ಕ್ಯಲಸ ಈಜಿ ಆಯ್ತದೆ ದೊಡ್ಡಪ್ಪ."


"ಮೈಗಳ್ಳ ಮುಂಡೆಮಗ ಹುಡಿಕಿರೊ ದಾರಿ ನೋಡು!"

ಕಾಫಿ, ಬಿಯರ್ ಮತ್ತು ಗಾಂಧಿ ▸▸▸

"ಗಾಂಧೀಜಿ ಕೂಡ ತಪ್ಪು ಮಾಡಬಲ್ಲವರಾಗಿದ್ದರು ಎಂಬುದು ನಿಮಗೆ ಹೇಗೆ ಗೊತ್ತಾಗುತ್ತದೆ?" ಎಂದು ನಾನೊಮ್ಮೆ ಂತನನ್ನು ಕೇಳಿದೆ. ಅದಕ್ಕೆ ಅವರು ಹೇಳಿದರು, 'ನಿನಗೆ ಉತ್ತರಿಸುವುದಕ್ಕೆ ಮುನ್ನ ನೀನು ನನ್ನಲ್ಲಿ ಗಾಢ ಗೌರವ ಹೊಂದಿರುವ ಬಗ್ಗೆ ನಾನು ಆಕ್ಷೇಪಿಸುತ್ತೇನೆ. ನಾನು ತೀರಾ ಸಾಮಾನ್ಯ. ನಾನು ಮನಸ್ಸನ್ನು ಒಂದು ಒಳ್ಳೆಯ ವಿಷಯದ ಏಕಾಗ್ರಗೊಳಿಸಲು ಯತ್ನಿಸುತ್ತೇನೆ ಅಂದಿಟ್ಟುಕೋ. ಹೀಗೆ ಮನಸ್ಸನ್ನು ಪೂರ್ತಿ ಸೆಳೆದು ನನಗಿರುವ ವೇಳೆಯಲ್ಲಿ ಕೆಲವು ಷ್ಟನ್ನು ಕಬಳಿಸಿದ ಈ ವಿಷಯದ ಬಗ್ಗೆಯೇ ನನಗೆ ಅನುಮಾನ ಶುರುವಾಗುತ್ತದೆ. ಉಣ್ಣಲು, ನಿದ್ರಿಸಲು, ಕನಸಲು, ಸಲು ಇರುವ ಈ ಬದುಕಿನಲ್ಲಿ ಅಷ್ಟೇ ಸಾಲದು ಎಂದುಕೊಂಡು ಆದರ್ಶ, ಆಟ, ತಮಾಷೆ, ಕಲೆ ಸೃಷ್ಟಿಸಿಕೊಂಡಿದ್ದೇವೆ. ನಾನು ಮೊನ್ನೆ ನೋಡಿದ್ದನ್ನು ನಿಮಗೆ ಹೇಳುವಾಗಲೇ ಹಲವಾರು ಬಣ್ಣ ಧ, ಸ್ಪರ್ಶಗಳು ಸೇರಿಕೊಂಡಿರುತ್ತವೆ. ನೋಡಿದ್ದರಷ್ಟೇ ಮುಖ್ಯ ಹೇಳಿದ್ದು ಕೂಡ; ಇದೆಲ್ಲದರ ಮತ್ತು ಬೆಳವಣಿಗೆ ಕೂಡ. ಇದು ಜೀವನ. ನಾನು ಮಹಾ ಆಶೆಗಳ, ಆದರ್ಶಗಳ, ಧ್ಯಾನ ಮತ್ತು ುಗಳ ವ್ಯಕ್ತಿ ಇವುಗಳಲ್ಲಿ ಕೆಲವು ಹೆಚ್ಚಾಗಿ ಕೆಲವು ಕಮ್ಮಿಯಾಗುವುದು ಕೂಡ ಜೀವನ. ಆದರ್ಶ ವಾಗಿ ಆಶೆ ಮತ್ತು ಆಕಾಂಕ್ಷೆ ಹೆಚ್ಚಾಗುವುದು, ಸಂಯಮ ಜಾಸ್ತಿಯಾಗಿ ಭೋಗ ಇಲ್ಲವಾಗುವುದು. ಹೆಚ್ಚಾಗಿ ವಾಸ್ತವ ಕಮ್ಮಿಯಾಗುವುದು; ಹಾಗೆಯೇ ಒಬ್ಬ ವ್ಯಕ್ತಿ ತಿಂಗಳುಗಟ್ಟಲೆ ಆರೋಗ್ಯವಾಗಿದ್ದರೆ ಅನಾರೋಗ್ಯಕ್ಕಾಗಿ ತನಗೆ ಗೊತ್ತಿಲ್ಲದೇ ಪರದಾಡುತ್ತಿರುತ್ತಾನೆ. ಹೀಗಿದ್ದಾಗ ನನ್ನಿಂದ ತೀರಾ ವ ಒಬ್ಬ ಗಾಂಧೀಜಿಯ ಬಗ್ಗೆ ನನಗೆ ಅನುಮಾನವಾಗುವುದು ಸಹಜ. ಗಾಂಧೀಜಿಯವರಿಗಿದ್ದ ದ ಗುರಿಯೇನು ಎಂದು ಚಿಂತಿಸಿದರೆ ಅವರಂಥವರೇ ಲಕ್ಷಾಂತರ ಜನ ಒಂದು ದೇಶದ ಜನರನ್ನು ವುದು. ಇಷ್ಟು ಸಣ್ಣದಾಗಿ ಯೋಚಿಸುವುದು ಬೇಡ. ಮನುಷ್ಯರು ಜೂಜು, ಕುಡಿತ, ವ್ಯಭಿಚಾರದಿಂದ ಹಾಳಾಗಿಯೇ ಸ್ವಾತಂತ್ರ್ಯ ನಷ್ಟವಾಯಿತೆಂದು ಗಾಂಧೀಜಿ ಹೇಳಿದ್ದರಲ್ಲಿ ಅಪಾರ ಅರ್ಥವಿದೆ. ಆದರೆ ಸುಭಿಕ್ಷದ ಒಂದು ಕಾಲದಲ್ಲಿ ರನ್ನು ಅವರ ಸಹಜ ಸಂತೋಷಗಳಿಂದ ದೂರ ಇಡಲಾಗುವುದಿಲ್ಲ, ಈ ಸಹಜ ಸಂತೋಷಗಳಿದ್ದರೂ ಮನುಷ್ಯರು ಜಿಯ ಕಠೋರ ವ್ರತ ಮತ್ತು ಜೀವನ ಪ್ರೇಮವುಳ್ಳ ವ್ಯಕ್ತಿಯಾಗಬೇಕು. ಇದು ನನ್ನ ಪ್ರಿಯಮಾರ್ಗ ಅಂದರು.

ಈ ಬಗ್ಗೆ ನಾನು ಬಹಳ ಯೋಚಿಸಿದ್ದೇನೆ. ನಾನು ಸಂತನಿಂದ ಕೇಳಿದ್ದೆಲ್ಲ ಅರ್ಧಸತ್ಯ, ಹಿಂಸುಕಿ ನೋಡಿ ಹದ ನೋಡುವ ದು ಮಾತ್ರ ತಿಳಿದುಕೊಳ್ಳಿ, ಬದುಕಿನಲ್ಲಿ ಯಾವುದನ್ನೂ 'ಇದು ಸರಿಯಾದ್ದು, ಇದು ನಿಷಿದ್ಧ' ಎಂದು ಹೇಳಲಾಗುವುದಿಲ್ಲ. ು ಅನೇಕ ಸಸ್ಯಾಹಾರಿಗಳಿಗೆ ಮಾಂಸಹಾರಿಗಳೆಲ್ಲ ಕೆಟ್ಟವರು; ನಶ್ಯ ಹಾಕುವವರಿಗೆ ಸಿಗರೇಟ್ ಸೇದುವವರು, ಸಿಗರೇಟ್ ವರಿಗೆ ಗಾಂಜಾ ಪ್ರೇಮಿಗಳು ದುಷ್ಟರು. ವ್ಯಭಿಚಾರ ಕೆಟ್ಟದೆಂದು ಎಲ್ಲರೂ ಬಲ್ಲರು; ಕೃಷ್ಣನಾಗಲಿ ಅರ್ಜುನನಾಗಲಿ ದು ಅವರೇ ಹೇಳುವುದಿಲ್ಲ, ಕಳ್ಳಕೃಷ್ಣ ಖಂಡಿತವಾಗಿಯೂ ಕಳ್ಳರಿಗೆಲ್ಲ ಆದರ್ಶಪುರುಷನಲ್ಲ, ಕುಂತಿಯ ರೀತಿಯಲ್ಲಿ ಮಾಡಿಕೊಂಡು ಆ ಬಗ್ಗೆ ಹೇಳಿಕೊಳ್ಳುವುದು ಕಷ್ಟ. ಆದರೆ ಎಲ್ಲವನ್ನೂ ಅರಗಿಸಿಕೊಳ್ಳಬೇಕಾದರೆ ಒಬ್ಬನೇ ಮನುಷ್ಯ ಕಠೋರನೂ ಆಗುವುದು ಸಾಧ್ಯವೇ ಎಂದು ನೋಡಬೇಕಾಗಿದೆ.





ಅನಂತಮೂರ್ತಿ ಮೊನ್ನೆ ಗಾಂಧೀಜಿಯ ಬಗ್ಗೆ ಬರೆಯುತ್ತಾ 'ನಾನು ಗಾಂಧೀವಾದಿ ಎಂದು ಯಾವತ್ತೂ ಹೇಳಿಕೊಂಡಿಲ್ಲ, ಯಾಕೆಂದರೆ ಗಾಂಧೀವಾದಿ ಆದರೆ ಕಾಫಿ ಕುಡಿಯುವಂತಿಲ್ಲ, ಬಿಯರ್ ಕುಡಿಯುವಂತಿಲ್ಲ' ಅಂದರು. ಇದು ಗಾಂಧಿ ಹೇಗೆ ನಮ್ಮ ಸ್ನೇಹಿತರಿಂದ ನುಣುಚಿಕೊಂಡುಹೋಗುತ್ತಿದ್ದಾರೆ ಎಂಬುದನ್ನು ತೋರುತ್ತದೆಯೇ ಹೊರತು ಮತ್ತೇನಲ್ಲ. ಬಿಯರ್, ಕಾಫಿ ಕುಡಿದವರು ಗಾಂಧೀವಾದಿಯಲ್ಲ ಅಂದರೆ ಗಾಂಧಿ ಕೂಡ ಗಾಂಧಿವಾದಿಯಾಗಿರಲಿಲ್ಲ; ಯಾಕೆಂದರೆ ಗಾಂಧಿ ಎಷ್ಟೇ ಅಭ್ಯಾಸಗಳ ವಿಷಯವಾಗಿ ಹಟ ಮಾಡಿದರೂ ಅವರು ಹೇಳುತ್ತಿದ್ದುದು ಅದಕ್ಕಿಂತ ಆಳವಾದ ವ್ರತದ ಬಗ್ಗೆ. ನನ್ನ ಮಿತ್ರರೊಬ್ಬರು ನನ್ನ ಜೀವನದೃಷ್ಟಿಯನ್ನು ಒಪ್ಪಿಕೊಂಡವರು; ಅವರು ಬೆಂಗಳೂರಿನ ಬಹುಮುಖ್ಯ ಸಂಸ್ಥೆಯೊಂದರ ಬಾಸ್. ನಾನು ಮೊನ್ನೆ ಮಾತಾಡುವಾಗ, "ಅಲ್ರಿ, ನಿಮ್ಮ ಬಗ್ಗೆ ನಿಮ್ಮ ವಿದ್ಯಾರ್ಥಿಗಳಿಗಿರುವ ಗೌರವ ನೋಡಿದರೆ ಆಶ್ಚರ್ಯವಾಗುತ್ತೆ" ಅಂದರೆ "ಯಾಕೆ ಸರ್?" ಅಂದರು. "ನೀವು ಬೆಂಗಳೂರಿನ ಎಲ್ಲ ಕ್ಲಬ್‌ಗಳ ಸದಸ್ಯರು. ತಿಂಗಳಲ್ಲಿ ಹತ್ತು ದಿನ ಪಾರ್ಟಿಗಳಲ್ಲಿ ಕೂತು ಉಂಡು, ಕುಡಿದು ಹರಟುತ್ತಿರುತ್ತೀರಿ-ಕುದುರೆ ಜೂಜಿಗೆ ಹೋಗಿ ಹತ್ತು ರೂಪಾಯಿ ಕಟ್ಟಿ ಖುಷಿ ಪಡ್ತೀರಿ. ಇಸ್ಪೀಟ್ ಆಡ್ತೀರಿ. ವೈಯಾರಿಯರ ಸೌಂದರ್ಯ ನೋಡಿ ಮಂತ್ರಮುಗ್ಧರಾಗಿ ನಿಂತು ಆನಂದಿಸ್ತೀರಿ. ಆದರೂ ನಿಮ್ಮ ಬಗ್ಗೆ ನಿಮ್ಮ ವಿದ್ಯಾರ್ಥಿಗಳು ಅಪಾರ ಗೌರವ ಇಟ್ಟುಕೊಂಡಿದ್ದಾರೆ" ಅಂದೆ.

ಅವರು ಏನನ್ನೂ ಹೇಳದೆ ನಕ್ಕರು.

ಮನುಷ್ಯನ ವಂಚನೆ ಈ ಧರ್ಮರಾಯನ ಚಟ, ಕೃಷ್ಣನ ರಸಿಕತೆ ಮೀರಿದ್ದು; ಸಾರ್ವಜನಿಕ ಹಣ ತಿನ್ನುವುದು, ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವುದು, ಬಡವರನ್ನು ಸುಲಿದುಹಾಕುವುದು, ಜಾತೀಯತೆ ಬೆಳೆಸಿ ಜನರನ್ನು ಜನರ ವಿರುದ್ಧ ಎತ್ತಿಕಟ್ಟುವುದು-ಇವೆಲ್ಲದರ ವಿರುದ್ಧ ಹೋರಾಡುವ ಶಕ್ತಿ ಬರಬೇಕಾದರೆ, ಅದಕ್ಕೆ ಬೇಕಾದ ಕಠೋರ ನಿಷ್ಠೆ ನಮ್ಮದಾಗಬೇಕಾದರೆ ನಮ್ಮ ನರಮಂಡಲಗಳು ಸಹಜ ಬದುಕಿನಿಂದ ಹುರಿಗೊಳ್ಳಬೇಕು. ಸಣ್ಣಪುಟ್ಟ ಚಾಂಚಲ್ಯಗಳ ವಿರುದ್ಧ ಹೋರಾಡುತ್ತಲೇ ನಮ್ಮೆಲ್ಲ ತ್ರಾಣ ಕಳೆದುಕೊಂಡು ಹುಳಗಳಂತಾಗುವ ಬದಲು ಮನುಷ್ಯರೆಲ್ಲರ ಸುಖ, ಕ್ರೀಡೆ, ಕಲೆಗಾಗಿ ಹೋರಾಡುವಂತಾಗಬೇಕು. 'ಮಂತ್ರಿಸಿದರೆ ಮಾವಿನ ಕಾಯಿ ಉದುರುವುದಿಲ್ಲ' ಎಂಬ ವ್ಯವಹಾರಜ್ಞಾನದಿಂದ ಹಿಡಿದು 'ಊರು ಉಪಕಾರ ಬಲ್ಲದೇ ಶವ ಶೃಂಗಾರ ಬಲ್ಲದೇ' ಎಂಬ ನಿರಾಶೆಯವರೆಗೆ ಹಬ್ಬಿರುವ ಮನುಕುಲದ ಅನುಭವದ ಮಧ್ಯೆ ನಾವು ಸುವರ್ಣಮಧ್ಯಮಕ್ಕಾಗಿ, ಸಾತ್ವಿಕ ಸಂತೋಷಮಯ ಬದುಕಿಗಾಗಿ ಪ್ರಯತ್ನಿಸಬೇಕು.

'ನನ್ನ ಪ್ರಶ್ನೆಗೆ ನೀವು ಉತ್ತರಿಸಿದ್ದೀರಾ?' ಎಂದು ಅವರನ್ನು ಅನುಮಾನದಿಂದ ಕೇಳಿದೆ.

'ನಿನ್ನ ಬಗ್ಗೆ ನೀನು ಯೋಚಿಸು' ಎಂದಷ್ಟೇ ಅವರು ಹೇಳಿದರು.

- ಏಪ್ರಿಲ್ 3, 1996

ಉಂಡ ಮನೆಗೆ ಎರಡು ಬಗೆಯುವವರು



ಎಚ್.ಎಲ್. ಕೇಶವಮೂರ್ತಿ

ಅಣಕ

"ಇವರು ಯಾರು ಅನ್ನುತ್ತೀರಾ?

ಸ್ವಲ್ಪ ನಿಧಾನಿಸಿ.

ಕೆಲವರು ಇರುತ್ತಾರೆ. ಹಣ ಪಡೆಯುವವರೆಗೂ ಗೋಗರೆಯುತ್ತಾರೆ. ಅದು ಸಂದ ಮೇಲೆ ಮುಗಿಯಿತು. ವರಸೆಯೇ ಬದಲಾಗುತ್ತೆ. ಹಣ ನೀಡಿದವರನ್ನು ಕೃತಜ್ಞತೆಯಿಂದ ಸ್ಮರಿಸಬೇಕು. ಅದು ಧರ್ಮ. ಸ್ಮರಿಸುವುದು ಬೇಡ. ಸುಮ್ಮನಾದರೂ ಇರಬೇಕು. ಹಾಗೂ ಮಾಡುವುದಿಲ್ಲ. ಹಣ ನೀಡಿದವರನ್ನೇ ಹಿಗ್ಗಾಮುಗ್ಗಾ ಹೀಯಾಳಿಸುತ್ತಾರೆ. ಕೃತಘ್ನರು! ಹೀಗೆ ಮಾಡುವುದು ಅವರಿಗೆ ಒಂದು ರೀತಿಯ ಚಟವಲ್ಲ. ಬಯ್ಯುವವರು ಹೇಗಿದ್ದರೂ ಬಯ್ಯುತ್ತಾರೆ ಎಂದು ತಿಳಿದು ಹಣ ನೀಡದೆ ಇದ್ದರೆ ಚೆನ್ನಾಗಿರುತ್ತಿತ್ತು. ಈಗ ಕೈ ಮೀರಿದೆ. ಹಣ ಕೊಟ್ಟಾಗಿದೆ. ಬಯ್ಗುಳ ಕೇಳುತ್ತಾ ಕೂರುವ ಸ್ಥಿತಿ ಒದಗಿದೆ. ಹೀಗೆ ಹಣ ನೀಡಿ 'ಯಾಕಾದರೂ ಕೊಟ್ಟೆನೋ' ಎಂದು ಪರಿತಪಿಸುವವರನ್ನು ನೋಡಿದರೆ ಅಯ್ಯೋಪಾಪ ಎನ್ನುವ ಕನಿಕರ ಮೂಡುತ್ತದೆ.

ಹಿಂದೆ ಹೀಗಿರಲಿಲ್ಲ. ಭೀಷ್ಮ ದ್ರೋಣಾದಿಗಳಂತಹ ಮಹಾನುಭಾವರೇ ದ್ರೌಪದಿ ವಸ್ತ್ರಾಪಹರಣ ಸಂಭವಿಸುತ್ತಿದ್ದಾಗ ದುರ್ಯೋಧನನನ್ನು ನಿಂದಿಸಲಿಲ್ಲ! ಕಟುಶಬ್ದಗಳಿಂದ ಅವಹೇಳನ ಮಾಡಲಿಲ್ಲ. ಉಂಡ ಮನೆಗೆ ಎರಡು ಬಗೆಯಬಾರದು ಎಂಬ ಧರ್ಮ ಸೂಕ್ಷ್ಮ ತಿಳಿದು ಮೌನಕ್ಕೆ ಶರಣಾದರು.

ಅದೆಲ್ಲ ಪುರಾಣ ಬೇಡ ಎನ್ನುವುದಾದರೆ ಇತಿಹಾಸವನ್ನೇ ಪರಿಶೀಲಿಸಿ. ಆಸ್ಥಾನ ಕವಿಗಳು ತಮ್ಮ ಪ್ರಭುವಿನ ಶೌರ್ಯಪ್ರತಾಪಗಳನ್ನು ಹಾಡಿ ಹೊಗಳುತ್ತಿದ್ದರು. ಅವರು ಮಾಡಿದ ದಾನ ಧರ್ಮಗಳನ್ನು ಕೊಂಡಾಡುತ್ತಿದ್ದರು. ಹಾಗೆ ಮಾಡುವಂತೆ ಉಂಡಮನೆಗೆ ಎರಡು ಬಗೆಯಬಾರದು ಎಂಬ ನೀತಿ ಎಚ್ಚರಿಸುತ್ತಿತ್ತು.

ರಾಜ ಮಹಾರಾಜರ ಕಾಲ ಮರೆಯಾಯಿತು. ರಾಜಕೀಯ ವಂಶಸ್ಥರ ಆಳ್ವಿಕೆಯ ಕಾಲ ಬಂದಿತು. ಉಂಡ ಮನೆಗೆ ಎರಡು ಬಗೆಯಬಾರದು ಎಂಬ ಸೈದ್ಧಾಂತಿಕ ನಿಲುವು ಹಾಗೇ ಉಳಿಯಿತು. ಆಳುವ ಪ್ರಭುಗಳು ಮಠಮಾನ್ಯಗಳಿಗೆ ಕೋಟ್ಯಂತರ ರೂಪಾಯಿ ದೇಣಿಗೆ ನೀಡಿ ಪುನೀತರಾದರು. ಆಧ್ಯಾತ್ಮ ನೇತಾರರು ದೇಣಿಗೆ ರಾಜಕೀಯ ನೇತಾರರ ವಿರುದ್ಧ ಅಪಸ್ವರ ಎತ್ತುವ ಸಂದರ್ಭ ಉದ್ಭವಿಸಲೇ ಇಲ್ಲ. ಯಾಕೆಂದರೆ ಉಂಡಮನೆಗೆ ಎರಡು ಬಗೆಯಬಾರದು ಎಂಬ ನೀತಿಯನ್ನು ಅವರು ಸಾಂಗವಾಗಿ ಪರಿಪಾಲಿಸುತ್ತಿದ್ದರು. ಇಂತಹ ಅನ್ಯೋನ್ಯತೆ ಎಲ್ಲರಿಗೂ ಎದ್ದು ಕಾಣುತ್ತಿತ್ತು. ಇದನ್ನು ನೋಡಿಯಾದರೂ ಸಾಹಿತಿಗಳೆಂಬ ವಿಚಿತ್ರ ಜೀವಿಗಳು ಕೂಡಿ ಬಾಳುವಲ್ಲಿನ ಸಂತೋಷವನ್ನು ಅರಿಯದೇ ಹೋದರು. ಆಳುವ ಪ್ರಭುಗಳ ಕೃಪೆಯಿಂದ ನಡೆವ ಸಾಹಿತ್ಯ ಸಮ್ಮೇಳನದಲ್ಲಿಯೇ ಪ್ರಭುಗಳ ಆಡಳಿತವನ್ನು ಹೀಯಾಳಿಸುವ ಉದ್ಧಟತನಕ್ಕೆ ಇಳಿದರು! ಉಂಡಮನೆಗೆ ಎರಡು ಬಗೆಯಬಾರದು ಎಂಬ ತತ್ವ ಮರೆತರು. ಕನ್ನಡ ಮತ್ತು ಸಂಸ್ಕೃತಿ ಸಚಿವರಿಗೆ ಇದು ಸಾಂಸ್ಕೃತಿಕ ದುರಂತವಾಗಿ ಗೋಚರಿಸಿತು ಅವರು 'ಹಣ ಕೊಟ್ಟು ಬಯ್ಯಿಸಿಕೊಳ್ಳಬೇಕೆ' ಎಂಬ ಪ್ರಶ್ನೆಯನ್ನು ಸಭಾಸದರ ಮುಂದೆ ಎತ್ತಿದ್ದು ಸಮಂಜಸವೇ ಆಗಿತ್ತು!

ಮಂತ್ರಿ ಮಹೋದಯರು ಎತ್ತಿದ್ದ ನೀತಿ ಪ್ರಶ್ನೆಗೆ ಕೆಲವರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಸ್ವಾಮಿ ಆಕ್ಷೇಪಕರೆ ದಯಮಾಡಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಅದು ಜನರ ಹಣವೇ ಇರಬಹುದು. ಅದನ್ನು ಉದಾರವಾಗಿ ನೀಡುವ ಮನಸ್ಸು ಯಾರದ್ದು? ಅದು ಆಳುವ ಮಹಾಸ್ವಾಮಿಯವರದ್ದು ಎಂಬ ಸತ್ಯವನ್ನು ಅರಿಯಿರಿ. ಹೀಗೆ ಉದಾರತೆ ತೋರಿದವರ ವಿರುದ್ಧವೇ ನೀವು ಕವಿತೆ ಹೊಸೆಯುತ್ತಾ ಕುಳಿತರೆ ಅವರ ಮನಸ್ಸಿಗೆ ನೋವಾಗುವುದಿಲ್ಲವೇ? ಇದನ್ನು ಅರ್ಥಮಾಡಿಕೊಳ್ಳದ ಪಾಷಾಣ ಹೃದಯಿಗಳು ನೀವು ಆಗಿದ್ದಲ್ಲಿ..... ಸರ್ಕಾರ ಮುಂದಿನ ದಿನಗಳಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಹಣ ಬಿಡುಗಡೆ ಮಾಡುವುದೇ ಇಲ್ಲ! ಒಂದು ವೇಳೆ ಮಾಡಿದರೂ ಓದುವ ಕವನಗಳಿಗೆ, ಮಂಡಿಸುವ ಪ್ರಬಂಧಗಳಿಗೆ, ಸಾದರ ಪಡಿಸುವ ಅಧ್ಯಕ್ಷರ ನುಡಿಗಳಿಗೆ ಸೆನ್ಸಾರ್ ಮಾಡಲಾಗುತ್ತದೆ!

ಇದರಿಂದಲೂ ಬುದ್ಧಿ ಕಲಿಯದಿದ್ದರೆ ಸಾಂಸ್ಕೃತಿಕಲೋಕದ ದಿಗ್ಗಜರೆಂದು ಹಾರಾಡುವ ನೀವು ಉಂಡಮನೆಗೆ ಎರಡು ಬಗೆಯುವವರು ಎಂಬ ಶಾಶ್ವತ ಹಣೆಪಟ್ಟಿ ನಿಮ್ಮದಾಗುತ್ತದೆ ಎಂಬುದನ್ನು ಅರಿಯಿರಿ!

ಮುಗಿಸಿಯೇ ಬಿಟ್ಟನಾ!

ಅವನು ಕುಖ್ಯಾತ ರೌಡಿ.

ಹೆಸರಿನ ಅವಶ್ಯಕತೆ ಇಲ್ಲ. ರೌಡಿ ಎಂಬುದೇ ಅವನ ಹೆಸರು ಅಂದರೂ ಆಯಿತು.

ಅವನು ಎಸಗಿದ್ದ ಅಪರಾಧಗಳ ಸಂಖ್ಯೆ ಅವನಿಗೇ ಗೊತ್ತಿಲ್ಲ. ಅನ್ಯಾಯಕ್ಕೊಳಗಾದವರು ಕೇಸು ದಾಖಲಿಸಬೇಕು. ಇದ್ದ ಸಂಖ್ಯೆಗೆ ಇನ್ನೊಂದು, ಮತ್ತೊಂದು, ಮಗದೊಂದು ಸೇರಬೇಕು. ನಿಖರವಾಗಿ ಎಷ್ಟು ಎಂದು ತಿಳಿದಿಲ್ಲ.

ರೌಡಿಯ ದಂಧೆಗೆ ಅಡಚಣೆ ಬಂದುದು ಇಲ್ಲ. ಬಂದರೂ ನಿವಾರಿಸುವ ಚಾತುರ್ಯ ಅವನಿಗಿತ್ತು.

ಅವನು ರೌಡಿ. ಅಂದ ಮೇಲೆ ದೈವಭಕ್ತ ಆಗಿರಲೇಬೇಕು. ಪ್ರತಿನಿತ್ಯ ಪೂಜೆ ಮಾಡಲೇಬೇಕು. ನಿಮಿಷಗಳಲ್ಲಿ ಎಣಿಸುವ ಪೂಜೆ ಅಲ್ಲ ಅದು. ಗಂಟೆಗಳೇ ಬೇಕಿತ್ತು. ಅಷ್ಟೊಂದು ಭಕ್ತಿ. ದೇವತಾಕಾರ್ಯ ಎಂದರೆ ಸಾಕು. ಕೊಡುಗೈ ದೊರೆ ಅವನು. ಇದರ ಜೊತೆಗೆ ಸಂಪ್ರದಾಯ ಶರಣ. ಜ್ಯೋತಿಷ್ಯದಲ್ಲಿ ಅಪಾರ ನಂಬಿಕೆ. ಶಾಸ್ತ್ರ ಕೇಳದೆ ಯಾವ ಕೆಲಸಕ್ಕೂ ಕೈ ಹಾಕಿದ್ದೇ ಇಲ್ಲ.

ಅದೃಷ್ಟ ಕೈಕೊಟ್ಟಿತು. ಯಾರೋ ಮಾಡಿದ ಆರೋಪದ ಮೇಲೆ ಬಂಧಿತನಾದ, ಜೈಲು ಸೇರಿದ.

ನಿಂತಿತೆ ದೇವರ ಪೂಜೆ?

ಹೇಗೆ ನಿಂತೀತು? ಅಲ್ಲಿಯೇ ಎಲ್ಲವುದಕ್ಕೂ ವ್ಯವಸ್ಥೆಯಾಗಿತ್ತು!

ಕುಸಿದು ಬಿದ್ದಿತೆ ಅವನ ಸಾಮ್ರಾಜ್ಯ?

ಹುಚ್ಚು ಪ್ರಶ್ನೆ. ಜೈಲಿನಲ್ಲಿದ್ದರೇನು? ಸಾಮ್ರಾಜ್ಯದ ಅಧಿಪತಿ ಅವನು. ಅದಕ್ಕೆ ಕುಂದು ಬಂದಿರಲಿಲ್ಲ.

ಉಸ್ತುವಾರಿ ಬೇಕಲ್ಲ?

ನೆಚ್ಚಿನ ಬಂಟ ತಯಾರಾಗಿದ್ದ!

ಹಿಂಬಾಲಕರು ದರ್ಶನಕ್ಕೆ ಬಂದರು. ಆಜ್ಞೆ ಪಡೆದರು.

ಮಠಾಧೀಶರು ಹಿಂದೆ ಬೀಳಲಿಲ್ಲ. ದೈವಭಕ್ತ, ಸಾಲದ್ದಕ್ಕೆ ಕೊಡುಗೈ ದೊರೆ. ಜೈಲು ಸೇರಿದನೆಂದು ಬಾರದಿದ್ದರಾದೀತೆ? ಬಂದರು. ಆಶೀರ್ವಚನ ನೀಡಿದರು!

ಇಂತಹವರ ರಕ್ಷಣೆಗೆ ಮಠಾಧೀಶರು ನಿಲ್ಲಬಹುದೇ?

ಮೂರ್ಖ ಪ್ರಶ್ನೆ. ಅವರು ಹೋಗಿದ್ದು ನೊಂದವನಿಗೆ ಸಾಂತ್ವನ ಹೇಳಲು. ಮಠಾಧೀಶರ ಕರ್ತವ್ಯ ಅಲ್ಲವೆ ಇದು?

ಬೇಲು ಅರ್ಜಿ ಹಾಕಿದ.

ಅವನು ಪ್ರಭಾವಿ ವ್ಯಕ್ತಿ. ಬೇಲು ನೀಡಬಾರದು. ನೀಡಿದರೆ ಸಾಕ್ಷಿ ನಾಶ. ಇದು ಪ್ರಾಸಿಕ್ಯೂಷನ್ ವಾದ.

ನಗೆ ಬಂದಿತು ನ್ಯಾಯಾಧೀಶರಿಗೆ. ಅಷ್ಟು ಪ್ರಭಾವಿ ಅವನಾದರೆ ಜೈಲಿನ ಒಳಗಿದ್ದೇ ಅವನು ನಾಶಪಡಿಸಬಹುದಲ್ಲ ಎಂದರು ಅವರು!

ಜೈಲಿನ ಒಳಗಿದ್ದು ಸಾಕ್ಷಿ ನಾಶಮಾಡುವುದಕ್ಕೂ, ಹೊರಗಿದ್ದು ನಾಶಮಾಡುವುದಕ್ಕೂ ಯಾವ ವ್ಯತ್ಯಾಸವೂ ಕಾಣಲಿಲ್ಲ ನ್ಯಾಯಾಧೀಶರಿಗೆ!

ಆದಿವಾಸಿ ಸೋನಿ ಸೋರಿಯ ಕತೆ ಓದಿ ಅಳು ಬಂತು



ಆದಿವಾಸಿ ಮಹಿಳೆ ಸೋನಿ ಸೋರಿಯ ಗುಪ್ತಾಂಗಗಳಿಗೆ ಕಲ್ಲು ತೂರಿಸಿದ ವರದಿ ಓದುತ್ತಿದ್ದಂತೆ ಅಳು ತಡೆಯಲಾಗಲಿಲ್ಲ. ಕಾಡ ನಡುವಿನ ನೆರಳಿಗೆ ಬದುಕು ಕಟ್ಟಿಕೊಂಡಿರುವ ಜೀವಗಳನ್ನು ವ್ಯವಸ್ಥೆ ಹಿಂಸಿಸುತ್ತಿರುವ ಪರಿಗೆ ಮತ್ತೆ ಮತ್ತೆ ಕುದ್ದು ಹೋದೆ. 'ಸೋನಿ ಸೋರಿ ಅನುಭವಿಸಿರುವ ಮತ್ತು ಅನುಭವಿಸುತ್ತಿರುವ ಯಾತನೆ ಪದಗಳಲ್ಲಿ ಹಿಡಿದಿಡಲು ಸಾಧ್ಯವೇ?' ಅನಿಸಿತು. ನಕ್ಸಲಿಸಂ ನಿಯಂತ್ರಣದ ಸೋಗಿನಲ್ಲಿ ಸರ್ಕಾರ ಮತ್ತು ಪೊಲೀಸ್ ವ್ಯವಸ್ಥೆ ಆದಿವಾಸಿಗಳ ಜೀವಗಳನ್ನು ಎಣ್ಣೆ ಕಡಾಯಿಗಳಲ್ಲಿ ಕರಿಯುತ್ತಿವೆ.

ಆದಿವಾಸಿಗಳ ನೋವಿಗೆ ಕೊಡೆ ಹಿಡಿದ ಆಕೆಯನ್ನು ನಕ್ಸಲರ ಪರವಾಗಿದ್ದಾಳೆ ಎಂದು ಪೊಲೀಸ್ ವ್ಯವಸ್ಥೆ ಬಿಂಬಿಸಿದರೆ, ಇತ್ತ ಆಕೆಯ ಗಂಡನಿಂದ ಪೊಲೀಸರಿಗೆ ತಮ್ಮ ಮಾಹಿತಿ ತಿಳಿಯುತ್ತಿದೆ ಎಂದು ನಕ್ಸಲರು ಅವರ ಮನೆಯ ಮೇಲೆ ದಾಳಿ ಮಾಡಿ; ತಂದೆಯ ಮೇಲೆ ಮನಸೋಇಚ್ಛೆ ಹಲ್ಲೆ ನಡೆಸಿರುವುದು ನೋಡಿದರೆ ಆಕೆಯ ಜೀವನ ಇಕ್ಕಳದಲ್ಲಿ ಸಿಕ್ಕಂತಾಗಿದೆ. ತನ್ನ ವಿರುದ್ಧ ನಡೆಯುತ್ತಿರುವ ಮಸಲತ್ತು, ಛತ್ತೀಸ್‌ಗಢ್‌ನ ಪೊಲೀಸರು ನಡೆಸಿರುವ ದೈಹಿಕ, ಮಾನಸಿಕ ಹಿಂಸೆಯ ಬಗ್ಗೆ ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಿ ತನ್ನ ವಕೀಲರ ಮೂಲಕ ಮಾಡಿದ ಮನವಿಗೆ ಸ್ಪಂದನೆ ದೊರೆಯದಿರುವುದು ಪ್ರಜಾಪ್ರಭುತ್ವದ ನೈಜ ಆಶಯಗಳು ಜೊಳ್ಳು ಕಾಳುಗಳಿಗಿಂತ ಕಡೆಯಾಗಿವೆ ಎನ್ನುವುದಕ್ಕೆ ಸಾಕ್ಷಿಯೆನ್ನುವಂತಿದೆ.

ಆದಿವಾಸಿಗಳ ಪರವಾಗಿ ಧ್ವನಿ ಎತ್ತುವುದೇ ತಪ್ಪೆನ್ನುವಂತೆ ಸೋನಿ ಸೋರಿ, ಲಿಂಗಾ, ಅನಿಲ್ ಫುಟಾಣೆ, ಮದ್ರಾ ಅವರ ಮೇಲೆ ಮುರುಕೊಂಡು ಬಿದ್ದು ಉಸಿರುಗಟ್ಟಿಸುತ್ತಿರುವ ಆಡಳಿತಶಾಹಿ, ಅಧಿಕಾರಶಾಹಿಯ ಮುಂದೆ ಸಾಮಾನ್ಯರು ನೆಮ್ಮದಿ ಕಂಡುಕೊಳ್ಳುವುದುಂಟೆ? ಓರ್ವ ಮಹಿಳೆಗೆ ಏನೆಲ್ಲಾ ಕಷ್ಟಕೊಟ್ಟು ಅಮಾನವೀಯವಾಗಿ ನಡೆಸಿಕೊಳ್ಳುತ್ತಿರುವುದು ಕಂಡರೂ ಛತ್ತೀಸ್‌ಗಡದ ಜನತೆ, ಇನ್ನೂ ಆಕೆಯನ್ನು ಕಾಮಾಲೆ ಕಣ್ಣಿನಿಂದ ಕಾಣುತ್ತಿರುವುದು ನೋಡಿದರೆ ಅದೆಷ್ಟು ಬೂದಿ ಉಗ್ಗಲಾಗಿದೆ ಎಂದು ತಿಳಿಯುತ್ತದೆ.

ನಾಡಮೃಗಗಳಿಂದ ಕಾಡು ಜೀವಗಳು ಕಳೆದುಕೊಂಡಿರುವ ಸಂತಸ ಮರಳಿ ಪಡೆಯುವುದು ಯಾವ ಕಾಲಕ್ಕೆ ಎನ್ನುವುದು ಪ್ರಶ್ನೆಯಾಗಿ ಕಾಡುತ್ತಿದೆ. 'ಆದಿವಾಸಿ ಮಹಿಳೆಗೆ ಪೊಲೀಸರ ಹಿಂಸೆ' ವರದಿಯ ಮೂಲಕ ಅಕ್ಷರದಿ ಆಕೆಯ ಕಣ್ಣೊರಸಿದ ಗೌರಿ ಅಕ್ಕನವರಿಗೆ ಕೃತಜ್ಞತೆಗಳು.

- ಬಸವರಾಜ ಹಳ್ಳಿ, ಹಸಮಕಲ್

ಹಿಂದಿ ನಟ ದೇವ್ ಆನಂದ್ ಅವರನ್ನು ಕುರಿತು ಗೌರಿ ಬೆಚ್ಚಗಿನ ಹೃದಯದಿಂದ ಬರೆದ ಹಳೆಯ ನೆನಪುಗಳು ಚೆನ್ನಾಗಿತ್ತು.

- ವಿದ್ಯಾಧರ ರೈ. ಎಂ.ಆರ್. ಪುತ್ತೂರು

ಇಂದಿರಾ ಲಂಕೇಶ ಅವರ ಬರಹ ತುಂಬಾ ಖುಷಿ ಕೊಡುತ್ತಿದೆ. ಲಂಕೇಶರನ್ನು ಕುರಿತು ಈಗಾಗಲೇ ಬಹಳಷ್ಟು ಜನ ಬಹಳಷ್ಟು ಲೇಖನಗಳನ್ನು ಬರೆದಿದ್ದಾರೆ. ಆದರೂ ಲಂಕೇಶರ ಜೀವನ ಸಂಗಾತಿಯಾದ ಇಂದಿರಾ ಅವರ ಬರಹ ಲಂಕೇಶರ ಮತ್ತೊಂದು ಮುಖವನ್ನು ಪರಿಚಯಿಸುತ್ತಿದೆ.

ಗಂಗಾವತಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಬಗ್ಗೆ ಶಶಿಧರ್ ಹೆಮ್ಮಾಡಿ ಬರೆದ ಲೇಖನ ಚೆನ್ನಾಗಿತ್ತು.

- ಇಸ್ಮತ್ ಪಜೀರ್, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಕಳೆದ ಸಂಚಿಕೆಯಲ್ಲಿ ಗೌರಿ ಲಂಕೇಶ್ ಬರೆದ "ಆದಿವಾಸಿ ಮಹಿಳೆಗೆ ಪೊಲೀಸರ ಹಿಂಸೆ" ಲೇಖನವನ್ನು ಓದಿ ಪೊಲೀಸರು ಇಷ್ಟೊಂದು ಕ್ರೂರವಾಗಿ ಮತ್ತು ಅಮಾನವೀಯವಾಗಿ ನಡೆದುಕೊಳ್ಳುತ್ತಾರೆ ಎಂದು ಅರಿತು ಬೆಚ್ಚಿಬಿದ್ದೆ.



ಸೋನಿ ಸೂರಿ ಎಂಬ ಆದಿವಾಸಿ ಮಹಿಳೆಗೆ ನೀಡಿರುವ ಹಿಂಸೆ ನೆನಸಿಕೊಂಡರೆ ಚಳಿ ಜ್ವರ ಬರುತ್ತೆ. ಸುಪ್ರೀಂಕೋರ್ಟ್ ಆಕೆಗೆ ನ್ಯಾಯ ದೊರಕಿಸಿಕೊಡಬೇಕು. ಜೊತೆಗೆ ಮದ್ರ ಮತ್ತು ಲಿಂಗಾ ಅವರಿಗೆ ನೈತಿಕ ಬೆಂಬಲ ಸೂಚಿಸಬೇಕಾದದ್ದು ನಮ್ಮ ಕರ್ತವ್ಯ ಕೂಡಾ ಆಗಿದೆ.

ಕುಂದಾಪುರದ ಶಶಿಧರ ಹೆಮ್ಮಾಡಿ ಅವರ 'ಗಂಗಾವತಿಯ ಧೂಳು, ಬಿಸಿಲು ಮತ್ತು ಮನುಷ್ಯರು' ವರದಿ ಓದಿ ಹೊಟ್ಟೆ ಹುಣ್ಣಾಗುವಷ್ಟು ನಕ್ಕೆ. 'ಲಂಕೇಶ್' ಆಫೀಸಿನ 'ದೈತ್ಯಾಕಾರ'ದ (ರಾಜು ಅಲ್ಲ) ಪ್ರಸಾದ್ ಮತ್ತು ಲಕ್ಷ್ಮಣ ಪುಸ್ತಕ ಮಾರಾಟದ ಸ್ಟಾಲ್‌ನಲ್ಲಿ ಹೆಮ್ಮಾಡಿ ಅವರಿಗೆ ಜೀವನದಲ್ಲಿ ಆಸಕ್ತಿ ಕಳೆದುಕೊಂಡವರಂತೆ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ನಮ್ಮ ಪ್ರಸಾದ್ ಮತ್ತು ಲಕ್ಷ್ಮಣ ತುಂಬಾ ಉಂಡರೂ ಹಾಗೇ ಕಾಣುತ್ತಾರೆ, ಹಸಿದಿದ್ದರೂ ಹಾಗೇ ಕಾಣುತ್ತಾರೆ.

ಅಮ್ಮ ಬರೆಯುತ್ತಿರುವ "ಹುಳಿಮಾವು ಮತ್ತು ನಾನು" ಲೇಖನ ನನಗಂತೂ ಓದುವುದಕ್ಕೆ ಹಬ್ಬ.




ಕಟ್ಟೆಪುರಾಣ ಇತ್ತೀಚೆಗೆ ಬೋರ್ ಹೊಡಿಸುತ್ತಾ ಇದೆ. ಗೌಡರು ಆ ಕಾಲಂ ನಿಲ್ಲಿಸಿ ಪತ್ರಿಕೆಗೆ ಅವರ ಜೀವನದ ಅನುಭವದ ಲೇಖನ ಬರೆಯಲಿ ಎಂದು ನನ್ನ ವಿನಂತಿ. ಹಾಗೆಯೇ ಪತ್ರಿಕೆಯ ಹಿರಿಯ ಲೇಖಕ ಎಚ್.ಎಲ್. ಕೇಶವಮೂರ್ತಿ ಅವರ 'ಅಣಕ' ಕೂಡ.

- ಶೂದ್ರ ಸಂತೋಷ್, ಅಜ್ಜಂಪುರ



ದೇವ್ ಜೊತೆ ಕಳೆದ ಒಂದು ಸಂಜೆಯ ನೆನಪು ತುಂಬಾ ಚೆನ್ನಾಗಿತ್ತು. ಅಮ್ಮ ಬರೆಯುತ್ತಿರುವ 'ಹುಳಿಮಾವು ಮತ್ತು ನಾನು' ಅಂಕಣ ಕೂಡ ತುಂಬಾ ಚೆನ್ನಾಗಿ ಬರುತ್ತಿದೆ. ಅವರು ಸರಳವಾಗಿ ಬರೆಯುತ್ತಿರುವುದೇ ಅದರ ಮುಖ್ಯ ಆಕರ್ಷಣೆ.

- ಪ್ರೇಮನಾಥ್, ಬೆಂಗಳೂರು




ನಮ್ಮ ರಾಜಕೀಯ ವಿರೋಧ ಪಕ್ಷದಂತೆ ಕೆಲಸ ಮಾಡುತ್ತಿರುವ 'ಲಂಕೇಶ್' ವಾರ ಪತ್ರಿಕೆ ಹೀಗೇ ಮುಂದುವರೆಯಲಿ.



- ಶಿಲ್ಪಾ. ಬಿ.ಪಾಟೀಲ್, ಎಸ್‌ಎಮ್‌ಎಸ್ ಮೂಲಕ

ಅಣ್ಣಾ ಹಜಾರೆ ಎಂಬ 'ಹಳ್ಳಿ ಯಜಮಾನ'ನನ್ನು ಅದು ಹೇಗೆ ಗಾಂಧಿವಾದಿ ಎನ್ನುತ್ತಾರೋ ಅರ್ಥವಾಗುವುದಿಲ್ಲ. ತಲೆಯ ಮೇಲೊಂದು ಟೋಪಿ, ಮಾತೆತ್ತಿದರೆ ಉಪವಾಸದ ಅಸ್ತ್ರ ಬಳಸುವ ಈತನಲ್ಲಿ ಗಾಂಧಿಗೆ ಸಂಬಂಧಿಸಿದ್ದು ಏನೂ ಇಲ್ಲ. ಅಕಸ್ಮಾತ್ ಸಮೂಹ ಸನ್ನಿಯಿಂದ ಬೆಳಕಿಗೆ ಬಂದ ಈತ ಸೂಕ್ಷ್ಮತೆಗಳ ಅರಿವೇ ಇಲ್ಲದ ದರ್ಜಿಷ್ಟ. ಭೂಗತಲೋಕದ ವ್ಯಕ್ತಿಗಳು ಮಾತನಾಡುವ ಶೈಲಿಗೂ, ಹಜಾರೆ ಮಾತನಾಡುವ ಶೈಲಿಗೂ ಯಾವುದೇ ವ್ಯತ್ಯಾಸವಿಲ್ಲ, ಆದರೆ ಹಜಾರೆ ಕೈಯಲ್ಲಿ 'ಭ್ರಷ್ಟಾಚಾರ ನಿರ್ಮೂಲನೆಗಾಗಿ' ಎಂಬ ನೆಪವಿದೆ ಅಷ್ಟೆ. ಯಡಿಯೂರಪ್ಪನಂಥ ಕೊಳಕು ಕ್ರಿಮಿಗಳಿಗೂ ಜನಬೆಂಬಲವಿರುವುದು




ಲು ಸಿಕ್ಕಿತು.
ಲೇ ಬಿಡುಗಡೆಯಾಗಿತ್ತು!
ತಾನ್ ಸಾಧಕನಿಗೆ ಸಲ್ಲುವ ಗೌರವ ಕಾಯ್ದಿತ್ತು ಜೈಲಿನ
!
ಯಿಯ ವ್ಯರ್ಥ ಮಾಡಲಿಲ್ಲ ಅವನು.
ಯಾತ್ರಾ ಸ್ಥಳಗಳಿಗೆ ಭೇಟಿ ನೀಡಿದ. ಮಠಗಳಿಗೆ ಹೋಗಿ
ಆಶೀರ್ವಚನ ಪಡೆದ.
ರಲ್ಲಿ......
ನ ಬಂಟ ಚಿಗಿತುಕೊಂಡಿದ್ದ.
ಸಾಮ್ರಾಜ್ಯದಲ್ಲಿ ಬಿರುಕು ಮೂಡಿಸಲು ಪ್ರಯತ್ನಿಸುತ್ತಿದ್ದ.
ಮಿಡಿಗೊಂಡ ರೌಡಿ.
ನನ್ನು ಮುಗಿಸಲು ಸ್ಕೆಚ್ ಹಾಕಿದ.
ಮುಗಿಸಿಯೇ ಬಿಟ್ಟನಾ' ಎಂದು ಕಿರುಚಿದ.
ಹಾಳಾದ ಹಗಲುಗನಸು. ಜೈಲಿಗೆ ಹೋಗಿ ಬೇಲ್
ಹೊರಬಂದಿದ್ದ ರಾಜಕಾರಣಿ ಹಾರಾಡುತ್ತಿದ್ದುದನ್ನು
ಲ್ಲಿ ನೋಡಿದ್ದೇ ಹಾಳಾದ ನಿದ್ದೆ ಕೆಡಿಸಿತ್ತು!

ದಾ ಆಚಾರ್ಯರೆ?

ನೋಡಿದರೂ ಎಂಜಲು ಸ್ನಾನದ್ದೇ ಸುದ್ದಿ.
ಜಲು ಸ್ನಾನದಿಂದ ಚರ್ಮರೋಗ ವಾಸಿಯಾದರೂ
ದು. ಇದು ಸುಳ್ಳು ಎನ್ನಲು ನಾವು ಯಾರು?
ವೈದ್ಯರು ಇದಕ್ಕೆ ಉತ್ತರಿಸಬೇಕು. ಆದರೆ ಅವರು
ವಾಗಿದ್ದಾರೆ!
ಸಿಗುವುದು ಸತ್ಯ?
ರತೀಯ ವೈದ್ಯಕೀಯ ಸಂಸ್ಥೆ (ಎಂ.ಸಿ.ಐ)ಯಲ್ಲಿ
ಆದಕ್ಕೆ ಏನು ಹೇಳುತ್ತಾರೋ ತಿಳಿಯದು. ಡಾ.
ಆಚಾರ್ಯ ವೈದ್ಯರು ತಾನೆ? ಆ ಸಂಸ್ಥೆಯಿಂದ
ದು ನೋಂದಾಯಿಸಲ್ಪಟ್ಟವರು. ಅದರ ಎದುರು
ಸ್ನಾನದಿಂದ ಚರ್ಮರೋಗ ವಾಸಿಯಾಗುತ್ತದೆ
ಹೇಳಲು ಅವರು ಸಿದ್ಧರಿದ್ದಾರಾ? ಹಾಗೆ ಮಾಡಿದರೆ
ಪರಿಹಾರ ಸಿಗುತ್ತದೆ. ಆದರೆ ಅವರು ಸಿದ್ಧರಿಲ್ಲ.
ಗಾದರೂ ಮಾಡಿದರೆ ಅವರ ಡಿಗ್ರಿಯನ್ನೇ
ಗೋಲು ಹಾಕಿಕೊಳ್ಳುತ್ತದಂತೆ!
ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಎಂದ
ತು.
ವಾ ಆಚಾರ್ಯರೆ?

ರಂಗಣ್ಣ ಹೋಗೇಬಿಟ್ಟ!



"ಕಂಠೀರವ' ಸಿನಿಮಾ ಚಿತ್ರೀಕರಣಗೊಳ್ಳುತ್ತಿದ್ದ ವೇಳೆ ಆ ಚಿತ್ರದ ನಿರ್ದೇಶಕ ತುಷಾರ್ ರಂಗನಾಥ್ ಹೃದಯಾಘಾತಕ್ಕೊಳಗಾಗಿ ಸಾವನ್ನಪ್ಪಿದರು"

– ಒಂದೂವರೆ ವರ್ಷಗಳ ಹಿಂದೆ ನ್ಯೂಸ್ ಚಾನೆಲ್‌ಗಳಲ್ಲಿ ಇಂತಹ ಸುದ್ದಿ ಬಿತ್ತರಗೊಂಡಾಗ ಇಡೀ ಕನ್ನಡ ಚಿತ್ರರಂಗ ಆಘಾತಕ್ಕೊಳಗಾಗಿತ್ತು. "ಹೌದಾ" ಎನ್ನುವಷ್ಟರಲ್ಲಿ ಈ ಸುದ್ದಿ ಸುಳ್ಳೆಂದು ಸಾಬೀತಾಗಿ, ಹೃದಯನಾಳ ಮುಚ್ಚಿಕೊಂಡಿದ್ದರಿಂದ ಕುಸಿದು ಬಿದ್ದ ರಂಗನಾಥ್ ಮೈಸೂರಿನ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಗೊತ್ತಾಗಿತ್ತು.

ರಂಗನಾಥ್‌ರ ಮಿತ್ರರೂ ಸೇರಿದಂತೆ ಎಲ್ಲರೂ ನಿಟ್ಟುಸಿರುಬಿಟ್ಟಿದ್ದರು!

ಆನಂತರ "ದುನಿಯಾ ವಿಜಯ ಮುಂದಿನ ಸಿನಿಮಾ 'ಗಾಂಧಿ ಕ್ಲಾಸ್'. ಇನ್ನು ಕೆಲವೇ ದಿನಗಳಲ್ಲಿ ಸಿನಿಮಾ ಸೆಟ್ಟೇರುತ್ತದೆ. ಕಷ್ಟದ ದಿನಗಳಲ್ಲೂ ವಿಜಯ ಜೊತೆಗಿದ್ದ ಅವರ ಪ್ರಾಣಸ್ನೇಹಿತ ತುಷಾರ್ ರಂಗನಾಥ್ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ" ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು.



ಆದರೆ ವಿಧಿ ಆ ಸುದ್ದಿಯನ್ನು ಬದಲಿಸಿಬಿಟ್ಟಿದೆ.

ಮೊನ್ನೆ "ದುನಿಯಾ ವಿಜಯ್ ನಟಿಸಬೇಕಿದ್ದ 'ಗಾಂಧಿ ಕ್ಲಾಸ್' ಚಿತ್ರದ ನಿರ್ದೇಶಕ ತುಷಾರ್ ರಂಗನಾಥ್ ಕೊನೆಯುಸಿರೆಳೆದಿದ್ದಾರೆ" ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು.

ಅದು ನಿಜವಾಗಿತ್ತು. ಇನ್ನೂ ಮೂವತ್ತಾರು ದಾಟಿರದ ತುಷಾರ್ ರಂಗನಾಥ್ ಉಸಿರು ನಿಲ್ಲಿಸಿಬಿಟ್ಟಿದ್ದಾರೆ.

ಶಿವರಾಜ್‌ಕುಮಾರ್ ನಟಿಸಿದ್ದ 'ರಾಕ್ಷಸ', ದರ್ಶನ್ ನಟಿಸಿದ್ದ 'ಸುಂಟರ ಗಾಳಿ' ಸೇರಿದಂತೆ ನಿರ್ಮಾಪಕ ರಾಮು ಅವರ ಬ್ಯಾನರ್‌ನಲ್ಲಿ ಪರ್ಮನೆಂಟ್ ರೈಟರ್ ಆಗಿದ್ದ ರಂಗನಾಥ್ ಲೋಕಲ್ ಲಾಂಗ್ವೇಜ್ ಬಳಕೆಯಿಂದಲೇ ಚಿತ್ರರಂಗದಲ್ಲಿ ಹೆಸರು ಮಾಡಿದವರು. ತೆರೆಮೇಲೆ ಯಾವ ಹೀರೋ ಎಂಥ ಡೈಲಾಗ್ ಹೊಡೆದರೆ ಅಭಿಮಾನಿಗಳು ಹುಚ್ಚೆದ್ದು ಕುಣಿಯುತ್ತಾರೆ ಎಂಬ ನಾಡಿಮಿಡಿತ ರಂಗನಾಥ್‌ಗೆ ಗೊತ್ತಿತ್ತು. ಹತ್ತಾರು ಕಮರ್ಷಿಯಲ್ ಸಿನಿಮಾಗಳಿಗೆ ಸಂಭಾಷಣೆ ಬರೆದಿದ್ದ ರಂಗನಾಥ್ ಐವತ್ತಕ್ಕೂ ಹೆಚ್ಚು ಹಾಡುಗಳನ್ನೂ ಬರೆದಿದ್ದರು. 'ದುನಿಯಾ' ಚಿತ್ರದ 'ಪ್ರೀತಿ ಮಾಯೆ ಹುಷಾರೂ... ಕಣ್ಣೀರ್ ಮಾರೋ ಬಜಾರೂ...' ಮತ್ತು 'ನಿನ್ನಾಣೆ ನಿನ್ನಾಣೆ ಪ್ರೀತಿ ದೇವತೆಯೆ ನಿನ್ನಾಣೆ' ತರಹದ ಹಿಟ್ ಸಾಂಗುಗಳನ್ನು ಬರೆದದ್ದು ಇದೇ ರಂಗಣ್ಣ.

ಪೊಲೀಸ್ ಕಾನ್ಸ್‌ಟೇಬಲ್ ಮಗನಾಗಿ ಹುಟ್ಟಿ ಬೆಂಗಳೂರಿನಲ್ಲೇ ಓದಿ ಬೆಳೆದ ರಂಗಣ್ಣ ಸಿನಿಮಾ ಹುಚ್ಚು ಹತ್ತಿಸಿಕೊಂಡಿದ್ದು ಉಪೇಂದ್ರರಿಂದ. ಹೇಗಾದರೂ ಮಾಡಿ ಉಪ್ಪಿ ಜೊತೆ ಕೆಲಸ ಮಾಡಬೇಕು ಎಂಬ ಕನಸನ್ನು ಈಡೇರಿಸಿಕೊಂಡ ರಂಗನಾಥ್ ಉಪ್ಪಿ ನಟಿಸಿದ್ದ 'ಆಟೋ ಶಂಕರ್' ಚಿತ್ರದಲ್ಲಿ ಅಸೋಸಿಯೇಟ್ ಆಗಿ ಕೆಲಸ ಮಾಡಿದ್ದರು.

ರಂಗನಾಥ್, ಪ್ರಜ್ವಲ್ ದೇವರಾಜ್ ನಟಿಸಿದ್ದ 'ಗುಲಾಮ' ಮತ್ತು ವಿಜಯ್ ನಟಿಸಿದ್ದ 'ಕಂಠೀರವ' ಚಿತ್ರಗಳನ್ನು ನಿರ್ದೇಶಿಸಿದ್ದರು. 'ಗುಲಾಮ' ಫ್ಲಾಪ್ ಆಗಿದ್ದರೆ 'ಕಂಠೀರವ' ನಿರ್ಮಾಪಕರ ಜೇಬನ್ನಷ್ಟೇ ಉಳಿಸಿತ್ತು. ತನ್ನ ಗೆಳೆಯರೆಲ್ಲಾ ಯಶಸ್ಸು ಕಂಡಿದ್ದಾರೆ, ತಾನೂ ಅವರಂತೆ ಸೂಪರ್ ಹಿಟ್ ಚಿತ್ರವನ್ನು ಕೊಡಬೇಕೆಂದೇ ಕಳೆದ ಎಂಟು ತಿಂಗಳಿಂದ ರಂಗನಾಥ್, ಗೆಳೆಯ ವಿಜಿಗೆ ಹೊಂದುವಂತಹ 'ಗಾಂಧಿ ಕ್ಲಾಸ್' ಚಿತ್ರಕ್ಕೆ ಸ್ಕ್ರಿಪ್ಟು ಬರೆದಿಟ್ಟುಕೊಂಡಿದ್ದರು.

ಆದರೆ ಅವರು ತಮ್ಮ ಗುರಿ ತಲುಪುವ ಮುನ್ನವೇ ಸಾವು ಅವರನ್ನು ಕರೆದುಕೊಂಡು ಹೋಯಿತು...

ಲ್ಲಿ, 'ನರ್ಸ್' ರೇಣುಕಾಚಾರ್ಯನಂಥವನಿಗೇ
ನಿ ಸಂಘಗಳಿದ್ದರೆ ಅದರಲ್ಲಿ ಅತಿಶಯೋಕ್ತಿಯೇನೂ
ದು. ಏಕೆಂದರೆ ವಕ್ರರೂಪದಲ್ಲಿ ಬೆಳವಣಿಗೆ
ತ್ತಿರುವ ಇವತ್ತಿನ ಭಾರತದ ಸಂದರ್ಭದಲ್ಲಿ
ರುಂಥವರು ಗಾಂಧಿಗೆ ಪ್ರತಿರೂಪವಾಗಿ ಬಿಂಬಿಸ
ಅದರಲ್ಲಿ ಕೂಡ ಅತಿಶಯೋಕ್ತಿಯೇನೂ ಇಲ್ಲ.
ಜನಾರ್ದನ ರೆಡ್ಡಿಯನ್ನು ಗಾಂಧಿಗೆ ಹೋಲಿಸಿದ್ದ
ಮುಲುನನ್ನು ಬಳ್ಳಾರಿಯ 'ಜನ' ಅತ್ಯಧಿಕ
ದ ಗೆಲ್ಲಿಸಿದ್ದಾರೆ. ಯಡಿಯೂರಪ್ಪನನ್ನು ಆಧುನಿಕ
ಎಂದ ರೇಣುಕಾಚಾರ್ಯನನ್ನು ಪ್ರಜ್ಞಾವಂತರೆನಿಸ
ರು ಕೂಡ ಧಿಕ್ಕರಿಸಿ ಉಗಿದದ್ದಿಲ್ಲ. ಹೀಗಿರುವಾಗ
ರುಂಥ ಅರೆ ಬೆಂದ ಸರ್ವಾಧಿಕಾರಿ ಮನೋಭಾವ
ಬೆಳೆಸಬಲ್ಲ, ತಲೆಯಮೇಲಿಟ್ಟುಕೊಂಡು
ಬಲ್ಲ ಸಮಯಸಾಧಕರಿಗೆ ಈ ಭಾರತದಲ್ಲಿ
ಏನೂ ಇಲ್ಲ.
ಸ್ವಲ್ಪ ಸೂಕ್ಷ್ಮ ಮನಸ್ಸಿದ್ದವರಿಗೆಲ್ಲಾ ಅರ್ಥವಾಗುತ್ತೆ,
ರುದು ವ್ಯರ್ಥ ಕಸರತ್ತು ಎಂದು. ಕಾವಲನ್ನು
ಸಿ ಪಿಡುಗನ್ನು ನಿರ್ಮೂಲನೆ ಮಾಡುತ್ತೇವೆ
ಹಾಸ್ಯಾಸ್ಪದ ವಿಷಯ. ಇದರಿಂದ ಹೆಚ್ಚೆಂದರೆ
ರು ಕೈ ಬದಲಾಗಬಹುದಷ್ಟೆ. ಪ್ರತಿಯೊಬ್ಬ
ನ ಮನಸ್ಸು ತಿದ್ದುಪಡಿಯಾಗದೆ ಅವನ
ರುನ್ನು ತಿದ್ದಲಾಗುವುದಿಲ್ಲ. ಇಂದು ಯಾಕೋ
ಜನರ ಮನಸ್ಸು ವಕ್ರಗತಿಯಲ್ಲಿ ಬೆಳವಣಿಗೆ
ದೆ. ಇದು ದುರಂತದ ಸಂಗತಿ. ಇದನ್ನು ತಿದ್ದಲು
ಲದ ಕಾರ್ಯಸೂಚಿಯ ಅಗತ್ಯವಿದೆಯೇ
ಹಜಾರೆ ಗಿಜಾರೆಗಳೆಲ್ಲಾ ಅಲ್ಲ, ಹಜಾರೆ ಹೆಚ್ಚೆಂದರೆ
ಬಾಣಲೆಯಿಂದ ಬೆಂಕಿಗೆ ದೂಡಬಲ್ಲ ಅಷ್ಟೇ.
ಬಿಂದ ಬಚಿಬಿಗೆ?)

- ಟಿ.ಎಂ.ಕೃಷ್ಣ ಬೆಂಗಳೂರು

ಪತ್ರ ಮತ್ತು
ಈ-ಮೇಲ್ ಜೊತೆಗೆ
ಇನ್ನು ಮುಂದೆ ನಿಮ್ಮ
ಪ್ರತಿಕ್ರಿಯೆಗಳನ್ನು
9980331427 ನಂಬರ್‌ಗೂ
ಚಿಕ್ಕದಾಗಿ ಮತ್ತು ಚೊಕ್ಕದಾಗಿ
ಕಳುಹಿಸಬಹುದು.

ಒಂದು ಪತ್ರ

ಮಡೆಸ್ನಾನದಿಂದ ಚರ್ಮರೋಗ, ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ!

5,000 ವರ್ಷಗಳಿಂದ ಈ ಜಗತ್ತಿನಲ್ಲಿ ಅತಿಹೆಚ್ಚು ದುರುಪಯೋಗವಾದ ಶಬ್ದವೊಂದಿದ್ದರೆ ಅದು 'ದೇವರು' ಎಂಬ ಶಬ್ದ. ಹೆಣ್ಣು, ಹೊನ್ನು, ಮಣ್ಣಿಗಾಗಿ ನಡೆದ ರಕ್ತಪಾತದ ನೂರಾರು ಪಟ್ಟು ಹೆಚ್ಚು ರಕ್ತಪಾತ ದೇವರು (ಧರ್ಮ) ಎಂಬ ಹೆಸರಿನಡಿ ಆಗಿದೆ. ಜಗತ್ತಿನಲ್ಲಿ ಅತಿದೊಡ್ಡ ಶೋಷಣೆ, ವಂಚನೆಗಳು ನಡೆಯುವುದು 'ದೇವರು' ಎಂಬ ಸಣ್ಣ ಶಬ್ದದ ಅಡಿಯಲ್ಲೇ. ಟಿವಿ ರಿಯಾಲಿಟಿ ಶೋಗಳ ಡ್ಯಾನ್ಸ್ ಸ್ಪರ್ಧೆಗಳಲ್ಲಿ ಸ್ಪರ್ಧಿಗಳು ಡ್ಯಾನ್ಸ್‌ಗಿಂತ ಹೆಚ್ಚಾಗಿ ಕಸರತ್ತು, ಸರ್ಕಸ್ಸು, ದೊಂಬರಾಟ ಪ್ರದರ್ಶಿಸಿ ಜಡ್ಜ್‌ಗಳನ್ನು ಮೆಚ್ಚಿಸಿ ಹೆಚ್ಚು ಅಂಕ ಗಳಿಸಿದಂತೆ, ದೇವರಿಂದ ಹೆಚ್ಚು ಅಂಕ ಗಳಿಸಲು ಮಡೆಸ್ನಾನದಂತಹ ಹೀನ ಕಸರತ್ತಿನಿಂದ ಸಾಧ್ಯವೆಂದು ವಂಚಕರು ಮುಗ್ಧ ಜನರನ್ನು ನಂಬಿಸಿದಂತಿದೆ.

ದೇವರ ಬಾಯಿಗೆ ಮೈಕ್ ಹಿಡಿದು ದೇವರ ನೇರ ಸಂದರ್ಶನ ನಡೆಸಿ ದೇವರ ಇಷ್ಟ-ಅನಿಷ್ಟಗಳನ್ನು ಸ್ವತಃ ಕೇಳಿಬಂದವರಂತೆ ಮಾತನಾಡುವ ಮಠಾಧೀಶ-ಪುರೋಹಿತರಿಂದಾಗಿ ಸಮಾಜ ಹಿಮ್ಮುಖವಾಗಿ ನಡೆಯುತ್ತಿದೆ. ಭಾರತದಲ್ಲಿ ಪ್ರತಿ ದೇವಸ್ಥಾನಕ್ಕೊಂದು ಕಾಲ್ಪನಿಕ ಕ್ಷೇತ್ರ ಪುರಾಣ ಕಟ್ಟಿ, ಕಾಲ್ಪನಿಕ ಋಷಿಯೊಬ್ಬ ತಪಸ್ಸು ಮಾಡಿದ ಸ್ಥಳ, ದೇವರು ವಿಚಿತ್ರ ರೂಪದಲ್ಲಿ ರಾಕ್ಷಸನನ್ನು ಕೊಂದ ಸ್ಥಳ ಎಂಬೆಲ್ಲಾ ಕಥೆ ಕಟ್ಟಿ, ಪ್ರತಿವರ್ಷ ದೇವರ 'ಮ್ಯಾರೇಜ್-ಆನಿವರ್ಸರಿ' ಸಹಾ ಮಾಡಿ, ಅನಿಷ್ಠ ಸಂಪ್ರದಾಯಗಳನ್ನು ಹುಟ್ಟುಹಾಕುವುದು ಅತಿಸುಲಭ. ಕಾರಣ ಎಂತಹ ಬಾಲಿಶ ಕಥೆಯನ್ನೂ ದೇವರ ಹೆಸರಲ್ಲಿ ಹೇಳಿದರೆ ಸಾಕು ನಂಬುವ ಕುರಿಗಳು ದಂಡಿಯಾಗಿವೆ.

ದೇವರು ಅತಿ-ಮಾನುಷ ಶಕ್ತಿಯುಳ್ಳವ ಆದರೆ ದಡ್ಡ, ಬುದ್ಧಿ ಮಾಂದ್ಯ, ಹಾಗಾಗಿ ವಿಚಿತ್ರ ಹರಕೆ (ಲಂಚದ ಆಮಿಷ)ಗಳಿಂದ ಆ ದಡ್ಡ ದೇವರನ್ನು ಸುಲಭವಾಗಿ ಮೆಚ್ಚಿಸಬಹುದೆಂಬ ಭ್ರಮೆಯೇ ಹೆಚ್ಚು ಜನರಲ್ಲಿದೆ. ಹಾಗಾಗಿ ಹೆಚ್ಚಿನ ಕ್ರಿಮಿನಲ್‌ಗಳು-ರಾಜಕಾರಣಿಗಳು ದುಷ್ಟ ಕೆಲಸ ಮಾಡಿ ಸಿಕ್ಕಿಬಿದ್ದ ನಂತರ ಕಾನೂನಿನಲ್ಲಿರುವ ಲೂಪ್‌ಹೋಲ್‌ಗಳ ಲಾಭ ಪಡೆದು ಕೋರ್ಟ್‌ನಿಂದ ಖುಲಾಸೆ ಆದ ತಕ್ಷಣ ಕೊಡುವ ಹೇಳಿಕೆಯೇನೆಂದರೆ "ನಾನು ನಿರಪರಾಧಿಯಾದುದರಿಂದ ನನಗೆ ದೇವರೇ ಸಹಾಯ ಮಾಡಿದನು." ಮುಂದೊಮ್ಮೆ ಗಣಿಗಳ್ಳ ರೆಡ್ಡಿಯೂ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಂಡಾಗ ಹೀಗೆ ಹೇಳುವುದು ಖಂಡಿತ. ಅಕ್ರಮ ಗಣಿಯ ಕಳ್ಳ ಹಣದಿಂದ ತಿರುಪತಿ ತಿಮ್ಮಪ್ಪನಿಗೆ 45 ಕೋಟಿಯ ಕಿರೀಟ ಕೊಟ್ಟು ಈಗ ಜೈಲಿನಲ್ಲಿರಬೇಕಾದ ಸಂದರ್ಭದಲ್ಲಿ ರೆಡ್ಡಿ ಹೇಳುತ್ತಿರುವುದು ತನ್ನ ಹೆಸರನ್ನು ಆ ಕಿರೀಟದ ಮೇಲೆ ಕೊರೆಸಿದ್ದರಿಂದ ದೇವರು ಮುನಿಸಿದ್ದಾನೆ ಎಂಬುದಾಗಿಯೇ ಹೊರತು, ತನ್ನ ಗಣಿಗಳ್ಳತನ ಹಾಗೂ ಹಫ್ತಾ ವಸೂಲಿಗಾಗಿ ಕಾನೂನು ತನಗೆ ಜೈಲು ಶಿಕ್ಷೆ ಕೊಟ್ಟಿದ್ದು ಎಂದು ರೆಡ್ಡಿ ಭಾವಿಸಿಯೇ ಇಲ್ಲ. ಪಶ್ಚಾತ್ತಾಪದ ಮಾತು ಒತ್ತಟ್ಟಿಗಿರಲಿ. ಅಂದರೆ ರೆಡ್ಡಿಯ ಪ್ರಕಾರ ದೇವರೊಬ್ಬ ಸ್ವಪ್ರತಿಷ್ಠೆಯುಳ್ಳ ಇಗೋಯಿಸ್ಟ್ ಹಾಗೂ ದುಷ್ಟ ಮತ್ತು ಶಿಷ್ಟರ ನಡುವಿನ ಅಂತರ ಗುರುತಿಸಲಾಗದ ಸ್ವಾರ್ಥಿ, ದಡ್ಡ ಎಂದಂತಾಯಿತಲ್ಲವೇ?

ಸಿಕ್ಕ-ಸಿಕ್ಕ ದೇವಾಲಯಕ್ಕೆ ನುಗ್ಗುವ ಹಾಗೂ ಚಿಕ್ಕ ಮಕ್ಕಳು ಬಾಲಕೃಷ್ಣ ಬಾಲ ಸುಬ್ರಹ್ಮಣ್ಯ ದೇವರ ಪ್ರತೀಕ ಎಂದು ಕೊಂಡಾಡುವ ಯಡ್ಡಿಯು ಅಂಗನವಾಡಿಯ ಮುಗ್ಧ ಬಡ ಮಕ್ಕಳ ತಟ್ಟೆಗೇನೇ ಕೈಹಾಕಿ ನಿಸ್ಸಹಾಯಕ ಮಕ್ಕಳ ಪಾಲಿನ ಆಹಾರ ಕಬಳಿಸಿ ತನ್ನ ರಣಹದ್ದುಗಳಂತಹ ಮಕ್ಕಳ ಹೊಟ್ಟೆಗೆ ಕೋಟ್ಯಂತರ ತುಂಬಿದ ಮಹಾಭ್ರಷ್ಟ. ಯಡ್ಡಿ ದೇವರು ಸಹಾ ತನ್ನಂತೆ ಭ್ರಷ್ಟ ಎಂದು ಭಾವಿಸಿದ್ದರಿಂದಲೇ ಅಲ್ಲದೇ ತನ್ನ ಭ್ರಷ್ಟ ಹಣದಿಂದ ದೇವರನ್ನು ಸಂಪ್ರೀತಿಗೊಳಿಸಲು ದುಬಾರಿ ಪೂಜೆ, ಹೋಮ, ಮಾಟ ಮಾಡಿಸುತ್ತಿರುವುದು. "ಸರ್ಕಾರದ ಕೆಲಸ ದೇವರ ಕೆಲಸ. ಹಾಗಾಗಿ ದಕ್ಷಿಣೆ ಕೊಡಲು ಒಳಗೆ ಬಾ ಯಾತ್ರಿಕನೇ" ಎನ್ನುವ ಬೋರ್ಡ್ ವಿಧಾನಸೌಧದ ಎದುರು ಸೂಕ್ತ.

ಯಡ್ಡಿ ಮತ್ತು ಮಕ್ಕಳು ಹಲವಾರು ಬಾರಿ ಭೇಟಿ ಮಾಡಿರುವ ಕುಕ್ಕೆ ಕ್ಷೇತ್ರದಷ್ಟೇ (ಒಂದು ಸಾವಿರ ವರ್ಷ) ಹಳೆಯದಾದ ಇನ್ನೊಂದು ಸುಬ್ರಹ್ಮಣ್ಯ ಕ್ಷೇತ್ರ ಮೂಡಬಿದ್ರೆಯ ಹತ್ತಿರದ ಕಡಂದಲೆ ಎಂಬ ಊರಲ್ಲಿದೆ. ಒಬ್ಬನೇ ಶಿಲ್ಪಿಯಿಂದ ಕುಕ್ಕೆ ಹಾಗೂ ಕಡಂದಲೆ ಎರಡೂ ಸುಬ್ರಹ್ಮಣ್ಯ ಮೂರ್ತಿಗಳನ್ನು ಕೆತ್ತಿ ಪ್ರತಿಷ್ಠಾಪಿಸಲ್ಪಟ್ಟದ್ದು. ಎರಡೂ ಅಷ್ಟೇ ಕಾರಣಿಕದ ಕ್ಷೇತ್ರಗಳೆಂದು ಪ್ರತೀತಿ ಇದ್ದರೂ ಕಡಂದಲೆ ಕ್ಷೇತ್ರದಲ್ಲಿ ಇಲ್ಲದ ಮಡೆಸ್ನಾನದಂತಹಾ ಹೀನ ಪ್ರಥೆ ಕುಕ್ಕೆಯಲ್ಲಿ ಹೇಗೆ ಹಾಗೂ ಯಾವಾಗ ಶುರುವಾಯಿತು ಎಂಬ ಸಂಶೋಧನೆಯಾಗಬೇಕಿದೆ.

ಉಡುಪಿ ಶ್ರೀಕೃಷ್ಣ ದೇವಸ್ಥಾನದಲ್ಲೂ ಮಡೆಸ್ನಾನ ಇದೆಯಂತೆ. ಅಂದರೆ ಉಡುಪಿ ಸಹಾ ಮೂಲತಃ ಶೈವ ಕ್ಷೇತ್ರವಾಗಿತ್ತು ಹಾಗೂ ಮಧ್ವಾಚಾರ್ಯರು "ದೇವರನ್ನೇ ಮತಾಂತರಿಸಿದ್ದಾರೆ" ಎಂಬ ಹಳೆಯ ವಾದಕ್ಕೆ ಪುಷ್ಟಿ ದೊರೆತಂತಾಯಿತಲ್ಲವೇ? ಹಾಗೆ ನೋಡಿದರೆ ಈಗಲೂ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಹೆಚ್ಚಿನ ಎಲ್ಲಾ ಶೈವ ಕ್ಷೇತ್ರಗಳು ವೈಷ್ಣವ ಪುರೋಹಿತರ ಕಪಿಮುಷ್ಠಿಯಲ್ಲಿ ಸಿಲುಕಿ ಗಬ್ಬೆದ್ದು ಹೋಗಿವೆ. ಭಾರತದ ಯಾವುದೇ ಪ್ರದೇಶದಲ್ಲಿ ಇಲ್ಲದ ವೈಷ್ಣವರ ಪೌರೋಹಿತ್ಯ (ಧರ್ಮಸ್ಥಳ, ಕಟೀಲು ಸಹಿತ) ಕೇವಲ ತುಳುನಾಡಿನಲ್ಲಿ ಏಕಿರಬೇಕು?

ವೈಷ್ಣವ ವಿ.ಎಸ್. ಆಚಾರ್ಯರು ಕುಕ್ಕೆಯಲ್ಲಿ ಮಡೆಸ್ನಾನವನ್ನು ನಿಷೇಧಿಸಬೇಕೇ ಬೇಡವೇ ಎಂದು ತಿಳಿಯಲು ಅಷ್ಟಮಂಗಳ ಪ್ರಶ್ನೆ ಇಡಿಸುತ್ತಾರಂತೆ. ಅಷ್ಟಮಂಗಳಗಳೆಲ್ಲಾ ನೂರಕ್ಕೆ-ನೂರು ನಾಟಕ ಹಾಗೂ ಪೂರ್ವನಿರ್ಧಾರದಂತೆ ಕೇವಲ ಸ್ಥಾಪಿತ ಹಿತಾಸಕ್ತಿಗಳಿಗೆ ಅನುಗುಣವಾಗಿದ್ದದ್ದೇ ಅಷ್ಟಮಂಗಳದಲ್ಲಿ ಕಂಡುಬರುವುದು ಎಂದು ಈಗಾಗಲೇ ಸಾಬೀತಾಗಿದೆ. ಅದಕ್ಕಾಗಿಯೇ ಕೇರಳದ ಅನಂತಪದ್ಮನಾಭನ ಖಜಾನೆಯ ಬಾಗಿಲು ತೆಗೆಸುವ ವಿಚಾರದಲ್ಲಿ ನಡೆದ ಅಷ್ಟಮಂಗಳವನ್ನು ಸುಪ್ರೀಂಕೋರ್ಟ್ ಸಾರಾಸಗಟಾಗಿ ತಿರಸ್ಕರಿಸಿದೆ.

ಹಿಂದೂ ಧರ್ಮದಲ್ಲಿರುವ ಎಲ್ಲಾ ಅನಿಷ್ಟ ಪ್ರಥೆಗಳಿಗೂ ವಿಜ್ಞಾನದ ಅಥವಾ ಔಷಧಿ-ಆರೋಗ್ಯದ ತಳಹದಿ ಇದೆಯೆಂದು ಸಮರ್ಥಿಸುವ ವ್ಯವಸ್ಥಿತ ತಂತ್ರ ಈಗ ಬಹಳ ನಡೆಯುತ್ತಿದೆ. ಪ್ರತಿಯೊಂದು ಮೂಢ ನಂಬಿಕೆಯ ಹಿಂದೆ ಸದುದ್ದೇಶವಿದೆಯೆಂದು ವಿತಂಡ ವಾದ ಮಾಡಿ ಕುತರ್ಕ ಮಂಡಿಸುವವರು ವಿದ್ಯಾವಂತರಲ್ಲೇ ಹೆಚ್ಚುತ್ತಿದ್ದಾರೆ. ಮೊದಲೆಲ್ಲಾ ಮಡೆಸ್ನಾನ ಒಂದು ಹರಕೆ ಅಷ್ಟೆ ಎಂದು ಎಲ್ಲರೂ ಹೇಳುತ್ತಿದ್ದರು. ಆದರೆ ಈಗ 3-4 ವರ್ಷದಿಂದೀಚೆಗೆ ಅದಕ್ಕೆ ಚರ್ಮರೋಗ ನಿವಾರಕ ಶಕ್ತಿಯಿದೆಯೆಂದು ಕುತರ್ಕಿಗಳು ಪ್ರಚಾರ ಮಾಡುತ್ತಿದ್ದಾರೆ. ನಿಜವಾಗಿ ಮಡೆಸ್ನಾನದಿಂದ ಒಬ್ಬರಲ್ಲಿರುವ ಚರ್ಮರೋಗ ಅಥವಾ ಬೇರೆ ಸಾಂಕ್ರಾಮಿಕ ರೋಗ ಇನ್ನೊಬ್ಬರಿಗೆ ಹರಡುವ ಸಾಧ್ಯತೆಯೇ ಹೆಚ್ಚು.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 4-01-2012 RNI No. KARKAN2005/14...



ಬಿಕಿನಿ ತೊಟ್ಟ ಬಿಂದಾಸ್ ಬಾಲೆಯರು

ಕೊನೆಗೂ ಐಂದ್ರಿತಾ ರೈ ಮತ್ತು ನಿಧಿ ಸುಬ್ಬಯ್ಯ ಎಂಬ ಕನ್ನಡದ ನಾಯಕಿಯರು ಟೂ-ಪೀಸ್ ಸ್ವಿಮ್ ಸೂಟ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಆದರೆ ಅವರು ಈಜುಡುಗೆ ಧರಿಸಿದ್ದು ಯಾವುದೋ ಸಿನಿಮಾಗಾಗಲ್ಲ, ಬದಲಾಗಿ ಒಂದು ಕ್ಯಾಲೆಂಡರ್‌ಗೆ. ಅದೂ ಸೆಲೆಬ್ರಿಟಿ ಕ್ರಿಕೆಟ್ ಪಂದ್ಯಾವಳಿಯ ಅಂಬಾಸಿಡರ್‌ಗಳಾಗಿ ಮೆರೆದ ಹನ್ನೆರಡು ನಾಯಕನಟಿಯರು ಬಿಕಿನಿ ತೊಟ್ಟು ಪೋಸ್ ಕೊಟ್ಟಿರುವ ಕ್ಯಾಲೆಂಡರ್‌ನಲ್ಲಿ.

ಇದನ್ನು ನೋಡಿದ ಗಾಂಧಿನಗರದವರು 'ಊರಿಗೆ ಬಂದವಳು ನೀರಿಗೆ ಬಾರದೇ ಇದ್ದಾಳೆಯೇ' ಎಂಬ ಗಾದೆ ಮಾತಿನಂತೆ 'ಕ್ಯಾಲೆಂಡರ್‌ಗಾಗಿ ಬಿಕಿನಿ ತೊಟ್ಟವರು ನಾಳೆ ನಮ್ಮ ಚಿತ್ರಗಳಲ್ಲೂ ಬಿಕಿನಿ ತೊಡಲಾರರೇ' ಎಂದು ಆಶಿಸುತ್ತಿದ್ದಾರೆ. ಈ ಫೋಟೋಗಳನ್ನು ನೋಡಿದರೆ ನಮ್ಮ ಕನ್ನಡತಿಯರೂ ಮುಂಬೈ ಬೆಡಗಿಯರಂತೆ ಬ್ಯೂಟಿಫುಲ್ ಮಾತ್ರವಲ್ಲ, ಬಿಂದಾಸ್ ಕೂಡ ಎಂಬುದು ಅರ್ಥವಾಗುತ್ತದೆ.




2011 ಬ್ಯಾಲೆನ್ಸ್ ಶೀಟ್



ಈ ವರ್ಷದಲ್ಲಿ ಕನ್ನಡ ಚಿತ್ರರಂಗದ ಸಾಧನೆಯ ಅಂಕಿ ಅಂಶ ಹೀಗಿದೆ.


2011ರಲ್ಲಿ ಬಿಡುಗಡೆಯಾದದ್ದು 125 ಚಿತ್ರಗಳು. ಆದರೆ ಅವುಗಳಲ್ಲಿ ಸೂಪರ್ ಹಿಟ್ ಆದದ್ದು ಕೇವಲ ಆರು ಚಿತ್ರಗಳು ಮಾತ್ರ. ಹಿಟ್ ಆಗದಿದ್ದರೂ ಬಾಕ್ಸ್ ಆಫೀಸಿನಲ್ಲಿ ಪರವಾಗಿಲ್ಲ ಅನ್ನಿಸಿಕೊಂಡ ಚಿತ್ರಗಳ ಸಂಖ್ಯೆ ಹತ್ತು, ಇನ್ನು ಲಾಭವಿರಲಿ, ತೀರಾ ದೊಡ್ಡ ಲಾಸ್ ಕೂಡ ಮಾಡದಿದ್ದ ಗುಂಪಿಗೆ 31 ಚಿತ್ರಗಳು ಸೇರುತ್ತವೆ. ಆದರೆ ಉಳಿದ ಬರೋಬ್ಬರಿ 78 ಚಿತ್ರಗಳ ನಿರ್ಮಾಪಕರು ತಮ್ಮ ಮನೆ ಮಠ ಕಳೆದುಕೊಂಡು ಚಿತ್ರರಂಗದಿಂದಲೇ ಓಡಿಹೋಗುವಂತಾಗಿದೆ.

ಈ ವರ್ಷವೂ ನೂರಕ್ಕಿಂತ ಹೆಚ್ಚು ಸಿನಿಮಾಗಳು ನಿರ್ಮಾಣಗೊಂಡಿದ್ದರೂ ಗುಣಾತ್ಮಕವಾಗಿ ಚಿತ್ರರಂಗ ಬೆಳೆದದ್ದು ಅಷ್ಟಕ್ಕಷ್ಟೆ. ಇವತ್ತಿಗೂ ದಯನೀಯ ಸ್ಥಿತಿಯಲ್ಲಿ ತೊಳಲಾಡುತ್ತಿರುವ ಕನ್ನಡ ಚಿತ್ರರಂಗ ಸದ್ಯದಲ್ಲೇ ಸುಧಾರಿಸುವ ಲಕ್ಷಣಗಳು ಕಾಣಿಸುತ್ತಿಲ್ಲ.



ಈ ವರ್ಷ ತೆರೆಕಂಡ ನೂರಕ್ಕಿಂತಲೂ ಹೆಚ್ಚು ಸಿನಿಮಾಗಳಲ್ಲಿ ಕೇವಲ 70 ಚಿತ್ರಗಳನ್ನು ಮಾತ್ರ ಟಿ.ವಿ. ಚಾನಲ್‌ನವರು ಪ್ರಸಾರಕ್ಕೆ ಸರಿಸುಮಾರು 125 ಕೋಟಿ ರೂ.ಗಳನ್ನು ಕೊಟ್ಟು ಖರೀದಿಸಿದ್ದಾರೆ. ಇದರ ಅರ್ಥ ಇನ್ನೂ ಸುಮಾರು 55 ಚಿತ್ರಗಳು ಟಿ.ವಿ. ಚಾನಲ್‌ಗಳಿಗೂ ಮಾರಾಟವಾಗದೆ ನೆನೆಗುದಿಗೆ ಬಿದ್ದಿದೆ ಎಂದಾಯಿತು.

ಈ ವರ್ಷ ನಟ ದರ್ಶನ್ ತನ್ನ ಪತ್ನಿ ವಿಜಯಲಕ್ಷ್ಮಿ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ಜೈಲು ಸೇರಿದ ಪ್ರಕರಣ ಇಡೀ ದೇಶದ ಗಮನ ಸೆಳೆಯಿತು. ಬೇರೆ ಯಾವ ಸಾಧನೆ ಮಾಡದಿದ್ದರೂ ಇಂತಹ ಒಂದು ಕೃತ್ಯದಿಂದಾಗಿ ಕನ್ನಡ ಚಿತ್ರರಂಗದ ಮಾನ ದೇಶದ ಮುಂದೆ ಹರಾಜು ಆಯಿತು ಎಂದರೂ ತಪ್ಪಾಗಲಾರದು. ವಿಪರ್ಯಾಸವೆಂದರೆ, ಈ ವರ್ಷದ ಅಂತ್ಯದಲ್ಲಿ ಬಿಡುಗಡೆಯಾದ ದರ್ಶನ್ ನಟಿಸಿರುವ 'ಸಾರಥಿ' ಚಿತ್ರ ಈ ವರ್ಷದಲ್ಲೇ ಅತಿ ಹೆಚ್ಚು ಗಳಿಕೆ ಮಾಡಿದ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು.



ಈ ವರ್ಷ ಸೂಪರ್ ಹಿಟ್ ಆದ ಆರು ಚಿತ್ರಗಳ ಪಟ್ಟಿ ನೋಡಿದರೆ ಅವುಗಳಲ್ಲಿ ಮೂರು ಚಿತ್ರಗಳು ರಿಮೇಕ್‌ಗಳು ಎಂಬ ಮತ್ತೊಂದು ದುರಂತ ಕಾಣಿಸುತ್ತದೆ. ಸುದೀಪ್ ನಟಿಸಿದ್ದ 'ಕೆಂಪೇಗೌಡ' ಅಪ್ಪಟ ರಿಮೇಕ್ ಚಿತ್ರವಾದರೆ, 'ವಿಷ್ಣುವರ್ಧನ' ತೆಲುಗು ಚಿತ್ರದಿಂದ ಪ್ರಭಾವಿತವಾದುದು. ಪುನೀತ್ ರಾಜ್‌ಕುಮಾರ್ ನಟಿಸಿದ್ದ 'ಹುಡುಗರು' ಕೂಡ ತಮಿಳು ಚಿತ್ರದ ಜೆರಾಕ್ಸ್ ಕಾಪಿ. ಈ ಮಧ್ಯೆ ಶ್ರೀನಗರ ಕಿಟ್ಟಿ ಮತ್ತು ರಮ್ಯ ಜೋಡಿಯ 'ಸಂಜು ವೆಡ್ಸ್ ಗೀತಾ', ದರ್ಶನ್ ನಟನೆಯ 'ಸಾರಥಿ' ಮತ್ತು ಪುನೀತ್ ರಾಜ್‌ಕುಮಾರ್ ಅಭಿನಯಿಸಿದ್ದ 'ಪರಮಾತ್ಮ' ಎಂಬ ಸ್ವಮೇಕ್ ಚಿತ್ರಗಳು ಗೆದ್ದಿದ್ದರೂ ಇವುಗಳು ತುಂಬಾ ಒಳ್ಳೆಯ ಸಿನಿಮಾಗಳು ಎಂದು ಖಂಡಿತವಾಗಿಯೂ ಕರೆಯಲಾಗುವುದಿಲ್ಲ.



ಈ ವರ್ಷದ ಮತ್ತೊಂದು ವಿಶೇಷತೆಯೆಂದರೆ ಬಾರೀ ಸದ್ದು ಮಾಡಿದ್ದ ಪ್ರೇಮ್-ಶಿವರಾಜ್‌ಕುಮಾರ್ ಜೋಡಿಯ 'ಜೋಗಯ್ಯ', ವಿಜಿ ಮತ್ತು ಶಶಾಂಕ್ ಜೋಡಿಯ 'ಜರಾಸಂಧ' ಹಾಗೂ ಉಪೇಂದ್ರ ಮತ್ತು ಅವರ ಪತ್ನಿ ಪ್ರಿಯಾಂಕ ನಟಿಸಿದ್ದ 'ಶ್ರೀಮತಿ' ಎಂಬ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಹೇಳ ಹೆಸರಿಲ್ಲದಂತೆ ಮುಗ್ಗರಿಸಿದ್ದು.

ಚಿತ್ರರಂಗದ ಬಹುತೇಕ ನಟರು ಈ ವರ್ಷ ಫ್ಲಾಪ್ ಶೋಗಳನ್ನೇ ಕೊಟ್ಟರು. ದಿಗಂತ್, ವಿಜಯ್, ಪ್ರಜ್ವಲ್ ದೇವರಾಜ್, ಯಶ್, ಚಿರಂಜೀವಿ ಸರ್ಜಾ ಮತ್ತು ಗಣೇಶ್ ಅಂತಹ ನಟರ ಪಟ್ಟಿಯಲ್ಲಿ ಕಂಗೊಳಿಸುತ್ತಿದ್ದಾರೆ.

ಚುಂಬಕರಾಣಿಯ ಚೆಡ್ಡಿ-ಬಾಡಿ!



ನಮ್ಮ ರಾಜ್ಯದ ಸಗಣಿ ಸ್ವಾಮಿಗೆ ತುಂಬಾ ಪ್ರಿಯವಾದ ಹಿಂದಿ ಸಿನಿಮಾಗಳ ಬಿಚ್ಚಮ್ಮ ಮಲ್ಲಿಕಾ ಶೆರಾವತ್ ಮೊನ್ನೆ ಒಂದು ಭಯಂಕರ ಡ್ರೆಸ್ ಹಾಕಿಕೊಳ್ಳುವ ಮೂಲಕ ಸುದ್ದಿ ಮಾಡಿದ್ದಾಳೆ.

ಸುದ್ದಿ ಮಾಡುವುದು ಮಲ್ಲಿಕಾಳಿಗೆ ತುಂಬಾ ಸುಲಭ. ಆಕೆ ನಟಿಸಿದ 'ಮರ್ಡರ್' ಮತ್ತು 'ಕ್ವಾಯಿಶ್' ಚಿತ್ರಗಳಲ್ಲಿ ತನ್ನ ಸಹ ನಟರನ್ನು ಬರೋಬ್ಬರಿ 17 ಬಾರಿ ಚುಂಬಿಸುವ ಮೂಲಕವೇ ಸುದ್ದಿ ಮಾಡಿ ಎಲ್ಲರ ಗಮನ ಸೆಳೆದವಳು.

ಇಂತಹ ಮಲ್ಲಿಕಾ ಇತ್ತೀಚೆಗಿನ ತನಕ ತಾನು ಹಾಲಿವುಡ್‌ನಲ್ಲಿ ತುಂಬಾ ಬಿಜಿಯಾಗಿದ್ದೇನೆ ಎನ್ನುತ್ತಿದ್ದಳು. ಆದರೆ ವಾಸ್ತವವಾಗಿ ಆಕೆ ಒಂದೆರಡು ಇಂಗ್ಲಿಷ್ ಚಿತ್ರಗಳಲ್ಲಿ ಮಾತ್ರ ನಟಿಸಿದ್ದಾಳೆ. ಪಾಪ, ಆ ಚಿತ್ರಗಳ ಬಗ್ಗೆ ಈಕೆ ಕೊಟ್ಟ ಮತ್ತು ಪಡೆದ ಪ್ರಚಾರ ನೋಡಿದರೆ ಅವು ಬಾಕ್ಸ್ ಆಫೀಸಿನಲ್ಲಿ ಭಯಂಕರ ಜಯ ಸಾಧಿಸಬೇಕಿತ್ತು. ಆದರೆ ಅವು ಹೇಳಹೆಸರಿಲ್ಲದಂತೆ ಮುಳುಗಿದವು.

ಅದೇನೇ ಇರಲಿ, ಮಲ್ಲಿಕಾ ಹಿಂದಿ ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಿದ್ದಕ್ಕಿಂತ ಐಟಮ್ ನಂಬರ್‌ಗಳಲ್ಲಿ ಕಾಣಿಸಿಕೊಂಡಿದ್ದೇ ಹೆಚ್ಚು. ಅವೆಲ್ಲವೂ ಹಿಟ್ ನಂಬರ್‌ಗಳಾಗಿ ಆಕೆಗೆ ಅಪಾರ ಬೇಡಿಕೆ ತಂದುಕೊಟ್ಟಿದೆ. ಇವತ್ತು ಮಲ್ಲಿಕಾ ಖಾಸಗಿ ಸಮಾರಂಭಗಳಲ್ಲಿ ಕೇವಲ ಇಪ್ಪತ್ತು ನಿಮಿಷಗಳ ಕಾಲ ಕುಣಿಯುವುದಕ್ಕೆ ಎಷ್ಟು ಸಂಭಾವನೆ ಪಡೆಯುತ್ತಾಳೆ ಗೊತ್ತಾ? ಅರವತ್ತು ಲಕ್ಷ ರೂಪಾಯಿ!

ಮೊನ್ನೆ ಮಲ್ಲಿಕಾ ಧರಿಸಿದ್ದ ಉಡುಪಿಗೆ ಬರೋಣ. ಅದರ ಚಿತ್ರವನ್ನು ಇಲ್ಲಿ ನೀಡಿದ್ದೇವೆ. ಇದನ್ನು ನೋಡಿ ನೀವೇ ಹೇಳಿ, ಇದು ಚೆಡ್ಡಿ-ಬಾಡಿಯ ಮೇಲೆ ಹಾಕಿಕೊಂಡಿರುವ ಬಿಗಿಯಾದ ಸೊಳ್ಳೆ ಪರದೆಯೋ ಅಥವಾ ಬಿಗಿಯಾದ ಸೊಳ್ಳೆ ಪರದೆಯುಡಿ ಹಾಕಿಕೊಂಡಿರುವ ಚೆಡ್ಡಿ-ಬಾಡಿಯೋ?! ಥೀ ಕಳ್ಳಿ!!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail : lankesh70@rediffmail.com